
# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ SUCI(C)

ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಒಳ ಪುಟಗಳಲ್ಲಿ............


- ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆ 2023.......02
- ತಮಿಳುನಾಡು ಅತಿವೃಷ್ಟಿ : ಜನರ ನೆರವಿಗೆ ಧಾವಿಸದ ಸರ್ಕಾರಗಳು.......04
- ಲೆನಿನ್ ಮರಣ ಶತಾಬ್ದಿ : ಪುಸ್ತಕ ಬಿಡುಗಡೆ ಕಾರ್ಯಕ್ರಮ.......05
- ಎಐಡಿವೈಓ : ನಿರುದ್ಯೋಗದ ವಿರುದ್ಧ ರಾಜ್ಯ ಮಟ್ಟದ ಧರಣಿ.......06
- ಎಐಎಂಎಸ್‌ಎಸ್ : 7ನೇ ರಾಜ್ಯ ಮಟ್ಟದ ಸಮ್ಮೇಳನ.......07



ಸಂಪುಟ: 36 । ಸಂಚಿಕೆ: 12 । ಫೆಬ್ರವರಿ 2024 । ಬೆಲೆ: ರೂ. 7/-


# ಕಾರ್ಮಿಕ ವರ್ಗದ ಮಹಾನ್ ನಾಯಕ ಲೆನಿನ್

## ಭವ್ಯ ಬದುಕಿನ ಯಶೋಗಾಥೆ

ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಹಾಗೂ ಸೋವಿಯತ್ ಕ್ರಾಂತಿಯ ಶಿಲ್ಪಿಯಾದ ಅಸಾಮಾನ್ಯ ಲೆನಿನ್, 1924ರ ಜನವರಿ 21ರಂದು ಕೊನೆಯುಸಿರೆಳೆದರು. ಸಾಮ್ರಾಜ್ಯವಾದ ಮತ್ತು ಕಾರ್ಮಿಕ ವರ್ಗದ ಕ್ರಾಂತಿಯ ಯುಗದಲ್ಲಿ ಮಾರ್ಕ್ಸ್‌ವಾದಿ ತತ್ವಶಾಸ್ತ್ರದ ಸರಿಯಾದ ತಿಳುವಳಿಕೆಯನ್ನು ನೀಡಿದವರು ಮಹಾನ್ ಲೆನಿನ್. ಪ್ರಸಕ್ತ ವರ್ಷವು ಅವರ ಸ್ಮರಣ ಶತಾಬ್ದಿ ವರ್ಷವಾಗಿದೆ. ಅವರ ನೈಜ ಅನುಯಾಯಿಗಳಾಗಿ ಇಂದಿನ ಕ್ರಾಂತಿಕಾರಿ ಬದಲಾವಣೆಯನ್ನು ಆಶಿಸುವ ಎಲ್ಲರೂ, ಹಳತಾಗಿರುವ ಹಾಗೂ ಅತ್ಯಂತ ಪ್ರತಿಗಾಮಿಯಾಗಿರುವ ಬಂಡವಾಳವಾದ-ಸಾಮ್ರಾಜ್ಯವಾದದ ಸಂಪೂರ್ಣ ವಿನಾಶವನ್ನು ಬಯಸುವ ಎಲ್ಲರೂ ಸಹ, ಈ ಮಹಾನ್ ಚೇತನವನ್ನು ನೆನೆಯಬೇಕು. ಅವರು ತೋರಿಸಿಕೊಟ್ಟಿರುವ ಸತ್ಯವನ್ನು ವಿವಿಧ ದೇಶಗಳಲ್ಲಿ ಅಸ್ತಿತ್ವದಲ್ಲಿರುವ ನಿರ್ದಿಷ್ಟವಾದ ಸನ್ನಿವೇಶಗಳಲ್ಲಿ ಅನ್ವಯಿಸಿ, ವಿಶ್ವ ಕ್ರಾಂತಿಯ ವೇಗವನ್ನು ತೀವ್ರಗೊಳಿಸಲು ಸಿದ್ಧರಾಗಬೇಕು. ಮಾರ್ಕ್ಸ್-ಎಂಗೆಲ್ಸ್-ಲೆನಿನ್-ಸ್ಟಾಲಿನ್-ಮಾವೋ ಝೆಡಾಂಗ್‌ರ ಯೋಗ್ಯ ಅನುಯಾಯಿಯಾದ ಕಾಮ್ರೇಡ್ ಶಿವದಾಸ್ ಘೋಷ್‌ರಿಂದ ಜನ್ಮತಳೆದ ನಮ್ಮ ಪಕ್ಷವು ಈ ಕಾರ್ಯವನ್ನು ಬಹುಮುಖ್ಯವಾದದ್ದು ಎಂದು ಪರಿಗಣಿಸಿದೆ. ಲೆನಿನ್ ಬದುಕು ಮತ್ತು ಸಂಘರ್ಷದ ಸಂಕ್ಷಿಪ್ತ ಗಾಥೆಯನ್ನು ಪ್ರಕಟಿಸುವ ಜವಾಬ್ದಾರಿಯನ್ನು ನಾವು ತೆಗೆದುಕೊಂಡಿದ್ದೇವೆ. ಅದರ ಮೊದಲ ಕಂತು ಇಲ್ಲಿದೆ.

### ಲೆನಿನ್ ಬಾಲ್ಯ

ಲೆನಿನ್‌ರ ಪೂರ್ಣ ಹೆಸರು ವ್ಲಾದಿಮಿರ್ ಇಲ್ಯಿಚ್ ಉಲ್ಯಾನೋವ್. ಜಾರ್ ಆಡಳಿತವಿದ್ದ ರಷ್ಯಾದ ವೋಲ್ಗಾ ನದಿದಂಡೆಯ ಮೇಲಿನ ನಗರ ಸಿಂಬ್ರಿಸ್ಕ್‌ನಲ್ಲಿ 1870ರ ಏಪ್ರಿಲ್ 22ರಂದು ಲೆನಿನ್ ಜನನವಾಯಿತು. ಬೇರೆಲ್ಲ ಮಹಾನ್ ವ್ಯಕ್ತಿಗಳಂತೆ, ಬಾಲ್ಯದಿಂದಲೇ ಲೆನಿನ್‌ರ ಮನಸ್ಸು ಸದಾ ಸತ್ಯಾನ್ವೇಷಣೆಯಲ್ಲಿ ತೊಡಗುತ್ತಿತ್ತು. ಒಮ್ಮೆ ಬಾಲಕ ಲೆನಿನ್ ಬೇರೆ ಮಕ್ಕಳ ಜೊತೆ ಮೈಮರೆತು ಆಟ ಆಡುತ್ತಾ, ತನ್ನ ತುಂಟಾಟದಲ್ಲಿ ಗಾಜಿನ ಹೂಜಿಯೊಂದನ್ನು ಉರುಳಿಸಿ ಒಡೆದು ಹಾಕಿದರು. ಆ ಕೃತ್ಯವನ್ನು ಬಹಿರಂಗಗೊಳಿಸದೆ, ಮುಗುಮ್ಮಾಗಿ ತೆಪ್ಪಗಿದ್ದು, ಮೂರು ದಿನಗಳು ಕಳೆದ ನಂತರ ತಡೆಯಲಾಗದೆ ತನ್ನ ತಾಯಿಯ ಬಳಿ ತನ್ನ ತಪ್ಪನ್ನು ವಿವರಿಸಿ ಈ ಮಾತನ್ನು ಚಿಕ್ಕಮ್ಮನಿಗೆ ತಾನು ಹೇಳಲಿಲ್ಲ ಎಂದು ನೊಂದುಕೊಂಡ ಸಂದರ್ಭವನ್ನು ಅವರ ಹಿರಿಯ ಸಹೋದರಿ ನೆನಪಿಸಿಕೊಂಡದ್ದು ಇದೆ.

ವಿದ್ಯಾರ್ಥಿಯಾಗಿ ಲೆನಿನ್ ಬಹಳ ತೀಕ್ಷ್ಣಮತಿಯಾಗಿದ್ದರು. ಅವರ ಹಿರಿಯ ಸಹೋದರ ಸಾಶ ಎಂಬ ಉಪನಾಮ ಹೊಂದಿದ್ದ ಅಲೆಕ್ಸಾಂಡರ್ ಉಲ್ಯಾನೋವ್‌ರ ಪ್ರಭಾವವು ಅವರ ಮೇಲೆ ಗಾಢವಾಗಿತ್ತು. ಚಿಕ್ಕ ವಯಸ್ಸಿನಲ್ಲಿ ಸ್ವಲ್ಪ ದುಡುಕಿನ ಸ್ವಭಾವವನ್ನು ಹೊಂದಿದ್ದ ಲೆನಿನ್‌ಗೆ ವಿರುದ್ಧವಾಗಿ ಅವರ ಸಹೋದರ ಸಾಶ ಬಹು ತಾಳ್ಮೆಯ ಜವಾಬ್ದಾರಿಯುತ ಅರಿವುಳ್ಳ ವ್ಯಕ್ತಿಯಾಗಿದ್ದರು. ಸಹೋದರನ ವ್ಯಕ್ತಿತ್ವದಿಂದ ಲೆನಿನ್ ಬಹುವಾಗಿ ಆಕರ್ಷಿತರಾಗಿದ್ದರು. ಅವರ ತಂಗಿ ಓಲಿಯಾ ಬಹುತಾಳ್ಮೆಯಿಂದ ಪಿಯಾನೋ ನುಡಿಸುವುದನ್ನು ಅವರು ಗಮನಿಸುತ್ತಿದ್ದರು. ಹೀಗೆ ಗಮನಿಸುತ್ತಾ ಇತರರಿಂದ ಒಳ್ಳೆಯದನ್ನು ಗ್ರಹಿಸುವ ಗುಣ ಲೆನಿನ್‌ರ ವ್ಯಕ್ತಿತ್ವದ ಅವಿಭಾಜ್ಯ ಭಾಗವಾಗಿತ್ತು ಎಂದು ಮುಂದೆ ಅವರ ಹಿರಿಯ ಸಹೋದರಿ ನೆನೆದಿದ್ದಾರೆ.

ರಷ್ಯಾದ ನಿರಂಕುಶ ಪ್ರಭುತ್ವವನ್ನು ಕಿತ್ತೊಗೆಯಬೇಕೆನ್ನುವ ಸಾಶರ ಬಲವಾದ ನಿರ್ಧಾರವು ತರುಣ ಸಹೋದರ ಲೆನಿನ್ ಮೇಲೆ ಗಾಢವಾದ ಪರಿಣಾಮವನ್ನು ಬೀರಿತ್ತು. ಜಾರ್ ದೊರೆ ಎರಡನೇ ಅಲೆಕ್ಸಾಂಡರ್‌ನ ಹತ್ಯೆಯಾಗಿ ಸರಿಯಾಗಿ ಆರು ವರ್ಷಗಳ ನಂತರ ಮಾರ್ಚ್ 1887ರಲ್ಲಿ ಒಂದು ದಿನವನ್ನು ನಿಗದಿ ಪಡಿಸಿ, ಅಂದಿನ ಜಾರ್ ದೊರೆಯಾಗಿದ್ದ ಮೂರನೇ ಅಲೆಕ್ಸಾಂಡರ್‌ನ ಹತ್ಯೆಗೆ ಉಲ್ಯಾನೋವ್ ಮತ್ತು ಇತರ 14 ಮಂದಿ ಯೋಜನೆಯನ್ನು ರೂಪಿಸಿದ್ದರು. ಆದರೆ ಆ ಯೋಜನೆಯು ವಿಫಲವಾಯಿತು. ಜಾರ್‌ನ ಆಡಳಿತಕ್ಕೆ ಸೆರೆ ಸಿಕ್ಕಿಬಿದ್ದ ಎಲ್ಲರನ್ನೂ ಎರಡು ತಿಂಗಳ ನಂತರ ಗಲ್ಲಿಗೇರಿಸಲಾಯಿ.ತು. ಸಾಶ

8ನೇ ಪುಟಕ್ಕೆ...

# ಬಣ್ಣದ ಮಾತುಗಳ, ಜನ ವಂಚಕ ಕೇಂದ್ರ ಬಜೆಟ್ : ಎಸ್‌ಯುಸಿಐ(ಸಿ)

**ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಈ ಕೆಳಗಿನ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿರುತ್ತಾರೆ**

ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿತ್ತ ಸಚಿವರು ಮತ್ತೊಂದು ಬಂಡವಾಳಶಾಹಿ ಪರ ಬಜೆಟ್ ಮಂಡಿಸಿದ್ದಾರೆ. ವಿಕಸಿತ ಭಾರತಕ್ಕೆ ಇದು ಅಡಿಗಲ್ಲು ಎಂದು ಸ್ವತಹ ಮೋದಿಯವರೇ ಬಣ್ಣಿಸಿದ್ದಾರೆ.

ವಿತ್ತ ಸಚಿವರು ಈ ಬಜೆಟ್ ಬಡವರು, ಯುವಜನರು, ಮಹಿಳೆಯರು ಮತ್ತು ರೈತರಿಗೆ ಒತ್ತು ನೀಡಿದೆ ಎಂದು ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದಾರೆ. ಇದು ಕೇವಲ ಬಾಯುಪಚಾರವೇ ಹೊರತು ವಾಸ್ತವದಿಂದ ದೂರವಾಗಿದೆ. ಕನಿಷ್ಠ ಬೆಂಬಲ ಬೆಲೆ(MSP) ಬಗ್ಗೆ ಮಾತು ಬಂದಿದೆಯಾದರೂ ಕೃಷಿ ಕ್ಷೇತ್ರಕ್ಕೆ ನೀಡಿದ ಮೊತ್ತದಲ್ಲಿ ಯಾವುದೇ ಹೆಚ್ಚಳವಿಲ್ಲ. ಒಂದು ಕೋಟಿ ಮನೆಗಳಿಗೆ 300 ಯೂನಿಟ್ ಉಚಿತ ವಿದ್ಯುತ್ ಗ್ಯಾರಂಟಿ ಎಂದು ಘೋಷಣೆ ಮಾಡಲಾಗಿದೆ. ಆದರೆ ಅದಕ್ಕೆ ಪ್ರತಿ ಮನೆಯಲ್ಲಿ ಸೋಲಾರ್ ಫಲಕ ಅಳವಡಿಸಿಕೊಳ್ಳಬೇಕು. ಆ ವೆಚ್ಚವನ್ನು ಯಾರು ಭರಿಸುತ್ತಾರೆ ಎಂಬುದು ಸ್ಪಷ್ಟವಿಲ್ಲ. ಏಕೆಂದರೆ ಒಂದು ಕೋಟಿ ಮನೆಗಳಿಗೆ ಮೀಸಲಾದ ಬಜೆಟ್ ಕೇವಲ ರೂ. 4550ಕೋಟಿ ಮಾತ್ರ. ಅಂದರೆ ಪ್ರತಿ ಮನೆಗೆ ರೂ. 4550. ಇದು ವಂಚನೆಯಲ್ಲದೆ ಇನ್ನೇನು? ಅದೇ ಕುಡಿಯುವ ನೀರನ್ನು ವ್ಯಾಪಾರೀಕರಣಗೊಳಿಸುವ ಜಲಜೀವನ್ ಮಿಷನ್ ಯೋಜನೆಗೆ ರೂ.70,163ಕೋಟಿಯನ್ನು ನೀಡಲಾಗಿದೆ.

ರೈತರಿಗೆ ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ಕಡಿತ ಮಾಡಲಾಗಿದೆ. ಇದು ರೈತರ ಉತ್ಪಾದನಾ ವೆಚ್ಚವನ್ನು ಹೆಚ್ಚಿಸುವುದಲ್ಲದೆ ಆಹಾರ ಧಾನ್ಯಗಳ ಬೆಲೆ ಏರಿಕೆಯಾಗಲಿದೆ. ಇನ್ನೊಂದೆಡೆ, ಪಡಿತರ ವ್ಯವಸ್ಥೆಯಲ್ಲಿ ನೀಡುತ್ತಿದ್ದ ಆಹಾರ ಸಬ್ಸಿಡಿಯ ಪ್ರಮಾಣವನ್ನು ಹೆಚ್ಚಿಸಲಾಗಿದೆ ಎಂದು ಕೊಚ್ಚಿಕೊಂಡಿದ್ದಾರೆ. ಆದರೆ 2022-23ರ ವಾಸ್ತವ ವೆಚ್ಚವಾದ ರೂ.2,72,872 ಕೋಟಿಗೆ ಹೋಲಿಸಿದರೆ ಈ ಬಜೆಟಿನಲ್ಲಿ ನೀಡಿದ ರೂ. 2,05,520ಕೋಟಿ ದೊಡ್ಡ ಕಡಿತವಾಗಿದೆ.

ವಿವಿಧ ಮೂಲಸೌಕರ್ಯ ಯೋಜನೆಗಳಿಗೆ ರೂ. 11 ಲಕ್ಷ ಕೋಟಿಗೂ ಅಧಿಕ ಮೊತ್ತವನ್ನು ನೀಡಲಾಗಿದ್ದು ಇದು ದೊಡ್ಡ ಕಂಪನಿಗಳ, ಗುತ್ತಿಗೆದಾರರ ತಿಜೋರಿ ತುಂಬಿಸಲಿದೆ. ಜನರ ತೆರಿಗೆಯಿಂದ ನಿರ್ಮಾಣವಾಗುವ ಹೆದ್ದಾರಿ, ಮೇಲ್ಸೇತುವೆ ಮೊದಲಾದ ಈ ಮೂಲಸೌಕರ್ಯಗಳ ಬಳಕೆಗೆ ಜನತೆ ಮತ್ತೆ ಸುಂಕ ತೆರಬೇಕಾಗುತ್ತದೆ. ಇದಲ್ಲದೆ, ಬಜೆಟಿನಲ್ಲಿ ರಕ್ಷಣಾ ಇಲಾಖೆಗೆ ಅತಿಹೆಚ್ಚು ಹಣ ನೀಡಲಾಗಿದೆ. ರಕ್ಷಣಾ ಉತ್ಪಾದನೆಯ ಖಾಸಗೀಕರಣ ಮತ್ತು ಸರ್ಕಾರ ಮಿಲಿಟರಿಗೆ ವೆಚ್ಚ ಮಾಡುವ ಮೂಲಕ ಕೃತಕ ಮಾರುಕಟ್ಟೆ ಸೃಷ್ಟಿಸುತ್ತಿರುವುದು ಸ್ಪಷ್ಟವಾಗುತ್ತದೆ. ರೈಲ್ವೆಗೆ ನೀಡಿದ ಬಜೆಟಿನ ಬಹುಪಾಲು ವಂದೇ ಭಾರತ್‌ನಂತಹ ಐಷಾರಾಮಿ ರೈಲುಗಳ ಹೆಚ್ಚಳಕ್ಕೆ ಮೀಸಲಾಗಿದೆಯೇ ಹೊರತು ಸಾಮಾನ್ಯ ರೈಲುಗಳ ಸೇವೆಯನ್ನು ಉತ್ತಮಪಡಿಸುವ ಉದ್ದೇಶವಿಲ್ಲ.

ಗ್ರಾಮೀಣ ಜನರ ಬಹುಬೇಡಿಕೆಯ ಉದ್ಯೋಗ ಖಾತ್ರಿ ಯೋಜನೆಗೆ ಬಜೆಟ್ಟನ್ನು ಏರಿಸಲಾಗಿದೆ ಎಂದು ವಿತ್ತ ಸಚಿವರು ಹೇಳುತ್ತಾರೆಯಾದರೂ, ವಾಸ್ತವದಲ್ಲಿ ಈಗಾಗಲೇ ಕಳೆದ ಬಜೆಟಿನ ನೈಜ ವೆಚ್ಚ (ರೂ.88,309ಕೋಟಿ) ಈ ಬಾರಿ ನಿಗದಿಪಡಿಸಿದ್ದಕ್ಕಿಂತ (ರೂ.86,000ಕೋಟಿ) ಹೆಚ್ಚಾಗಿದೆ.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಹಣ ನೀಡಲಾಗಿದೆ ಎಂದು ತೋರಿಸಲಾಗಿದೆ. ಆದರೆ ಕಳೆದ ಕೆಲವು ವರ್ಷಗಳ ಅಂಕಿಅಂಶಗಳನ್ನು ಗಮನಿಸಿದರೆ, ಈ ಅತ್ಯವಶ್ಯಕ ರಂಗಗಳಿಗೆ ಮೀಸಲಾದ ಹಣವನ್ನು ಖರ್ಚು ಮಾಡಲಾಗಿಲ್ಲ. ಉದಾಹರಣೆಗೆ 2022-23ರ ಬಜೆಟಿನಲ್ಲಿ ಶಾಲಾ ಶಿಕ್ಷಣಕ್ಕೆ ರೂ. 72,473ಕೋಟಿ ನಿಗದಿಯಾದರೂ, ವಾಸ್ತವದಲ್ಲಿ ಮಾಡಿದ ವೆಚ್ಚ ರೂ. 58,639ಕೋ. ಮಾತ್ರ. ಇನ್ನು, ಒಂದು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿರುವ ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರ ಗೌರವ ಧನದಲ್ಲಿ ಯಾವ ಹೆಚ್ಚಳವನ್ನು ಮಾಡದೆ, ಈಗಾಗಲೇ ಜಾರಿಯಲ್ಲಿರುವ, ಜನರಿಗೆ ಉಪಯೋಗಕ್ಕಿಲ್ಲದ ಆಯುಷ್ಮಾನ್ ಭಾರತ್ ಯೋಜನೆಗೆ ಇವರೆಲ್ಲ ಅರ್ಹರು ಎಂದು ಘೋಷಿಸಿರುವುದು ವಿಡಂಬನೆಯಲ್ಲದೆ ಇನ್ನೇನೂ ಅಲ್ಲ.

ಒಟ್ಟಿನಲ್ಲಿ 47.66 ಲಕ್ಷ ಕೋಟಿ ರೂ.ಗಳ ಈ ಮಧ್ಯಂತರ ಬಜೆಟ್ ದೇಶದ ಕಾರ್ಪೊರೇಟ್ ಬಂಡವಾಳದ ವಿಕಸನಕ್ಕೆ, ಬಡಜನರ ಲೂಟಿಗೆ ಬೇಕಾದ ನೀಲನಕ್ಷೆಯೆಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಡುತ್ತದೆ. ದೇಶದ ಜನತೆ ಬಣ್ಣದ ಮಾತುಗಳಿಗೆ ಮರುಳಾಗದೆ, ಕಟು ಸತ್ಯವನ್ನು ಅರ್ಥ ಮಾಡಿಕೊಂಡು ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡುತ್ತದೆ.

## ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆ 2023

# ಮಾಧ್ಯಮ ಸ್ವಾತಂತ್ರ್ಯದ ಮೇಲೆ ಮತ್ತೊಂದು ಮಾರಣಾಂತಿಕ ದಾಳಿ

ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ನವೆಂಬರ್ 10, 2023 ರಂದು ಕರಡು ಬ್ರಾಡ್‌ಕಾಸ್ಟಿಂಗ್ ಸೇವೆಗಳ (ನಿಯಂತ್ರಣ) ಮಸೂದೆ 2023 ಅನ್ನು ಬಿಡುಗಡೆ ಮಾಡಿತು, ಇದು ಭಾರತೀಯ ಕೇಬಲ್ ನಿಯಂತ್ರಣ ಕಾನೂನುಗಳ ನಿಯಂತ್ರಕ ವ್ಯಾಪ್ತಿಯನ್ನು ವಿಸ್ತರಿಸಲು ಹವಣಿಸುತ್ತಿದೆ. OTT (ಓವರ್-ದಿ-ಟಾಪ್) ಮತ್ತು ಡಿಜಿಟಲ್ ಸುದ್ದಿ ಮಾಧ್ಯಮಗಳನ್ನು ಇದರ ನಿಯಂತ್ರಣಕ್ಕೆ ತರಲು ಹೊರಟಿದೆ. ಹಾಗೂ 9 ಡಿಸೆಂಬರ್ 2023 ರ ಒಳಗಾಗಿ ಈ ಕುರಿತಾಗಿ ಸಂಬಂಧಿತರೆಲ್ಲರ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

ಈ ಮಸೂದೆಯು ಪ್ರಸ್ತುತ ಅಸ್ತಿತ್ವದಲ್ಲಿರುವ ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ನಿಯಂತ್ರಣ) ಕಾಯಿದೆ, 1995 ಮತ್ತು ದೇಶದ ಪ್ರಸಾರ ವಲಯವನ್ನು ಪ್ರಸ್ತುತ ನಿಯಂತ್ರಿಸುತ್ತಿರುವ ಇತರೆ ಮಾರ್ಗಸೂಚಿಗಳನ್ನು ಇದು ಸ್ಥಳಾಂತರಿಸುತ್ತದೆ. ಈ ಕಾಯ್ದೆಯು "ಪ್ರಸಾರ" (ಬ್ರಾಡ್‌ಕಾಸ್ಟಿಂಗ್) ಎಂದರೆ ಒಬ್ಬರಿಂದ ಹಲವರಿಗೆ, ಸಾಮಾನ್ಯ ಜನರಿಗೆ ಅಥವಾ ಚಂದಾದಾರರಿಗೆ ಬ್ರಾಡ್‌ಕಾಸ್ಟಿಂಗ್ ನೆಟ್‌ವರ್ಕ್ ಮೂಲಕ ಶ್ರಾವ್ಯ (ಆಡಿಯೊ), ದೃಶ್ಯ ಅಥವಾ ಶ್ರಾವ್ಯ-ದೃಶ್ಯ ಕಾರ್ಯಕ್ರಮಗಳನ್ನು ಕೇಳಲು ಅಥವಾ ವೀಕ್ಷಿಸಲು ಲಭ್ಯವಾಗುವಂತೆ ಮಾಡುವುದು ಎಂದು ವ್ಯಾಖ್ಯಾನಿಸುತ್ತದೆ. ಹಾಗಾದಲ್ಲಿ ಇಂದು ಜಾಲತಾಣವನ್ನು ಬಳಸಿಕೊಂಡು ಏಕಕಾಲಕ್ಕೆ ಹಲವರಿಗೆ ಸುದ್ದಿಗಳನ್ನು ತಲುಪಿಸುವ ಮಾಧ್ಯಮಗಳಾಗಿರುವ ವಾಟ್ಸಾಪ್, ಟೆಲಿಗ್ರಾಮ್ ಮೆಸೆಂಜರ್ ಮತ್ತು ಸಿಗ್ನಲ್ ಪ್ರೈವೇಟ್ ಮೆಸೆಂಜರ್‌ಗಳ ಮೂಲಕ ಯಾವುದೇ ಸಂದೇಶ ಕಳುಹಿಸುವಿಕೆ ಅಥವಾ ಆಡಿಯೋ, ವೀಡಿಯೊಗಳು ಅಥವಾ ದೃಶ್ಯ ಸಂವಹನಗಳೆಲ್ಲವೂ ಇನ್ನು ಮುಂದೆ ಕಾಯ್ದೆಯ ಸೆನ್ಸಾರ್‌ಶಿಪ್ ಅಡಿ ಬರುತ್ತವೆ. ಯೂಟ್ಯೂಬ್, ನೆಟ್‌ಫ್ಲಿಕ್ಸ್ ಮತ್ತು ಇತರ OTT ಪ್ಲಾಟ್‌ಫಾರ್ಮ್‌ಗಳೂ ಕೂಡ ಅಂತರ್ಜಾಲದ ಮೂಲಕ ಪ್ರಸಾರವಾಗುವುದರಿಂದ ಇನ್ನು ಮೇಲೆ ಇವು ಕೂಡ ಕಾಯ್ದೆ ಅಡಿ ಬರುತ್ತವೆ.

ವಿಪ್ರೋಗ್ರಾಮ್" (ಡ್ರಾಫ್ಟ್ ಪುಟ-6, ಪ್ಯಾರಾ (ಡಿಡಿ) ಎಂದರೆ ಯಾವುದೇ ಆಡಿಯೋ, ದೃಶ್ಯ ಅಥವಾ ಆಡಿಯೋ-ದೃಶ್ಯ ಸಂದೇಶ, ಚಿಹ್ನೆ, ಸಂಕೇತಗಳು, ಬರವಣಿಗೆ, ಜಾಲತಾಣವನ್ನು ಬಳಸಿಕೊಂಡು ಹರಡುವ ಚಿತ್ರಗಳನ್ನು ಪ್ರೋಗ್ರಾಮ್ ಎಂದು ವ್ಯಾಖ್ಯಾನಿಸಲಾಗಿದೆ.

ಅಂದರೆ ಎಲ್ಲಾ ವೈಯಕ್ತಿಕ ಪ್ರಸಾರಕರು, ಯೂಟ್ಯೂಬ್ ಚಾನೆಲ್‌ಗಳು, ಸ್ವತಂತ್ರ ಸುದ್ದಿ ಪ್ರಸಾರಕರು, ವಿಶ್ಲೇಷಣೆಗಳೆಲ್ಲವು ಕಾಯ್ದೆಯ ನಿಯಂತ್ರಣಕ್ಕೊಳಪಡುತ್ತವೆ. ಇದರಿಂದ ಕೇಂದ್ರ ಸರ್ಕಾರದ ನೀತಿಗಳು ಹಾಗೂ ಕ್ರಮಗಳ ಬಗ್ಗೆ ಸ್ವತಂತ್ರವಾಗಿ ಅಭಿವ್ಯಕ್ತಿ ವ್ಯಕ್ತಪಡಿಸುತ್ತಿದ್ದ ಚಾನೆಲ್‌ಗಳು ತಮ್ಮ ಸ್ವಾತಂತ್ರ್ಯ ಕಳೆದುಕೊಳ್ಳುತ್ತವೆ. ಸರ್ಕಾರಕ್ಕೆ ಬೇಕಿರುವ ವ್ಯಾಖ್ಯಾನಗಳನ್ನು ಮಾತ್ರವೇ ಪ್ರಸಾರಗೊಳಿಸಬೇಕಾಗುತ್ತದೆ. ಇಲ್ಲವೇ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಇದು ಸಾಮಾಜಿಕ ಜಾಲತಾಣಗಳು ಹಾಗೂ ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಘೋರ ಆಕ್ರಮಣವಾಗಿದೆ. ಸರ್ಕಾರದ ಪೋಷಣೆ ಪಡೆಯುತ್ತಿರುವ ಸುದ್ದಿ ಮಾಧ್ಯಮಗಳು, ಅಂದರೆ ಗೋದಿ-(ಆಡಳಿತಗಾರರ ಮಡಿಲಿನಲ್ಲಿರುವ) ಮೀಡಿಯಾ ಕರ್ತವ್ಯ ಮರೆತಿರುವಾಗ ಸ್ವತಂತ್ರ ಮಾಧ್ಯಮಗಳು, ಯೂಟೂಬ್ ಚಾನೆಲ್‌ಗಳು ಸತ್ಯ ಹೊರತರುವ ಕೆಲಸ ಮಾಡುತ್ತಿರುವುದರ ಕುರಿತು ಕೇಂದ್ರ ಸರ್ಕಾರಕ್ಕೆ ಆತಂಕವಿದೆ. ಅಂತೆಯೇ ಅವುಗಳ ಬಾಯಿ ಮುಚ್ಚಿಸಲು ಈ ಕಾಯ್ದೆಯನ್ನು ತರುತ್ತಿದೆ.

ಎಲ್ಲಾ ಪ್ರಸಾರ ಕಾರ್ಯಕ್ರಮಗಳು, ಕಾರ್ಯಕ್ರಮ ಸಂಹಿತೆ ಮತ್ತು ಜಾಹೀರಾತು ಸಂಹಿತೆಗಳಿಗೆ ಬದ್ಧವಾಗಿರುವುದರ ಬಗ್ಗೆ ಸ್ವಯಂ ಪ್ರಮಾಣೀಕರಣಕ್ಕಾಗಿ ಕಾಯ್ದೆಯಲ್ಲಿನ ಪ್ರಸ್ತಾವನೆಯಂತೆ "ಸಾರಾಂಶ ಮೌಲ್ಯಮಾಪನಾ ಸಮಿತಿ"ಗಳ (CEC) ಅಡಿ ಬರಲೇಬೇಕು. CEC ಪುರಸ್ಕರಿಸಿದ ಕಾರ್ಯಕ್ರಮಗಳನ್ನು ಮಾತ್ರವೇ ಪ್ರಸಾರ ಮಾಡಬೇಕು. ಕಾರ್ಯಕ್ರಮ ಸಂಹಿತೆ ಮತ್ತು ಜಾಹೀರಾತು ಸಂಹಿತೆಗಳ ಅನುಸರಣೆ ಹಾಗೂ ಉಲ್ಲಂಘನೆ ಮತ್ತು ಸ್ವಯಂ ನಿಯಂತ್ರಣದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಲು ಬ್ರಾಡ್‌ಕಾಸ್ಟಿಂಗ್ ಸಲಹಾ ಮಂಡಳಿಯನ್ನು ರಚಿಸಲಾಗುವುದು. ಇದು ಪರಿಶೀಲನೆ, ನಿರ್ಬಂಧನೆ, ಮೇಲ್ವಿಚಾರಣೆ ಮತ್ತು ಪ್ರಸರಣದ ಸಾಮಗ್ರಿಗಳನ್ನು ವಶಪಡಿಸಿಕೊಳ್ಳುವ ಅವಕಾಶಗಳನ್ನು ಹೊಂದಿರುತ್ತದೆ. ಈ ಕೌನ್ಸಿಲ್, ಅದರ ಅಧ್ಯಕ್ಷರ ನೇತೃತ್ವದಲ್ಲಿ ಕೆಲಸ ನಿರ್ವಹಿಸಲಿದೆ. ಮನೋರಂಜನೆ, ಮಾಧ್ಯಮ, ಪ್ರಸರಣಾ ಕ್ಷೇತ್ರದಲ್ಲಿ 25 ಕ್ಕೂ ಹೆಚ್ಚು ವರ್ಷ ಕೆಲಸ ನಿರ್ವಹಿಸಿರುವವರನ್ನು ಕೇಂದ್ರ ಸರ್ಕಾರ ಅಧ್ಯಕ್ಷರನ್ನಾಗಿ ನೇಮಕ ಮಾಡುತ್ತದೆ. ಕೌನ್ಸಿಲ್ ಹಾಗೂ ಅಧ್ಯಕ್ಷರ ನೇಮಕಾತಿ ಕುರಿತಾಗಿನ ನಿಯಮಾವಳಿಯನ್ನೂ ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ ಹಾಗೂ ಅದರ ಕಾರ್ಯ ಚಟುವಟಿಕೆಯ ನಿಯಮಾವಳಿಗಳನ್ನೂ ರಚಿಸುತ್ತದೆ. ಹೀಗೆ ಇದು ಸಂಪೂರ್ಣವಾಗಿ ಸರ್ಕಾರದ ನಿಯಂತ್ರಣಕ್ಕೊಳಗಾಗುತ್ತದೆ.

ಅಲ್ಲದೇ ಅಧಿನಿಯಮ 33ರ ಪ್ರಕಾರ ನಿಯಮ ಉಲ್ಲಂಘಿಸುವವರಿಗೆ ಅವರ ಆದಾಯಕ್ಕೆ ತಕ್ಕಂತೆ ಶಿಕ್ಷೆಗೊಳಪಡಿಸಲಾಗುತ್ತದೆ. ಅಧಿನಿಯಮ 35, 36 ರ ಪ್ರಕಾರ ಕಾರ್ಯಕ್ರಮದ ಭಾಗವೊಂದನ್ನು ತೆಗೆಯುವಂತೆ, ಅಥವಾ ಅದರ ಅವಧಿಯನ್ನು ಕಡಿತಗೊಳಿಸಿಕೊಳ್ಳುವಂತೆ, ಕ್ಷಮಾಪಣಾ ಸ್ಕ್ರಾಲ್ ಹಾಕುವಂತೆ ಕೇಂದ್ರ ಸರ್ಕಾರ ಚಾನೆಲ್‌ಗಳ ನಿಯಂತ್ರಕರನ್ನು ನಿರ್ದೇಶಿಸಬಹುದು. ಅಧಿನಿಯಮ 36(2)ರ ಅಡಿ ಕೇಂದ್ರ ಸರ್ಕಾರವು ತನ್ನ ಹಿತಾಸಕ್ತಿಯಲ್ಲಿ ಪ್ರಸಾರ ಸೇವೆಯನ್ನು ನಿರ್ದಿಷ್ಟ ಪ್ರದೇಶದಲ್ಲಿ ರದ್ದುಗೊಳಿಸುವ ಸಂಪೂರ್ಣ ಹಕ್ಕು ಹೊಂದಿರುತ್ತದೆ. ಈ ಹಿಂದೆಯೂ ಕೆಲವು ಕಾರ್ಯಕ್ರಮಗಳು ಪ್ರಸಾರ ಆಗದಂತೆ ಸರ್ಕಾರಗಳು ನಿರ್ಬಂಧನೆ ಹೇರಿದ್ದಿದೆ. ಇನ್ನು ಮುಂದೆ "ಪ್ರಜಾತಂತ್ರದ ದೊಡ್ಡಣ್ಣ" ಎಂದು ಕೊಚ್ಚಿಕೊಳ್ಳುವ ಇವರು ಬಹಿರಂಗವಾಗಿ ಕಾನೂನು ರಕ್ಷಣೆಯಲ್ಲಿಯೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೊಸಕಿ ಹಾಕುವರು.

ಪ್ರಸಾರವಾಗುವ ಕಾರ್ಯಕ್ರಮಗಳ ವರ್ಗೀಕರಣಕ್ಕೆ ಸಂಬಂಧಪಟ್ಟಂತೆ ಕರಡು ಮಸೂದೆಯು ಸರ್ಕಾರಕ್ಕೆ ಪ್ರಸಾರವಾಗುವ ಕಾರ್ಯಕ್ರಮದ ವಿಷಯ, ಸಾರ, ಪ್ರಭಾವ ಮತ್ತು ಯಾರನ್ನು ತಲುಪುತ್ತದೆ ಎಂಬುದರ ಆಧಾರದ ಮೇಲೆ ವರ್ಗೀಕರಿಸುವ ಪ್ರಕ್ರಿಯೆಯು ಕೇಂದ್ರ ಸರ್ಕಾರದ ಹತೋಟಿಯಲ್ಲಿರುತ್ತದೆ. ಅಧಿನಿಯಮ 30ರ ಪ್ರಕಾರ ಪ್ರಸಾರವಾಗುವ ಕಾರ್ಯಕ್ರಮಗಳ ಪರಿಶೀಲನೆ ನಡೆಸುವ ಹಕ್ಕು ಕೇಂದ್ರ ಸರ್ಕಾರ ಹೊಂದಿರುತ್ತದೆ. ಇಂತಹ ತಪಾಸಣೆಯ ಮುನ್ನ ಸರ್ಕಾರ ಯಾವ ಪೂರ್ವ ಅನುಮತಿಯನ್ನೂ ಪಡೆಯಬೇಕಿಲ್ಲ. ಅಂದರೆ ಡಿಜಿಟಲ್ ಮಾಧ್ಯಮಕ್ಕೂ ಸರ್ಕಾರವು ತನ್ನ ಹತೋಟಿಯನ್ನು ವಿಸ್ತರಿಸಲಿದೆ.

ಪ್ರಸಾರವಾಗುವ ಕಾರ್ಯಕ್ರಮಗಳ ವಿಷಯದ ಮೇಲೆ ಸಂಪೂರ್ಣ ನಿಗಾ ವಹಿಸಲು ಪ್ರಸಾರಕರು ಸರ್ಕಾರಕ್ಕೆ ಅನುವು ಮಾಡಿಕೊಡಬೇಕು. ಸರ್ಕಾರದ ಅಧಿಕಾರಿಗಳು, ಪ್ರಸಾರಕರ ಉಪಕರಣಗಳನ್ನೂ ಜಪ್ತಿ ಮಾಡುವ ಅಧಿಕಾರ ಹೊಂದಿರುತ್ತಾರೆ. ತುರ್ತು ಪರಿಸ್ಥಿತಿಯಲ್ಲಿ (1975-77) ಮಾಧ್ಯಮಗಳು ಅನುಭವಿಸಿದ್ದಕ್ಕಿಂತಲೂ ಭೀಕರ ಪರಿಸ್ಥಿತಿಯನ್ನು ಇದು ನಿರ್ಮಾಣ ಮಾಡುತ್ತದೆ! ಇಂದು ದೇಶದ ಬಹುತೇಕ ಟಿವಿ ಚಾನೆಲ್ ಹಾಗೂ ಪತ್ರಿಕೆಗಳನ್ನು ಕೆಲವೇ ಕೆಲವು ಏಕಸ್ವಾಮ್ಯಾಧಿಪತಿಗಳು ನಿಯಂತ್ರಿಸುತ್ತಿದ್ದಾರೆ. ತಮಗೆ ಬೇಕಾದಂತೆ ರಾಜ್ಯಭಾರ ಮಾಡುವ ಸರ್ಕಾರಕ್ಕೆ ಅವರು ಯಾವತ್ತೂ ಬೆಂಬಲವಾಗಿರುತ್ತಾರೆ. ಹೀಗಿರುವಾಗ ಜನಸಾಮಾನ್ಯರ ದೃಷ್ಟಿಯಿಂದ ಸುದ್ದಿ ವಿಶ್ಲೇಷಣೆ ಮಾಡುವ ಡಿಜಿಟಲ್ ಮಾಧ್ಯಮಗಳನ್ನೂ ತನ್ನ ಹದ್ದುಬಸ್ತಿಗೆ ತರಲು ಸರ್ಕಾರ ಈ ಕಾಯ್ದೆಯನ್ನು ಜಾರಿಗೆ ತರುತ್ತಿದೆ. ತನ್ಮೂಲಕ ವಿರೋಧದ ಧ್ವನಿಗಳನ್ನು ಹೊಸಕಿ ಹಾಕಲು ಸಜ್ಜಾಗುತ್ತಿದೆ.

2024 ಚುನಾವಣೆಗೆ ಮುನ್ನ ಈ ಕಾಯ್ದೆಯನ್ನು ಜಾರಿಗೆ ತಂದು ಮೋದಿ ಸರ್ಕಾರದ ತಪ್ಪುಗಳನ್ನು ಹೊರ ಹಾಕುವ, ಸರ್ಕಾರದ ವಿರುದ್ಧ ಮಾತನಾಡುವ ಸ್ವತಂತ್ರ ಸುದ್ದಿ ಮಾಧ್ಯಮಗಳು, ಯೂಟ್ಯೂಬ್ ಚಾನೆಲ್‌ಗಳು, ಮೆಸೇಜಿಂಗ್ ಆಪ್‌ಗಳ ಮೇಲೆ ಸಂಪೂರ್ಣ ನಿರ್ಬಂಧನೆ ಹೇರುವ ಕುತಂತ್ರವೇ ಈ ಹೊಸ ಕಾಯ್ದೆ. ಇನ್ನು ಆಳುವ ಸರ್ಕಾರವು ತನ್ನ ಲಯಕ್ಕೆ ತಕ್ಕಂತೆ ಶ್ರಾವ್ಯ-ದೃಶ್ಯ ಮಾಧ್ಯಮದ ಮೂಲಕ ಜನ ಸಾಮಾನ್ಯರ ಮನಸ್ಸನ್ನು ಸಂಪೂರ್ಣ ಹತೋಟಿಗೆ ಪಡೆಯುವ ಹುನ್ನಾರ ಹೊಂದಿದೆ. ಬಿಜೆಪಿ ನೇತೃತ್ವದ ಸರ್ಕಾರ ಇತ್ತೀಚೆಗೆ ಬಿ.ಬಿ.ಸಿ ಸಾಕ್ಷ್ಯ ಚಿತ್ರದ ಮೇಲೆ ನಿರ್ಬಂಧನೆ ಹೇರಿದ್ದು ನಮ್ಮ ನೆನಪಿನಿಂದ ಇನ್ನೂ ಮಾಸಿಲ್ಲ.

ಬಿಜೆಪಿ ಸರ್ಕಾರವು, ಪ್ರಧಾನಿ ಮೋದಿಯನ್ನು, ಸೋಲಿಲ್ಲದ, ಜಗತ್ತಿನ ಅತೀ ದೊಡ್ಡ ಪ್ರಜಾತಂತ್ರದ ನಾಯಕನೆಂದು, 'ಅಮೃತ ಕಾಲವನ್ನು ಮುನ್ನಡೆಸುತ್ತಿರುವ ನೇತಾರ'ನೆಂದು ಬಿಂಬಿಸಲು ಹೊರಟಿದೆ. ಜನರ ಪ್ರತಿರೋಧದ ಧ್ವನಿಗೆ ಯಾವ ಮಾನ್ಯತೆಯನ್ನೂ ನೀಡದೆ, ಒಂದಾದ ಮೇಲೊಂದು ಕರಾಳ ನೀತಿಗಳನ್ನು ತಂದು ಪ್ರಜಾತಾಂತ್ರಿಕ ಹಕ್ಕುಗಳ ಮೇಲೆ ದಾಳಿ ನಡೆಸಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧನೆ ಹೇರುವುದು ಫ್ಯಾಸಿಸ್ಟ್ ನಿರಂಕುಶ ಪ್ರಭುತ್ವದ ಲಕ್ಷಣವಾಗಿದೆ. ಪ್ರಜಾತಾಂತ್ರಿಕ ಹಕ್ಕುಗಳನ್ನು ರಕ್ಷಿಸಲು, ನಿರಾತಂಕವಾಗಿ ತಮ್ಮ ಇಚ್ಛೆಯ ಕಾರ್ಯಕ್ರಮ ನೋಡಲು ಬಯಸುವ ಎಲ್ಲಾ ಜನರು, ಜವಾಬ್ದಾರಿಯುತ ಜನತೆ, ಪತ್ರಕರ್ತರು, ಎಲ್ಲರೂ ಒಕ್ಕೊರಲಿನಲ್ಲಿ ಪ್ರಸಾರ ಸೇವೆಗಳ (ನಿಯಂತ್ರಣ) ಮಸೂದೆ 2023ನ್ನು ಹಿಮ್ಮೆಟ್ಟಿಸಲು ಪ್ರಬಲ ಹೋರಾಟ ಬೆಳೆಸಬೇಕು. ■

## ಪ್ಯಾಲೆಸ್ಟೀನ್ ಮೇಲೆ ಇಸ್ರೇಲ್ ದಾಳಿ : ಅಮೆರಿಕಾದ ದ್ವಂದ್ವ ನೀತಿ

ಪ್ಯಾಲೆಸ್ಟೀನ್ ಅನ್ನು ವಸ್ತುಶ: ನಿರ್ನಾಮ ಮಾಡುವ ಉದ್ದೇಶದಿಂದ ಝಿಯೊನಿಸ್ಟ್ ಇಸ್ರೇಲ್ ಅದರ ಮೇಲಿನ ಬರ್ಬರ ದಾಳಿಯನ್ನು ಮುಂದುವರೆಸುತ್ತಲೇ ಇದೆ. ಸ್ವಘೋಷಿತ ಅಂತರರಾಷ್ಟ್ರೀಯ ಕಾವಲುಗಾರನಾದ ಅಮೆರಿಕಾ ಈ ಅತ್ಯಂತ ಅಮಾನುಷ ಯುದ್ಧವನ್ನು ನಿಲ್ಲಿಸುವ ಯಾವುದೇ ಕ್ರಮವನ್ನು ಕೈಗೊಳ್ಳದೇ ಇದ್ದರೂ, ತನ್ನ ಎರಡು ನಾಲಗೆಗಳ ಮಾತುಗಳನ್ನಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ಒಂದೆಡೆ, ಅಮೆರಿಕಾದ ಅಧ್ಯಕ್ಷರು ಬಾಯುಪಚಾರಕ್ಕಾಗಿ ಒಮ್ಮೊಮ್ಮೆ ಶಾಂತಿ ಮತ್ತು ದ್ವಿರಾಷ್ಟ್ರದ ಮಾತುಗಳನ್ನಾಡಿದರೂ, ಬಹಿರಂಗವಾಗಿ ಇಸ್ರೇಲ್‌ನ ದಾಳಿಯನ್ನು ಬೆಂಬಲಿಸುತ್ತಲೇ ಬಂದಿದ್ದಾರೆ; ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಯುದ್ಧವಿರಾಮದ ಕೂಗು ಕೇಳಿ ಬರುತ್ತಿದ್ದು, ಯುದ್ಧ ಸ್ಥಗಿತಗೊಳಿಸುವ ಬಗ್ಗೆ ವಿಶ್ವಸಂಸ್ಥೆಯ ಭದ್ರತಾ ಸಮಿತಿ ಮಂಡಿಸಿದ ಗೊತ್ತುವಳಿಯನ್ನು ಅಮೆರಿಕಾ ಉಗ್ರವಾಗಿ ವಿರೋಧಿಸಿದೆ. ಜೊತೆಗೆ, ಇಸ್ರೇಲಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಸರಬರಾಜನ್ನೂ ಮಾಡುತ್ತಿದೆ. ಇನ್ನೊಂದೆಡೆ, ಇಸ್ರೇಲಿಗೆ ನೀಡಿರುವ ಬೆಂಬಲದಿಂದ ಅರಬ್ ದೇಶಗಳೊಂದಿಗಿನ ತನ್ನ ಸಂಬಂಧಕ್ಕೆ ಧಕ್ಕೆ ಬರಬಾರದೆಂಬ ಉದ್ದೇಶದಿಂದ, ಕೆಲವೊಮ್ಮೆ ಇಸ್ರೇಲ್ ನಡೆಯನ್ನು ಟೀಕಿಸುವ ನಾಟಕವಾಡುತ್ತಿದೆ; ಅದೂ, ಇಸ್ರೇಲ್ ನಿರ್ದಯವಾಗಿ ಮಕ್ಕಳ ಹತ್ಯೆ ಮಾಡುತ್ತಾ, ಆಸ್ಪತ್ರೆಗಳ ಮೇಲೆ ದಯಾ ದಾಕ್ಷಿಣ್ಯವಿಲ್ಲದೆ ಬಾಂಬ್ ದಾಳಿ ನಡೆಸುತ್ತಾ, ದಾಳಿಗ್ರಸ್ತ ಸ್ಥಳಗಳಿಂದ ಸುರಕ್ಷಿತ ಸ್ಥಳಗಳಿಗೆ ಹೋಗುತ್ತಿರುವ ಮುಗ್ಧ ನಾಗರಿಕರ ಮೇಲೆ ಗೋಲಿಬಾರ್ ಮಾಡುತ್ತಾ, ಹೀಗೆ ಎಲ್ಲಾ ಸೀಮೆಗಳನ್ನು ದಾಟಿ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿರುವಾಗ, ಅಮೆರಿಕಾ ಇಂತಹ ಬೂಟಾಟಿಕೆ ತೋರುತ್ತಿದೆ! ಇಸ್ರೇಲಿನ ಜನತೆಯನ್ನೂ ಒಳಗೊಂಡಂತೆ, ಜಗತ್ತಿನ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಮತ್ತು ಯುದ್ಧ-ವಿರೋಧಿ ಶಾಂತಿಪ್ರಿಯ ಜನರು ಇದನ್ನು ಮನಗಾಣುವುದು ಅತ್ಯಗತ್ಯ. ■

## ಉತ್ತರ ಪ್ರದೇಶ : ನಿರುದ್ಯೋಗಿ ಯುವಕರನ್ನು ಇಸ್ರೇಲಿಗೆ ಕಳುಹಿಸುವ ನಡೆ–ಎಸ್‌ಯುಸಿಐ(ಸಿ) ಖಂಡನೆ

**ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಈ ಕೆಳಗಿನ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿರುತ್ತಾರೆ**

ಹಲವಾರು ವರ್ಷಗಳಿಂದ ನ್ಯಾಯಯುತವಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಪ್ಯಾಲೆಸ್ತೀನ್ ನಾಗರಿಕರ ಮೇಲೆ ದಾಳಿ ಮಾಡಿ, ಎಳೆಯ ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ ಸಾವಿರಾರು ಅಮಾಯಕ ಪ್ಯಾಲೆಸ್ತೀನಿಯನ್ನರನ್ನು ಕೊಂದು, ವಸತಿ ಕಟ್ಟಡಗಳು, ಆಸ್ಪತ್ರೆಗಳು ಮತ್ತಿತರ ಚರ-ಸ್ಥಿರ ಆಸ್ತಿಗಳನ್ನು ನೆಲಸಮಗೊಳಿಸುವ ಮೂಲಕ ಜನಾಂಗೀಯ ವಿಧ್ವಂಸ ನಡೆಸುತ್ತಿರುವ ಅಮೆರಿಕಾ ಸಾಮ್ರಾಜ್ಯಶಾಹಿ ಬೆಂಬಲಿತ ಝಿಯೋನಿಸ್ಟ್ ಇಸ್ರೇಲಿನ ಘೋರ ಮಿಲಿಟರಿ ದಾಳಿಯನ್ನು ಇಡೀ ಜಗತ್ತು ಸ್ಪಷ್ಟವಾಗಿ ಖಂಡಿಸುತ್ತಿದೆ.

ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಪ್ಯಾಲೆಸ್ತೀನೀಯರನ್ನು ನಿರ್ಬಂಧಿಸಿದ ಕಾರಣ, ಗಾಜಾದ ಮೇಲೆ ಇಸ್ರೇಲ್‌ನ 100 ದಿನಗಳ ಯುದ್ಧದ ನಂತರ ಇಸ್ರೇಲಿನಲ್ಲಿ ಕಾರ್ಮಿಕ ಬಿಕ್ಕಟ್ಟು ಎದುರಾಗಿದೆ. ಈ ಯುದ್ಧವು ಸುಮಾರು 5,00,000 ಇಸ್ರೇಲಿಗಳು ಮತ್ತು 17,000 ಕ್ಕೂ ಹೆಚ್ಚು ವಿದೇಶಿ ಉದ್ಯೋಗಿಗಳನ್ನು ದೇಶವನ್ನು ತೊರೆಯುವಂತೆ ಮಾಡಿದೆ. ಇದಲ್ಲದೆ, ಇಸ್ರೇಲ್‌ನ ಸುಮಾರು ಐದನೇ ಒಂದು ಭಾಗದಷ್ಟು ಉದ್ಯೋಗಿಗಳು ಸ್ಥಳಾಂತರ, ಶಾಲೆ ಮುಚ್ಚುವಿಕೆ ಅಥವಾ ಯುದ್ಧಕ್ಕಾಗಿ ಸೈನ್ಯದ ಮೀಸಲು ಸೇವಾ ಕರೆಗಳಿಂದಾಗಿ ಸದ್ಯಕ್ಕೆ ನಿರುದ್ಯೋಗಿಗಳಾಗಿದ್ದಾರೆ. ಈಗ ಬಿಜೆಪಿ ಸರ್ಕಾರ ಉತ್ತರಪ್ರದೇಶ ಮತ್ತು ಹರಿಯಾಣದಿಂದ ಅಗ್ಗದ ಕೂಲಿಗೆ ಕಾರ್ಮಿಕರನ್ನು ಸರಬರಾಜು ಮಾಡುವ ಮೂಲಕ ನಿರಂಕುಶ ಝಿಯೋನಿಸ್ಟ್ ಆಡಳಿತದ ರಕ್ಷಣೆಗೆ ನಿಂತಿದೆ. ಕೆಲಸದ ಆಮಿಷಕ್ಕೆ ಬಲಿಯಾಗಿ, ನೂರಾರು ನಿರುದ್ಯೋಗಿ ಯುವಕರು ಮತ್ತು ನಿವೃತ್ತ ಕಾರ್ಮಿಕರು ತಮ್ಮ ಪ್ರಾಣ ಪಣಕ್ಕಿಟ್ಟು ಇಸ್ರೇಲ್‌ಗೆ ಹೋಗಲು ಸಾಲುಗಟ್ಟಿ ನಿಲ್ಲುತ್ತಿದ್ದಾರೆ.

ಬಿಜೆಪಿ ಸರ್ಕಾರದ ಈ ಅಮಾನವೀಯ ಕೃತ್ಯವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಭಾರತೀಯ ಕಾರ್ಮಿಕರ ಈ ವಲಸೆಯನ್ನು ತಕ್ಷಣವೇ ತಡೆಯಲು ಎಲ್ಲಾ ಸಹೃದಯ, ಪ್ರಜಾತಾಂತ್ರಿಕ ಹಾಗೂ ದೇಶಪ್ರೇಮಿಗಳು ಒಕ್ಕೊರಲಿನಿಂದ ಪ್ರತಿಭಟಿಸಬೇಕೆಂದು ಕರೆ ನೀಡುತ್ತೇವೆ. ■

# “ರಾಮ ಮಂದಿರವು ದೇಶದ ಜನಜೀವನವನ್ನು ಉನ್ನತೀಕರಿಸುತ್ತದೆ”

## –ಎಂಬ ಮಹಾ ಕಪಟ ನಾಟಕ

ಆಡಳಿತಾರೂಢ ಭಾರತೀಯ ಜನತಾ ಪಕ್ಷವು ತರಾತುರಿಯಿಂದ ಅಯೋಧ್ಯೆಯ ಅಪೂರ್ಣ ರಾಮಮಂದಿರವನ್ನು ಉದ್ಘಾಟನೆ ಮಾಡುವ ಕಾರ್ಯಕ್ರಮವನ್ನು ಬಹಳ ಉತ್ಸಾಹದಿಂದ ನಡೆಸಿತು. ಇದೇನೂ ಹಿಂದೂ ಧರ್ಮದ ಮೇಲೆ ಉಕ್ಕಿ ಹರಿಯುವ ಭಕ್ತಿಯಿಂದ ಮಾಡಿದ್ದಲ್ಲ; ಬದಲಿಗೆ ಈ ವರ್ಷದ ಮೇ ತಿಂಗಳಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಜಯಗಳಿಸಲು ರೂಪಿಸಿದ ವಿಭಿನ್ನ ರಣತಂತ್ರ ಇದಾಗಿದೆ. ರಾಜಕೀಯ ಬೃಹನ್ನಾಟಕದ ಸ್ವರಮೇಳದ ಭಾಗವಾಗಿ ಪ್ರಧಾನಿ ಮೋದಿಯವರು ‘ರಾಮಮಂದಿರವು ದೇಶದ ಜನಜೀವನವನ್ನು ಉನ್ನತ ಮಟ್ಟಕ್ಕೆ ಒಯ್ಯುತ್ತದೆ’ ಎಂದು ರಾಗ ಹಾಡಿದ್ದಾರೆ. ಅಲ್ಲದೇ ಮಂದಿರ ಉದ್ಘಾಟನೆಯ ದಿನವನ್ನು ಎರಡನೆಯ ದೀಪಾವಳಿಯಂತೆ ಆಚರಿಸುವ ಮೂಲಕ ಪ್ರತಿ ಮನೆಯಲ್ಲೂ ದೀಪಗಳನ್ನು ಬೆಳಗುವಂತೆ ಕರೆ ನೀಡಿದ್ದರು. ಇದು ಕುರುಡು ಧಾರ್ಮಿಕ ಆಚರಣೆಯ ಕ್ಷಣಕ್ಕೆ ಭವ್ಯತೆಯನ್ನು ತುಂಬುವ ಉದ್ದೇಶವನ್ನು ಹೊಂದಿತ್ತು. ಅಲ್ಲದೇ ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಅದನ್ನು ತೊಲಗಿಸಲು ದೀಪ ಬೆಳಗಿ ತಟ್ಟೆ, ಗಂಟೆ ಜಾಗಟೆ ಬಾರಿಸಲು ಹೇಳಿದ್ದನ್ನು ನೆನಪಿಸುತ್ತದೆ. ಆದರೆ ಮುಖ್ಯ ಪ್ರಶ್ನೆಯೆಂದರೆ, ಸುಮಾರು ರೂ.18000 ಕೋಟಿ (12/01/23ರ ದಿ ವೈರ್ ವರದಿಯಂತೆ) ವ್ಯಯಿಸಿ ಕಟ್ಟಿದ ಈ ಆಡಂಬರದ ರಾಮಮಂದಿರವು ಎಷ್ಟರ ಮಟ್ಟಿಗೆ “ದೇಶದ ಜನರ ಜೀವನವನ್ನು ಬೆಳಗುತ್ತದೆ?”. ಇದು ಉತ್ತರವಿಲ್ಲದ ಪ್ರಶ್ನೆ. ಮತ್ತು ತಿಳಿದುಕೊಳ್ಳಬೇಕಾದ ಅಂಶವೆಂದರೆ ಹಿಂದೊಮ್ಮೆ, 15 ಲಕ್ಷ ರೂಪಾಯಿ ಪ್ರತಿ ಭಾರತೀಯನ ಖಾತೆಗೆ ಹಾಕುವ ಭರವಸೆಯ ಕುರಿತ ಪ್ರಶ್ನೆಗೆ ಗೃಹ ಸಚಿವ ಅಮಿತ್ ಶಾ, ಅದು ಚುನಾವಣೆಯ ಗಿಮಿಕ್ ಎಂದು ಮಾಧ್ಯಮಗಳಿಗೆ ಉತ್ತರಿಸಿದ್ದರು. ಇದು ಹಾಗೆಯೇ. ಏಕೆಂದರೆ, ಗಗನಮುಖಿಯಾದ ಬೆಲೆಗಳು, ಶ್ರೀಸಾಮಾನ್ಯನ ಆದಾಯದ ಕುಸಿತ, ಹೆಚ್ಚುತ್ತಿರುವ ನಿರುದ್ಯೋಗ ಪ್ರಮಾಣ, ಒಂದಾದ ಮೇಲೆ ಒಂದರಂತೆ ಮುಚ್ಚುತ್ತಿರುವ ಕೈಗಾರಿಕೆಗಳು, ಉದ್ಯೋಗ ನಷ್ಟ, ತಮ್ಮ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ಪಡೆಯದ ಬಡ ರೈತರು ಮತ್ತು ಕಾರ್ಮಿಕರ ಆತ್ಮಹತ್ಯೆಗಳು, ಅಪೌಷ್ಟಿಕತೆಯಿಂದ ಬಳಲುತ್ತಿರುವ 74% ಜನ, ಬೆರಳೆಣಿಕೆಯ ಆಗರ್ಭ ಶ್ರೀಮಂತರು ಹಾಗೂ ಕೋಟ್ಯಾಂತರ ಜನ ಶೋಷಿತರ ನಡುವೆ ಹೆಚ್ಚುತ್ತಿರುವ ಅಸಮಾನತೆಯ ಅಂತರ, ಇಂತಹ ಹಲವಾರು ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವುದು ಬಿಜೆಪಿಯ ಕಾರ್ಯಸೂಚಿಯಲ್ಲಿಲ್ಲ. ಇದಕ್ಕೆಲ್ಲ ಅದು ಬೇರೆ ಅಸ್ತ್ರವನ್ನೇ ಹೊಂದಿದೆ. ಕೋಟ್ಯಾಂತರ ಜನ ಅನುಭವಿಸುತ್ತಿರುವ ವ್ಯಾಪಕ ಕಡುಬಡತನ ಮತ್ತು ಸಂಕಷ್ಟಗಳು ಒಂದು ಮಂದಿರ ಕಟ್ಟುವುದರಿಂದ ಮಾಯವಾಗುತ್ತವೆಯೆಂದು ನಂಬಿಸುವುದು ಎಂತಹ ಮೂರ್ಖನಿಗೂ ಅದು ಒಂದು ತರ್ಕರಹಿತ, ಕುತ್ಸಿತ ವ್ಯಾಖ್ಯಾನವೆಂದು ಅರ್ಥವಾಗುತ್ತದೆ.

ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಒಂದು ದೇವಸ್ಥಾನವನ್ನು ಕಟ್ಟಲು ಹಂಬಲಿಸುವುದು, ಇನ್ನೂ ನಿರ್ಮಾಣ ಅಪೂರ್ಣವಾಗಿರುವಾಗ ಮೂರ್ತಿ ಪ್ರತಿಷ್ಠಾಪನೆ ಮಾಡುವುದು ಸರ್ಕಾರದ ಆದ್ಯತೆಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ಪ್ರತಿಯೊಬ್ಬ ಪ್ರಜೆಗೂ ತನ್ನದೇ ಆದ ನಂಬಿಕೆಯ ದೈವವನ್ನು ಆರಾಧಿಸುವ ಮತ್ತು ಪೂಜಿಸುವ ಹಕ್ಕು ಇರುವಾಗ ಒಂದು ದೇವರು ಮತ್ತು ದೇವಸ್ಥಾನದ ನಿರ್ಮಾಣದ ಭ್ರಮೆಯಲ್ಲಿ ಜನರನ್ನು ತೇಲಿಸುವುದರ ಹಿಂದೆ ಅವರು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಮರೆಮಾಚುವ ಹುನ್ನಾರವಿದೆ. ಇಲ್ಲಿ ಧಾರ್ಮಿಕ ಶ್ರದ್ಧೆಗಿಂತ ಹೆಚ್ಚಾಗಿ, ರಾಮಮಂದಿರದಿಂದ ಹಿಂದುತ್ವದ ಅಲೆಯನ್ನು ಎಬ್ಬಿಸಿ ಕೋಮು ಧ್ರುವೀಕರಣ ಕೈಗೊಳ್ಳುವ ಸಂಚಿದೆ. ಏಕೆಂದರೆ ಸರಕಾರವು ಜನತೆಯ ಬದುಕಿನ ನೈಜ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿದೆ. ಪ್ರಜೆಗಳ ಬದುಕನ್ನು ಹಸನಾಗಿಸಲು ಪ್ರಯತ್ನಿಸುವುದು ಬಿಟ್ಟು ಒಂದು ದೇವಸ್ಥಾನದ ನಿರ್ಮಾಣ ಮತ್ತು ಧಾರ್ಮಿಕ ಅಂಧಶ್ರದ್ಧೆಯ ಸುತ್ತ ಜನರನ್ನು ಭ್ರಮಾಧೀನರನ್ನಾಗಿಸುವುದು ಸರಕಾರದ ಕೆಲಸವಾಗಿರುವುದು ದುರಂತ ಅಲ್ಲವೇ? ಈ ಸಮೀಕರಣವನ್ನು ಅರ್ಥೈಸಿಕೊಳ್ಳುವುದು ಚೂರು ಕಷ್ಟ. ಪ್ರಧಾನಿ ಮೋದಿಯವರಿಗೆ ರಾಜಕೀಯ ಸಿದ್ಧಾಂತವನ್ನು ಬದಿಗಿಟ್ಟು ತಾವೊಬ್ಬರೇ ಮಂದಿರ ನಿರ್ಮಾಣದ ರೂವಾರಿ ಎಂಬ ಕೀರ್ತಿಗರಿಯನ್ನು ಮುಡಿಗೇರಿಸಿಕೊಳ್ಳುವ ತವಕ. ಅಪೂರ್ಣ ದೇವಸ್ಥಾನವನ್ನು ಅವಸರವಸರವಾಗಿ ಉದ್ಘಾಟಿಸುತ್ತಿರುವುದರ ಹಿಂದೆ ಎರಡು ಉದ್ದೇಶಗಳಿವೆ. ಒಂದು: ಅಯೋಧ್ಯೆಯನ್ನು ಪ್ರಮುಖ ಯಾತ್ರಾ ಸ್ಥಳವಾಗಿ ಪರಿವರ್ತಿಸುವುದು. ಎರಡು: ಸರಕಾರದೊಂದಿಗೆ ಸಮ್ಮಿಳಿತವಾದ ಪಟ್ಟಭದ್ರ ಹಿತಾಸಕ್ತಿಗಳನ್ನು ತೃಪ್ತಿಪಡಿಸುವುದು. ಮುಂದುವರೆದು ರಾಮ್ ಕೆ ನಾಮ್ ಎಂಬ ಕಥನದಲ್ಲಿ ನೇಯ್ದು ಪ್ರಧಾನಿ ಮೋದಿಯವರನ್ನು ಧರ್ಮೋದ್ಧಾರಕ, ಭಾರತೀಯ ಸಂಸ್ಕೃತಿಯ ರಕ್ಷಕನೆಂದು ಬಿಂಬಿಸಿ ಚುನಾವಣೆಯ ಫಸಲು ತೆಗೆಯುವುದು.

ಮಾಧ್ಯಮಗಳು, ನರೇಂದ್ರ ಮೋದಿಯವರನ್ನು ರಾಮಮಂದಿರದ ರೂವಾರಿಯೆಂದು ಬಿಂಬಿಸುತ್ತಿದ್ದರೂ ಇತಿಹಾಸದ ಕತ್ತಲಲ್ಲಿ ಮರೆತು ಹೋದ ಸತ್ಯ ಬೇರೆಯೇ ಇದೆ. ಬಿಜೆಪಿಯ ಹಿರೀಕರಾದ ಲಾಲ್‌ಕೃಷ್ಣ ಅಡ್ವಾಣಿ, ಮುರುಳಿ ಮನೋಹರ ಜೋಶಿ ಮತ್ತು ಉಮಾ ಭಾರತಿಯವರ ನೇತೃತ್ವದಲ್ಲಿ 1992ರ ಡಿಸೆಂಬರ್ 6ರಂದು ಆರ್‌ಎಸ್‌ಎಸ್–ವಿಶ್ವ ಹಿಂದೂ ಪರಿಷತ್–ಭಜರಂಗ ದಳ ಕಾರ್ಯಕರ್ತರು ಬಾಬ್ರಿ ಮಸೀದಿಯನ್ನು ಸಂಪೂರ್ಣವಾಗಿ ನಾಶ ಮಾಡಿ ಅದು ಪೌರಾಣಿಕ ಪಾತ್ರ ರಾಮನ ಜನ್ಮಸ್ಥಳವೆಂದು ಪ್ರತಿಪಾದಿಸುವ ಮೂಲಕ ಸಾಮಾಜಿಕ ಸಾಮರಸ್ಯವನ್ನು ಕದಡಿ ಕೋಮು ಧ್ರುವೀಕರಣದ ಮೂಲಕ ಚುನಾವಣೆಯಲ್ಲಿ ಜಯಗಳಿಸಿದ್ದನ್ನು ಮರೆಯಲು ಸಾಧ್ಯವಿಲ್ಲ.

ಪ್ರಸ್ತುತ ಅದೇ ವಾತಾವರಣವಿದೆ. ಅಯೋಧ್ಯೆಯು 80 ಲೋಕಸಭಾ ಕ್ಷೇತ್ರಗಳನ್ನು ಒಳಗೊಂಡ ಉತ್ತರ ಪ್ರದೇಶ ರಾಜ್ಯದಲ್ಲಿದ್ದು, ಅಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದರೆ ಅದು ಪ್ರಧಾನಿ ಹುದ್ದೆಗೆ ರಹದಾರಿಯಾಗುತ್ತದೆ. ಹೀಗಾಗಿ ರಾಮಮಂದಿರದ ಸೂತ್ರವನ್ನು ಚುನಾವಣಾ ರಾಜಕೀಯದ ಮುಖ್ಯ ಅಸ್ತ್ರವನ್ನಾಗಿ ಮಾಡಿಕೊಳ್ಳುವುದು ಬಿಜೆಪಿಯ ಲೆಕ್ಕಚಾರ. ಹೀಗಾಗಿಯೇ ರಾಮಮಂದಿರದ ಆಡಂಬರ ಮತ್ತು ವೈಭವದಲ್ಲಿ ಇವೆಲ್ಲ ಅಂಶಗಳು ಮೇಳೈಸಿಕೊಂಡಿವೆ. ಆದ್ದರಿಂದ ಮತ್ತೆ ಮತ್ತೆ ಬೂರ್ಜ್ವಾ ರಾಜಕೀಯ ಪಕ್ಷಗಳ ಇಂತಹ ಮೋಸದ ಮತಬ್ಯಾಂಕ್ ರಾಜಕೀಯ ಹಾಗೂ ಟೊಳ್ಳು ಭರವಸೆಗಳಿಂದ ಬಳಲಿರುವ ಕೊಟ್ಯಾಂತರ ಶೋಷಿತ ಜನತೆಯು ಜಾಗೃತರಾಗಿ ಇಂತಹ ಕೃತಕ ಉನ್ಮತ್ತತೆಯ ಭ್ರಮೆಯಿಂದ ಹೊರಬರಬೇಕಾಗಿದೆ. ■

# ನಾಗರಿಕ ಹಕ್ಕು ಕಾರ್ಯಕರ್ತರಿಂದ ಮುಖ್ಯ ನ್ಯಾಯಮೂರ್ತಿಗಳಿಗೆ ಬಹಿರಂಗ ಪತ್ರ

ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತಿಯುತ ಪ್ರತಿಭಟನೆ ಮತ್ತು ಮೆರವಣಿಗೆಗಳನ್ನು ಪೊಲೀಸರು ಹತ್ತಿಕ್ಕುತ್ತಿರುವುದರಿಂದ ದೇಶದಲ್ಲಿ ಪ್ರಜಾತಾಂತ್ರಿಕ ಪ್ರತಿರೋಧವನ್ನು ಉಸಿರುಗಟ್ಟಿಸುತ್ತಿರುವ ಕುರಿತು ಆರೋಪಿಸಿ, ನಾಗರಿಕ ಹಕ್ಕುಗಳ ಕಾರ್ಯಕರ್ತರು ಮತ್ತು ಸಂಘಟನೆಗಳು ಇತ್ತೀಚೆಗೆ ಭಾರತದ ಮುಖ್ಯ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಅವರಿಗೆ ಬಹಿರಂಗ ಪತ್ರವೊಂದನ್ನು ಬರೆದಿದ್ದಾರೆ.

ಶಾಂತಿಯುತ ಪ್ರತಿರೋಧದ ಕಾರಣಕ್ಕೆ ಪ್ರತಿಭಟನಾಕಾರರು ಹುಸಿ ಎನ್‌ಕೌಂಟರ್, ಅಪಹರಣ ಮತ್ತು ತಮ್ಮ ಮನೆಗಳ ನೆಲಸಮದಂತಹ ಕ್ರಮಗಳನ್ನು ಪೊಲೀಸರು ಮತ್ತಿತರ ಸರ್ಕಾರಿ ಸಂಸ್ಥೆಗಳಿಂದ ಎದುರಿಸಬೇಕಾಗಿದೆ ಎಂದು ಈ ಪತ್ರವು ಆರೋಪಿಸಿದೆ.

“ಒರಿಸ್ಸಾ, ಛತ್ತೀಸ್‌ಗಢ, ಮಧ್ಯಪ್ರದೇಶ, ಮಹಾರಾಷ್ಟ್ರ ಮೊದಲಾದ ರಾಜ್ಯಗಳ ಅತ್ಯಂತ ಶೋಷಣೆ ಮತ್ತು ತುಳಿತಕ್ಕೊಳಗಾದ ಆದಿವಾಸಿ ಸಮುದಾಯಗಳು ಗಣಿ ಸಂಬಂಧಿತ ಸ್ಥಳಾಂತರ ಮತ್ತು ತಮ್ಮ ನೆಲದ ಮಿಲಿಟರೀಕರಣ ಖಂಡಿಸಿ ಸುದೀರ್ಘ ಶಾಂತಿಯುತ ಜನ ಹೋರಾಟಗಳಲ್ಲಿ ತೊಡಗಿದ್ದಕ್ಕಾಗಿ, ನ್ಯಾಯಯುತ ಗ್ರಾಮಸಭೆಗಳಿಗಾಗಿ, ಅನುಸೂಚಿತ ಪ್ರದೇಶಗಳಿಗೆ ಪಂಚಾಯತ್ ವಿಸ್ತರಣೆ(PESA) ಕಾಯಿದೆ 1996ರ ಜಾರಿಗಾಗಿ ಒತ್ತಾಯಿಸುವ ತಮ್ಮ ಪ್ರಜಾತಾಂತ್ರಿಕ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಕೂಡ ಹುಸಿ ಎನ್‌ಕೌಂಟರ್, ಅಪಹರಣ ಮತ್ತು ತಮ್ಮ ಮನೆಗಳ ನೆಲಸಮದಂತಹ ಕ್ರಮಗಳನ್ನು ಎದುರಿಸಬೇಕಾಗಿದೆ ಎಂದು ಪತ್ರದಲ್ಲಿ ಬರೆಯಲಾಗಿದೆ.

“ಶ್ರೀನಗರದಿಂದ ಸಿಲ್ಗೇರ್‌ವರೆಗೆ ಎಲ್ಲ ಜನತಾಂತ್ರಿಕ ಪ್ರತಿರೋಧಗಳ ಮೇಲೆ ಭಿನ್ನ ಮಟ್ಟದ ಹಿಂಸೆಯೊಂದಿಗೆ ದಾಳಿ ಮಾಡಲಾಗುತ್ತಿದೆ ಮತ್ತು ಮಾವೋವಾದಿಗಳು ಹಾಗೂ ಪ್ರತ್ಯೇಕತಾವಾದಿಗಳು ಎಂಬ ಹಣೆಪಟ್ಟಿ ಕೊಡಲಾಗುತ್ತಿದೆ. ಪತ್ರಕರ್ತರನ್ನು ಬಂಧಿಸಲಾಗಿದೆ... ಕಾರ್ಪೊರೇಟ್ ಹಿತಾಸಕ್ತಿಗಳಿಗಾಗಿ ಜನರನ್ನು ಹಿಂಸಾತ್ಮಕವಾಗಿ ಎತ್ತಂಗಡಿ ಮಾಡಲಾಗುತ್ತಿದೆ, ಇಂಟರ್ನೆಟ್ ನಿರ್ಬಂಧನೆ ಬದುಕನ್ನು ಕರಾಳ ಯುಗಕ್ಕೆ ತಳ್ಳುತ್ತಿದೆ, ಬುದ್ಧಿಜೀವಿಗಳು ಜೈಲಿನಲ್ಲಿದ್ದಾರೆ ಮತ್ತು ನಿವೃತ್ತ ನ್ಯಾಯಮೂರ್ತಿಗಳು ಮಾತನಾಡದಂತೆ ದೇಶದ ರಾಜಧಾನಿಯಲ್ಲೇ ತಡೆಯಲಾಗುತ್ತಿದೆ, ಪ್ರಜಾಪ್ರಭುತ್ವದ ಸುರಕ್ಷತಾ ಕವಾಟ ಎಲ್ಲಿದೆ? ಎಂದು ಪ್ರಶ್ನೆ ಮಾಡಲಾಗಿದೆ.

ಛತ್ತೀಸ್‌ಗಢದ ಸಿಲ್ಗೇರ್‌ನಲ್ಲಿ “ಸುಲಿಗೆಕೋರ ಗಣಿಗಾರಿಕೆ ಮತ್ತು ಅವರ ಮನೆಗಳ ಮಿಲಿಟರೀಕರಣವನ್ನು” ವಿರೋಧಿಸಿದ ಆದಿವಾಸಿಗಳ ಮೇಲೆ ಪೊಲೀಸ್ ಗೋಲಿಬಾರ್ ವಿರುದ್ಧ ಅತ್ಯಂತ ಸುದೀರ್ಘ ಅವಧಿಯ ಧರಣಿಯನ್ನು ಯುವಜನರು ಮತ್ತು ಮಹಿಳೆಯರು ನಡೆಸಿದರು.

ಪತ್ರಕ್ಕೆ ಸಹಿ ಮಾಡಿದ 135 ಗಣ್ಯರಲ್ಲಿ ಪ್ರಭುತ್ವ ದಬ್ಬಾಳಿಕೆಯ ವಿರುದ್ಧ ಅಭಿಯಾನಕ್ಕೆ (CASR)ಸೇರಿದ ರಾಜಕೀಯ ಕಾರ್ಯಕರ್ತ ದೀಪಕ್ ಕುಮಾರ್, ಹೈದರಾಬಾದ್ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಜಿ. ಹರಗೋಪಾಲ್, ತೆಲಂಗಾಣ ಸಿವಿಲ್ ಲಿಬರ್ಟೀಸ್ ಕಮಿಷನ್, ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಆರ್. ದಾರಾಪುರಿ, ಅಖಿಲ ಭಾರತ ಪ್ರಜಾ ವೇದಿಕೆ, ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಮನೋರಂಜನ್ ಮೊಹಂತಿ, ದೆಹಲಿಯ ಸ್ಟೀಫನ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ನಂದಿತಾ ನಾರಾಯಣ್ ಮೊದಲಾದವರು ಸೇರಿದ್ದಾರೆ.

ಇತ್ತೀಚಿನ ಘಟನೆಯೆಂದರೆ, 2023ರ ಡಿಸೆಂಬರ್ 10ರಂದು ವಿಶ್ವ ಸಂಸ್ಥೆ ಘೋಷಿತ ಮಾನವ ಹಕ್ಕುಗಳ ದಿನವನ್ನು ಆಚರಿಸಲು ಕೂಡ ಪಾರ್ಲಿಮೆಂಟ್ ರಸ್ತೆಯ ಪೊಲೀಸ್ ಸ್ಟೇಷನ್ ಅನುಮತಿ ನಿರಾಕರಿಸಿದೆ ಎಂದು ಪತ್ರದಲ್ಲಿ ಹೇಳಲಾಗಿದೆ. 40 ಜನತಾಂತ್ರಿಕ ಸಂಘಟನೆಗಳ ಸಮೂಹವಾದ ಸಿಎಎಸ್‌ಆರ್ ವತಿಯಿಂದ 12 ದಿನಗಳ ಮೊದಲೇ ಅನುಮತಿಗಾಗಿ ಕೋರಿದ್ದರೂ ಕೂಡ ಕೇವಲ 14 ಗಂಟೆಗಳ ಮೊದಲು ಸಂಘಟಕರಿಗೆ ಅನುಮತಿ ನಿರಾಕರಿಸಿರುವ ಮಾಹಿತಿ ನೀಡಲಾಯಿತು ಎಂದು ಅವರು ಆರೋಪಿಸಿದ್ದಾರೆ.

2023ರ ಮಾರ್ಚ್ 15ರಂದು ಸಿಎಎಎಸ್‌ಅರ್ ವತಿಯಿಂದ ಆಯೋಜಿಸಲಾದ ಕಾಶ್ಮೀರದಲ್ಲಿ ಮಾಧ್ಯಮಗಳ ಬಹಿಷ್ಕಾರ, ಸ್ವತಂತ್ರ ಮಾಧ್ಯಮಗಳ ಮೇಲಿನ ದಬ್ಬಾಳಿಕೆ, ಮಾತು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ಕಾಶ್ಮೀರದ ಪತ್ರಕರ್ತರ ಮೇಲಿನ ದಾಳಿಗಳು ಇತ್ಯಾದಿ ವಿಷಯಗಳ ಕುರಿತ ಸಾರ್ವಜನಿಕ ಸಂವಾದವನ್ನು ಪೊಲೀಸರು ಅನುಮತಿ ನಿರಾಕರಿಸಿರುವ ಕಾರಣಕ್ಕೆ ರದ್ದು ಪಡಿಸಬೇಕಾಯಿತು ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೇವಲ 2 ಗಂಟೆಗಳ ಮೊದಲು ಮಾಹಿತಿ ನೀಡಿ, ಕಾರ್ಯಕ್ರಮ ನಡೆಯುವ ಗಾಂಧಿ ಶಾಂತಿ ಪ್ರತಿಷ್ಠಾನದ ದಾರಿಗಳಿಗೆ ತಡೆಯೊಡ್ಡಲಾಯಿತು. ಆ ಕಾರ್ಯಕ್ರಮದಲ್ಲಿ ಜಮ್ಮು ಕಾಶ್ಮೀರದ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಮೂರ್ತಿ ಜಸ್ಟಿಸ್ ಹುಸೇನ್ ಮಸೂದಿ ಸೇರಿದಂತೆ ಮಾಜಿ ಶಾಸಕರು ಮತ್ತು ಹೆಸರಾಂತ ಬುದ್ಧಿಜೀವಿಗಳು ಮಾತನಾಡಲಿದ್ದರು.

ಅದೇ ರೀತಿ, ನವದೆಹಲಿಯ ಸುರ್ಜೀತ್ ಭವನದಲ್ಲಿ ಆಯೋಜಿಸಿದ್ದ ಭಾರತ್ ಬಚಾವೋ ರಾಷ್ಟ್ರೀಯ ಸಮಾವೇಶಕ್ಕೆ ಪೊಲೀಸರು ಅನುಮತಿ ನಿರಾಕರಿಸಿದ್ದರಿಂದ, ಸಂಘಟಕರು ದೆಹಲಿ ನ್ಯಾಯಾಲಯದಿಂದ ಅನುಮತಿ ಪಡೆಯಬೇಕಾಯಿತು ಎಂದು ಪತ್ರದಲ್ಲಿ ಹೇಳಲಾಗಿದೆ. ಇಂತಹ ಹಲವಾರು ಕಾರ್ಯಕ್ರಮಗಳಿಗೆ ಕಾನೂನು ಸುವ್ಯವಸ್ಥೆ, ಸುರಕ್ಷತೆ ಯಂತಹ ಅಸ್ಪಷ್ಟ ಕಾರಣಗಳನ್ನು ನೀಡಿ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ.

ದೆಹಲಿ ಪೊಲೀಸರು ತಮ್ಮ ಇಂತಹ ಧೋರಣೆಯನ್ನು ಮುಂದುವರಿಸಿದ್ದು, ಡಿಸೆಂಬರ್ 10ರಂದು, ಐತಿಹಾಸಿಕ ಪ್ರತಿಭಟನಾ ಸ್ಥಳವಾದ ಜಂತರ್ ಮಂತರ್ ನಲ್ಲಿಯೂ ಜನ ಸೇರಲು ಅವಕಾಶ ನೀಡಲಿಲ್ಲ. ಶಾಂತಿಯುತ ನಾಗರಿಕ ಸಂವಾದಗಳನ್ನು ಖಾಸಗಿ ಸ್ಥಳಗಳಲ್ಲಿ ಏರ್ಪಡಿಸಿದಾಗ, ಅಂತಹ ಜಾಗಗಳಿಗೆ ತಡೆಗೋಡೆ ಹಾಕಿ, ಸ್ಥಳದ ಮಾಲೀಕರಿಗೆ ಬೆದರಿಕೆ ಒಡ್ಡಲಾಗಿದೆ. ಇಂತಹ ಚಟುವಟಿಕೆಗಳಿಗಾಗಿ ನಿಗದಿಯಾದ ಜಂತರ್ ಮಂತರ್‌ನಂತಹ ಸಾರ್ವಜನಿಕ ಸ್ಥಳಗಳಿಗೆ ಅನುಮತಿ ಕೋರಿದಾಗ, ಉದ್ದೇಶಪೂರ್ವಕವಾಗಿ, ಹಿಂದಿನ ರಾತ್ರಿ ಅನುಮತಿ ನಿರಾಕರಿಸಲಾಗುತ್ತಿದೆ. ಆ ಮೂಲಕ ಯಾವುದೇ ಪರ್ಯಾಯ ವ್ಯವಸ್ಥೆ ಮಾಡಲು ಸಾಧ್ಯವಾಗದಂತೆ ನೋಡಿಕೊಳ್ಳಲಾಗಿದೆ. ಇಂತಹ ಕ್ರಮಗಳನ್ನು ಜನತೆ ಪ್ರತಿಭಟಿಸಿದಾಗ, ಅವರ ಮೇಲೆ ದೈಹಿಕ ಹಲ್ಲೆ, ಬಂದೂಕಿನ ಹಿಡಿಯಿಂದ ಏಟು, ಬಂಧನ, ಅಪಹರಣ, ಕೊಲೆ ಬೆದರಿಕೆಗಳನ್ನು ಎದುರಿಸಬೇಕಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

“ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಹಿಳೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಸಂಪರ್ಕ ವಿವರಗಳನ್ನು ಪೊಲೀಸರಿಗೆ ನೀಡಿದರೆ, ಪೊಲೀಸರು ಅವರ ಕುಟುಂಬ ಸದಸ್ಯರಿಗೆ ಕರೆ ಮಾಡಿ ಅವರ ಪುತ್ರಿಯರು ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ತಡೆಯಲು ಹೇಳುವ ಮೂಲಕ ವಯಸ್ಕ ವ್ಯಕ್ತಿಗಳ ಮೇಲೆ ಪುರುಷ ಪ್ರಧಾನ ಅಧಿಕಾರ ಬಳಸಿದ್ದಾರೆ “ ಎಂಬ ಅಂಶವನ್ನೂ ಈ ಪತ್ರವು ತಿಳಿಸಿದೆ. (ದ ಟೆಲಿಗ್ರಾಫ್ 03.01.2024) ■



## ತಮಿಳುನಾಡು ಅತಿವೃಷ್ಟಿ :

# ಜನರ ನೆರವಿಗೆ ಧಾವಿಸದ ಕೇಂದ್ರ, ರಾಜ್ಯ ಸರ್ಕಾರಗಳು

ತಮಿಳುನಾಡಿನಲ್ಲಿ ಇತ್ತೀಚೆಗೆ ಮುಂಗಾರಿನಲ್ಲಿ ಉಂಟಾದ ಭೀಕರ ಪ್ರವಾಹವು ದುಃಸ್ವಪ್ನದಂತೆ ಕಾಡಿದೆ. ಇತ್ತೀಚಿನ ದಿನಗಳಲ್ಲಿ ಆ ರಾಜ್ಯದ ಉತ್ತರ ಭಾಗದಲ್ಲಿರುವ ಜಿಲ್ಲೆಗಳಾದ ಚೆನ್ನೈ, ಕಾಂಚಿಪುರಂ, ಚೆಂಗಲ್‌ಪಟ್ಟು ಮತ್ತು ತಿರುವಳ್ಳೂರುಗಳಲ್ಲಿ ಕಳೆದ ಡಿಸೆಂಬರ್‌ನ ಆರಂಭದಲ್ಲಿ ಮಿಚಾಂಗ್ ಚಂಡ ಮಾರುತದ ಪರಿಣಾಮ ವಿಪರೀತ ಬಿರುಗಾಳಿ ಹಾಗೂ ಪ್ರವಾಹಗಳು ಭಾರಿ ಪ್ರಮಾಣದ ಹಾನಿಯನ್ನುಂಟು ಮಾಡಿದವು.

ನಂತರ ದಕ್ಷಿಣದ ನಾಲ್ಕು ಜಿಲ್ಲೆಗಳಾದ ತಿರುನಲ್ವೇಲಿ, ತೂತುಕುಡಿ, ತೆಂಕಾಸಿ ಮತ್ತು ಕನ್ಯಾಕುಮಾರಿಗಳಲ್ಲಿ ಡಿಸೆಂಬರ್ ಮೂರನೇ ವಾರದಲ್ಲಿ ವಿನಾಶಕಾರಿ ಪ್ರವಾಹ ಉಂಟಾಯಿತು. ಈ ಹವಾಮಾನ ವೈಪರೀತ್ಯ ಹಾಗೂ ಪ್ರಾಕೃತಿಕ ವಿಕೋಪಗಳನ್ನು ಎದುರಿಸುವಲ್ಲಿ ತಮಿಳುನಾಡಿನ ಡಿಎಂಕೆ ಸರ್ಕಾರ ಹಾಗೂ ಕೇಂದ್ರದ ಬಿಜೆಪಿ ಸರ್ಕಾರಗಳು ಯಾವುದೇ ಸಿದ್ಧತೆ ಮಾಡಿಕೊಳ್ಳದೇ ಕೈಚೆಲ್ಲಿದ್ದವು ಎಂಬುದನ್ನು ಇದು ತಿಳಿಸುತ್ತದೆ.

### ತಮಿಳುನಾಡು ಉತ್ತರ ಜಿಲ್ಲೆಗಳಲ್ಲಿ ಊಹಿಸಲಾಗದಷ್ಟು ಸಂಕಷ್ಟ

ವಿಪರೀತ ಬಿರುಗಾಳಿ ಹಾಗೂ ಪ್ರವಾಹದಿಂದಾಗಿ ತಮಿಳುನಾಡಿನ ಉತ್ತರದ ಜಿಲ್ಲೆಗಳಲ್ಲಿ ಊಹಿಸಲಾಗದಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ. ಸದಾ ಪ್ರವಾಹದಿಂದ ನಲುಗುವ ರಾಜಧಾನಿ ಚೆನ್ನೈನಲ್ಲಿ ಪ್ರಾಕೃತಿಕ ವಿಕೋಪ ಬಲವಾದ ಹೊಡೆತ ನೀಡಿದೆ. 2015ರ ಭಾರಿ ಪ್ರವಾಹವನ್ನು ನೆನಪಿಸುವಂತೆ ಪ್ರವಾಹವು ಜನಜೀವನಕ್ಕೆ ಭೀಕರ ಹಾನಿಯನ್ನು ಮಾಡಿದೆ. ಮಿಚಾಂಗ್ ಚಂಡಮಾರುತವು ಆಂಧ್ರಪ್ರದೇಶದ ಕರಾವಳಿಗೆ 2023ರ ಡಿಸೆಂಬರ್ 5ರಂದು ಅಪ್ಪಳಿಸಿತು. ಇದರಿಂದಾಗಿ ಭಾರಿ ಪ್ರಮಾಣದ ಮಳೆ ಮತ್ತು ಗಂಟೆಗೆ 100ರಿಂದ 110 ಕಿ.ಮೀ. ವೇಗದಲ್ಲಿ ಗಾಳಿಯು ಚೆನ್ನೈ ಸೇರಿದಂತೆ ಉತ್ತರದ ಕರಾವಳಿ ಜಿಲ್ಲೆಗಳತ್ತ ಬೀಸಲಾರಂಭಿಸಿತ್ತು. ನಿಧಾನವಾಗಿ ಆರಂಭವಾದ ಚಂಡಮಾರುತದ ಅಬ್ಬರ ಡಿಸೆಂಬರ್ 3, 4ರಂದು 40 ಸೆಂಟಿ ಮೀಟರ್‌ನಷ್ಟು ಮಳೆಯನ್ನು ಸುರಿಸಿತ್ತು.

ಚೆನ್ನೈನ ಉತ್ತರ ಹಾಗೂ ಮಧ್ಯ ಭಾಗದಲ್ಲಿ ವಾಸಿಸುವ ಬಹುತೇಕ ಜನರು ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದವರು. ಈ ಪ್ರವಾಹದಿಂದಾಗಿ ಭಾರಿ ಪ್ರಮಾಣದ ಹಾನಿಗೊಳಗಾಗಿದ್ದು ಇವರ ಮನೆಗಳೇ. ಪ್ರವಾಹದ ನೀರು ನುಗ್ಗಿದ್ದರಿಂದ ಸಾಕಷ್ಟು ಶ್ರಮ ಹಾಕಿ ಕಟ್ಟಿಸಿದ್ದ ಮನೆಗಳನ್ನು ಅಲ್ಲಿಯೇ ಬಿಟ್ಟು ಬೇರೆಡೆ ಸ್ಥಳಾಂತರಗೊಳ್ಳಬೇಕಾಯಿತು. ಜೊತೆಗೆ, ಹಲವು ಅತ್ಯವಶ್ಯಕ ವಸ್ತುಗಳು ನೀರು ಪಾಲಾದವು. ಏತನ್ಮಧ್ಯೆ, ಮಧ್ಯ ಚೆನ್ನೈನ ಅಪಾರ್ಟ್‌ಮೆಂಟ್ ಹಾಗೂ ಮನೆಗಳ ಬಳಿ ಪ್ರವಾಹದ ನೀರಿನ ಮಟ್ಟ ಹೆಚ್ಚಾಗಿ ಅಪಾರ ಪ್ರಮಾಣದ ಜಲರಾಶಿ ನಿಂತಿದ್ದರಿಂದ ಮನೆಯಲ್ಲಿ ಹಾಗೂ ಅಪಾರ್ಟ್‌ಮೆಂಟ್‌ನಲ್ಲಿದ್ದವರು ಅತ್ಯವಶ್ಯಕ ವಸ್ತುಗಳು ಸಿಗದೇ ಪರದಾಡಬೇಕಾಯಿತು. ನಾಲ್ಕು ದಿನಗಳವರೆಗೆ ಕುಡಿಯುವ ನೀರು, ಆಹಾರ, ವಿದ್ಯುತ್ ಮತ್ತು ಸಂಪರ್ಕ ವ್ಯವಸ್ಥೆ ಸಂಪೂರ್ಣ ಕೈಕೊಟ್ಟಿತ್ತು.

ಪ್ರವಾಹದ ನೀರು ಇಳಿದ ನಂತರದ ಚಿತ್ರಣ ಭಯಾನಕವಾಗಿತ್ತು. ಮಕ್ಕಳ ಶಾಲಾ ಪುಸ್ತಕಗಳನ್ನು ಪ್ರವಾಹದ ನೀರು ಆಪೋಶನ ತೆಗೆದುಕೊಂಡಿತ್ತು. ಹಿರಿಯರು ತಮ್ಮ ಔಷಧಿ ಹಾಗೂ ಪ್ರಮುಖ ದಾಖಲೆಗಳನ್ನು ಕಳೆದುಕೊಂಡಿದ್ದರು. ಇನ್ನೂ ಹಲವರಿಗೆ ತಕ್ಷಣಕ್ಕೆ ಅಗತ್ಯವಾಗಿದ್ದ ವೈದ್ಯಕೀಯ ನೆರವೂ ಸಿಗಲಿಲ್ಲ. ಎಲ್ಲಿ ಬೇಕಲ್ಲಿ ನೀರು ನುಗ್ಗಿದ್ದರಿಂದ ಆಂಬುಲೆನ್ಸ್‌ಗಳು ನೆರವಿಗೆ ಧಾವಿಸಲು ಸಾಧ್ಯವಾಗಲಿಲ್ಲ. ಹಲವು ದಿನಗಳವರೆಗೆ ರೈಲು ಹಾಗೂ ಬಸ್ ಸೇವೆಯೂ ಸ್ಥಗಿತಗೊಂಡಿತ್ತು, ಮೂರು ದಿನಗಳವರೆಗೆ ಚೆನ್ನೈ ವಿಮಾನ ನಿಲ್ದಾಣ ಕಾರ್ಯಾಚರಣೆಯನ್ನು ರದ್ದುಗೊಳಿಸಿತ್ತು. ಪ್ರವಾಹ ಪೀಡಿತ ಜಿಲ್ಲೆಗಳ ಶಾಲಾ, ಕಾಲೇಜುಗಳಿಗೆ ಒಂದು ವಾರದವರೆಗೆ ರಜೆ ಘೋಷಿಸಲಾಗಿತ್ತು. ಪ್ರವಾಹದ ಹೊಡೆತಕ್ಕೆ ನೂರಾರು ವಾಹನಗಳು ಕೊಚ್ಚಿಕೊಂಡು ಹೋಗಿದ್ದವು. ಸಾವಿರಾರು ವಾಹನಗಳು ತೀವ್ರ ಹಾನಿಗೀಡಾಗಿದ್ದವು. ಇದೆಲ್ಲಕ್ಕಿಂತ ಹೆಚ್ಚಾಗಿ ಮೀನುಗಾರರಿಗೆ ಸೇರಿದ ದೋಣಿಗಳು ಹಾಗೂ ಬಲೆಗಳು ಹಾನಿಗೀಡಾಗಿದ್ದರಿಂದ ಮೀನುಗಾರಿಕೆ ನಡೆಸಲು ಸಾಧ್ಯವಾಗಲಿಲ್ಲ.

### ಪರಿಹಾರ ನೀಡುವಲ್ಲಿನ ಕೇಂದ್ರದ ದಿವ್ಯ ನಿರ್ಲಕ್ಷ್ಯ

ತಮಿಳುನಾಡಿನ ಹಲವೆಡೆ ಭಾರಿ ಪ್ರಮಾಣದಲ್ಲಿ ಪ್ರವಾಹ ಉಂಟಾಗಿ ಸಾವಿರಾರು ಕೋಟಿ ಆಸ್ತಿಪಾಸ್ತಿ ನಷ್ಟವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ರೂ. 5 ಸಾವಿರ ಕೋಟಿ ಪರಿಹಾರ ನೀಡುವಂತೆ ಕೇಂದ್ರಕ್ಕೆ ಕೋರಿಕೆ ಸಲ್ಲಿಸಿತ್ತು. ತಮಿಳುನಾಡಿಗೆ ತಕ್ಷಣಕ್ಕೆ ಸಕಾರಾತ್ಮಕ ಬೆಂಬಲ ನೀಡಬೇಕಿದ್ದ ಕೇಂದ್ರ ಸರ್ಕಾರವು ಕೇವಲ ರೂ. 450 ಕೋಟಿ ಪರಿಹಾರವನ್ನು ನೀಡಿ ಕೈತೊಳೆದುಕೊಂಡಿತು. ಆ ಮೂಲಕ ಈ ರಾಜ್ಯದ ಜನತೆಯೆಡೆಗೆ ತನ್ನ ಧೋರಣೆ ಹೇಗಿದೆ ಎಂಬುದನ್ನು ಬಹಿರಂಗಪಡಿಸಿತು. ಜೊತೆಗೆ, ಉದ್ದೇಶಪೂರ್ವಕವಾಗಿಯೇ ತಾರತಮ್ಯ ನಿಲುವನ್ನು ಪ್ರದರ್ಶಿಸಿತು. ತಮಿಳುನಾಡಿನ ಕರಾವಳಿ ಜಿಲ್ಲೆಗಳು ಅದರಲ್ಲೂ ಮುಖ್ಯವಾಗಿ ಉತ್ತರ ಮತ್ತು ದಕ್ಷಿಣ ಜಿಲ್ಲೆಗಳ ಪರಿಸರ ಸೂಕ್ಷ್ಮ ವಲಯದಲ್ಲಿ ಭಾರಿ ಪ್ರಮಾಣದಲ್ಲಿ ಮಳೆ ಸುರಿದರೆ ಅದನ್ನು ನಿರ್ವಹಣೆ ಮಾಡುವ ಯಾವುದೇ ಸಿದ್ಧತೆಗಳನ್ನು ಅಲ್ಲಿನ ಸರ್ಕಾರ ಮಾಡಿಕೊಂಡಿಲ್ಲ. ಹಲವು ಬಾರಿ, ಭಾರಿ ಪ್ರವಾಹದ ಬಗ್ಗೆ ಹವಾಮಾನ ಮುನ್ಸೂಚನಾ ಇಲಾಖೆ ಎಚ್ಚರಿಕೆ ನೀಡಿದ್ದರೂ ಪ್ರವಾಹ ನಿಯಂತ್ರಣದ ಕ್ರಮಗಳನ್ನು ಕೈಗೊಂಡಿಲ್ಲ. ದೇಶದ ಮೇಲೆ ದಾಳಿಯಾದಾಗ ಅದನ್ನು ಎದುರಿಸಲು 10 ಲಕ್ಷ ತರಬೇತಿ ಪಡೆದ ಸುಸಜ್ಜಿತ ಸೈನ್ಯವಿದೆ. ರಕ್ಷಣಾ ವಲಯಕ್ಕೆ ಪ್ರತಿ ವರ್ಷ ಭಾರಿ ಪ್ರಮಾಣದ ಅನುದಾನವನ್ನು ಖರ್ಚು ಮಾಡಲಾಗುತ್ತದೆ. ಆದರೆ, ಜನಸಾಮಾನ್ಯರು ಇಂತಹ ಪ್ರಕೃತಿ ವಿಕೋಪಕ್ಕೆ ಸಿಲುಕಿದಾಗ ಅವರನ್ನು ರಕ್ಷಿಸುವ ಬಗ್ಗೆ ಕೇಂದ್ರ ಸರ್ಕಾರ ಉದಾಸೀನ ಧೋರಣೆ ತಳೆಯುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರವಾಹದ ನೀರನ್ನು ಬೇರೆಡೆ ಸಾಗಿಸುವಲ್ಲಿ ಸಂಪೂರ್ಣ ವಿಫಲವಾಗಿವೆ.

### ಪ್ರಕೃತಿಯ ಮೇಲೆ ದೌರ್ಜನ್ಯ

ಆಗಿಂದಾಗ್ಗೆ ಸಂಭವಿಸುವ ಪ್ರಕೃತಿ ವಿಕೋಪಗಳ ಹಿನ್ನೆಲೆಯಲ್ಲಿ ಚೆನ್ನೈ ನಗರದಲ್ಲಿ ಪ್ರಕೃತಿಯ ಸಮತೋಲನದ ಬಗ್ಗೆ ಹಲವು ಸಂಶಯಗಳು ವ್ಯಕ್ತವಾಗಿವೆ. ನಗರದಲ್ಲಿನ ಜಲಮೂಲಗಳು ಗಣನೀಯವಾಗಿ ಕುಸಿಯುತ್ತಿವೆ. ಎಗ್ಗಿಲ್ಲದೇ ನಡೆದ ನಗರೀಕರಣದಿಂದಾಗಿ 1893ರಲ್ಲಿ 12.6 ಚದರ ಕಿ.ಮೀ. ಇದ್ದ ಜಲಮೂಲಗಳ ಪ್ರಮಾಣ 2017ರಲ್ಲಿ ಕೇವಲ 3.2 ಚದರ ಕಿ.ಮೀ.ಗೆ ಕುಸಿದಿದೆ. ಚೆನ್ನೈನ ಏಕೈಕ ಜವಳು ಪ್ರದೇಶವಾದ ಪಳ್ಳಿಕರನೈ ಮಾರ್ಷಲ್ಯಾಂಡ್ ಪ್ರದೇಶ 1965ರಲ್ಲಿ 5,500 ಹೆಕ್ಟೇರ್ ಇದ್ದರೆ 2013ರಲ್ಲಿ 600 ಹೆಕ್ಟೇರ್‌ಗೆ ಕುಸಿದಿದೆ. ಜೊತೆಗೆ, ಡಿಎಂಕೆ ಸರ್ಕಾರವು ಪರಂದೂರು ಪ್ರದೇಶದಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸಲು ಭೂಸ್ವಾಧೀನ ಮಾಡುವ ಕ್ರಮದ ಬಗ್ಗೆಯೂ ವಿರೋಧಗಳು ವ್ಯಕ್ತವಾಗಿವೆ.

### ಸರ್ಕಾರದ ಹೇಳಿಕೆಗೂ, ವಾಸ್ತವಕ್ಕೂ ಸಂಬಂಧವಿಲ್ಲ

ರಾಜ್ಯದ ಡಿಎಂಕೆ ಸರ್ಕಾರವು ಪ್ರವಾಹ ಸಂಭವಿಸಿದ ಸಂದರ್ಭದಲ್ಲಿ ನೀರನ್ನು ಹೊರಹಾಕುವ ಚರಂಡಿಗಳ ನಿರ್ವಹಣೆ, ಜಲಾಶಯಗಳಲ್ಲಿನ ಹೂಳೆತ್ತುವುದು ಹಾಗೂ ಕಾಲುವೆಗಳ ನಿರ್ವಹಣೆಗಾಗಿ ರೂ. 4 ಸಾವಿರ ಕೋಟಿ ರೂಪಾಯಿಯನ್ನು ಮೀಸಲಾಗಿಡಲಾಗಿದೆಯೆಂದು ಹೇಳಿಕೆ ನೀಡಿದೆ. ಈ ಹೇಳಿಕೆ ಎಷ್ಟು ಪೊಳ್ಳು ಎಂಬುದು ಈಚೆಗೆ ಸುರಿದ 40 ಸೆಂಟಿ ಮೀಟರ್ ಮಳೆ ಸೃಷ್ಟಿಸಿದ ಅವಾಂತರವೇ ಸಾಕ್ಷಿ. ವಾಸ್ತವ ಸಂಗತಿ ಬಯಲಾಗುತ್ತಿದ್ದಂತೆಯೇ ಸರ್ಕಾರವನ್ನು ಮುಜುಗರದಿಂದ ಪಾರು ಮಾಡಲು ಮುಂದಾದ ಪೌರಾಡಳಿತ ನಿರ್ದೇಶನಾಲಯದ ಸಚಿವರು, ಪ್ರವಾಹ ಪರಿಸ್ಥಿತಿ ಎದುರಿಸಲು ರೂ. 5,166 ಕೋಟಿ ಹಂಚಿಕೆಯಾಗಿದ್ದು, ಅದರಲ್ಲಿ ಕೇವಲ ರೂ. 2,191 ಕೋಟಿ ಅನುದಾನವು ಪ್ರವಾಹದ ನೀರನ್ನು ಕೊಂಡೊಯ್ಯುವ ಚರಂಡಿಗಳಿಗೆ ಬಳಕೆ ಮಾಡಲಾಗಿದೆ ಎಂದಿದ್ದರು. ಹಿಂದೆ ಆಡಳಿತ ನಡೆಸಿದ ಎಐಎಡಿಎಂಕೆ ಸರ್ಕಾರವನ್ನು ಬಿಡುಗಡೆಯಾದ ಹಣ ಬಳಸದೇ ಇರುವುದಕ್ಕೆ ಹಾಗೂ ಪ್ರವಾಹ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳದೇ ಇರುವುದು ಸಾರ್ವಜನಿಕ ವಲಯದಲ್ಲಿ ತೀವ್ರವಾಗಿ ಟೀಕೆಗೊಳಪಡಿಸಲಾಯಿತು. ಈ ಸಂಗತಿಯು ಚೆನ್ನೈನಲ್ಲಿ ಆಗಿಂದಾಗ್ಗೆ ಸಂಭವಿಸುತ್ತಿರುವ ಪ್ರವಾಹ ತಡೆಯಲು ಅಗತ್ಯವಾದ ವೈಜ್ಞಾನಿಕ ವಿಧಾನಗಳ ಬಗ್ಗೆ ಚಿಂತಿಸುವಂತೆಯೂ ಸರ್ಕಾರವನ್ನು, ನಗರ ಯೋಜಕರನ್ನು ಒತ್ತಾಯಿಸಿದಂತಾಯಿತು.



**ಈ ಭೀಕರ ಮಳೆಗೆ 3,700 ಗುಡಿಸಲುಗಳು, 170 ಪಕ್ಕಾ ಸುಸಜ್ಜಿತ ಮನೆಗಳು ಕುಸಿದು ಹೋದವು. 1.83 ಲಕ್ಷ ಹೆಕ್ಟೇರ್ ಕೃಷಿ ಭೂಮಿ ನಾಶವಾಯಿತು. 64 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 261 ಆರೋಗ್ಯ ಉಪ ಕೇಂದ್ರಗಳ ಸೇವೆಯಲ್ಲಿ ತೀವ್ರ ವ್ಯತ್ಯಯವುಂಟಾಯಿತು.**

### ದಕ್ಷಿಣದ ಜಿಲ್ಲೆಗಳಲ್ಲಿ ಹೆಚ್ಚಿನ ಹಾನಿ

ಕಳೆದ ಡಿಸೆಂಬರ್ 16ರಿಂದ 18ರವರೆಗೆ ತಮಿಳುನಾಡಿನ ದಕ್ಷಿಣ ಭಾಗದ ಜಿಲ್ಲೆಗಳಾದ ತಿರುನಲ್ವೇಲಿ, ತೂತುಕುಡಿ, ತೆಂಕಸಿ ಹಾಗೂ ಕನ್ಯಾಕುಮಾರಿಗಳಲ್ಲಿ 100 ಸೆಂಟಿ ಮೀಟರ್‌ಗಿಂತ ಹೆಚ್ಚಿನ ಪ್ರಮಾಣದ ಮಳೆ ಸುರಿಯಿತು. ಇದರಿಂದಾಗಿ 35ರಿಂದ 55 ಸಾವುಗಳು ಸಂಭವಿಸಿದವು. ಮನೆಗಳು, ಜಾನುವಾರುಗಳು ಹಾಗೂ ಕೃಷಿ ಉತ್ಪನ್ನಗಳ ಹಾನಿ ಲೆಕ್ಕಕ್ಕೆ ಸಿಗದಂತಾಯಿತು.

ಎಲ್ಲೆಂದರಲ್ಲಿ ಕೊಳೆತ ಪ್ರಾಣಿಗಳ ಶವಗಳು, ಪ್ರವಾಹದ ನೀರು ಬಿಟ್ಟು ಹೋದ ಕೊಳಚೆಯಿಂದಾಗಿ ಸಾಂಕ್ರಾಮಿಕ ರೋಗ ಹರಡುವ ಭೀತಿಯುಂಟಾಯಿತು.

ಇದರಿಂದಾಗಿ ಜನಜೀವನಕ್ಕೆ ತೀವ್ರ ಹಾನಿಯಾಯಿತು. 3,700 ಗುಡಿಸಲುಗಳು, 170 ಪಕ್ಕಾ ಸುಸಜ್ಜಿತ ಮನೆಗಳು ಕುಸಿದು ಹೋದವು. 1.83 ಲಕ್ಷ ಹೆಕ್ಟೇರ್ ಕೃಷಿ ಭೂಮಿ ನಾಶವಾಯಿತು. 64 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 261 ಆರೋಗ್ಯ ಉಪ ಕೇಂದ್ರಗಳ ಸೇವೆಯಲ್ಲಿ ತೀವ್ರ ವ್ಯತ್ಯಯವುಂಟಾಯಿತು. ಹಲವು ಪ್ರದೇಶಗಳಲ್ಲಿ ಚರಂಡಿ ಹಾಗೂ ಕಾಲುವೆಗಳಲ್ಲಿ ನೀರು ನಿಂತುಕೊಂಡದ್ದರಿಂದ ಜನರು ಸರ್ಕಾರಿ ಹಾಗೂ ಖಾಸಗಿ ಪರಿಹಾರ ಶಿಬಿರಗಳಲ್ಲಿ ನೆಲೆ ಕಂಡು ಕೊಳ್ಳಬೇಕಾಯಿತು.

### ತಜ್ಞರ ಸಲಹೆಗಳು

ತಮಿಳುನಾಡಿನಲ್ಲಿರುವ ಐಐಟಿ ಮದ್ರಾಸ್ ಹಾಗೂ ಅಣ್ಣಾ ವಿಶ್ವವಿದ್ಯಾಲಯಗಳಲ್ಲಿ ವಸತಿ ನಿರ್ಮಾಣ ತಜ್ಞರು ಪ್ರವಾಹದಂತಹ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರಗಳನ್ನು ಸೂಚಿಸಬಲ್ಲರು. ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಯು ಮೇ 2022ರಲ್ಲಿ ಮಧ್ಯಂತರ ವರದಿಯನ್ನು ಸಲ್ಲಿಸಿತ್ತು. ಚೆನ್ನೈ ನಗರದ ನದಿಗಳು ಹಾಗೂ ಪ್ರವಾಹದ ನೀರು ಸಾಗಿಸುವ ಕಾಲುವೆಗಳ ಮೂಲಕ ಪ್ರವಾಹ ನಿಯಂತ್ರಣಕ್ಕೆ ಬರುವುದಿಲ್ಲ ಎಂದು ಹೇಳಿತ್ತು. 2023ರ ಮೇ ತಿಂಗಳಲ್ಲಿ ಸಮಿತಿ ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದು, ಅದನ್ನು ಇಲ್ಲಿಯವರೆಗೂ ಬಹಿರಂಗಪಡಿಸದೇ ಇರುವುದನ್ನು ನೋಡಿದರೆ ಹಲವು ಸಂಶಯಗಳು ಉಂಟಾಗುತ್ತವೆ.

### ಮಾಡಬೇಕಾದುದು ಏನು?

ಪ್ರವಾಹ ನಿಯಂತ್ರಣಕ್ಕೆ ಎಲ್ಲರ ಸಹಯೋಗದೊಂದಿಗೆ ವೈಜ್ಞಾನಿಕ ವಿಧಾನಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳಬೇಕಾದ ತುರ್ತು ಅಗತ್ಯವಿದೆ. ಭಾರತದ ಇತರ ಮಹಾನಗರಗಳಾದ ದೆಹಲಿ, ಬೆಂಗಳೂರು, ಅಹ್ಮದಾಬಾದ್, ಹೈದರಾಬಾದ್ ಅಲ್ಲದೇ ಕೇರಳದ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಇಂತಹುದೇ ಪ್ರವಾಹ ಪರಿಸ್ಥಿತಿ ಏರ್ಪಡುತ್ತದೆ. ಜನಗಳ ಹಿತಾಸಕ್ತಿಗನುಗುಣವಾಗಿ ಇಲ್ಲಿನ ಸರ್ಕಾರಗಳು ಒಂದು ಶಾಶ್ವತ ಪರಿಹಾರ ಕಂಡುಕೊಳ್ಳಲು ವಿಫಲವಾಗಿವೆ ಎಂದೇ ಹೇಳಬೇಕಾಗುತ್ತದೆ. ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಮಣಿದ ಸರ್ಕಾರಗಳು ನೈಸರ್ಗಿಕ ವಿಕೋಪ ಸಂಭವಿಸಬಹುದು ಎಂಬುದನ್ನೂ ಲೆಕ್ಕಿಸದೇ ಮಿತಿಮೀರಿದ ನಗರೀಕರಣಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ನೀಡುತ್ತಾರೆ. ಅದರಿಂದ ಅನೈತಿಕ ಮಾರ್ಗದ ಮೂಲಕ ಲಾಭವನ್ನೂ ಪಡೆದುಕೊಳ್ಳುತ್ತಾರೆ.

ಪ್ರವಾಹ ತಡೆಯಲು ವೈಜ್ಞಾನಿಕ ವಿಧಾನವನ್ನು ಅಳವಡಿಸಬೇಕು ಮತ್ತು ತಕ್ಷಣದ ಲಾಭಕ್ಕಾಗಿ ರಿಯಲ್ ಎಸ್ಟೇಟ್ ಕುಳಗಳಿಗೆ ಎಲ್ಲ ನಿಯಮಾವಳಿಗಳನ್ನು ಉಲ್ಲಂಘಿಸಿ ವಸತಿ ಬಡಾವಣೆಗಳನ್ನು ನಿರ್ಮಿಸಲು ಅವಕಾಶ ನೀಡದಂತೆ ಒತ್ತಾಯಿಸಿ ಪ್ರಬಲ ಜನ ಚಳವಳಿಯನ್ನು ಬೆಳೆಸಬೇಕಿದೆ.

# ಸಮಾಜವಾದಿ ಕ್ರಾಂತಿಯ ರೂವಾರಿ ಲೆನಿನ್ ಮರಣ ಶತಾಬ್ದಿ ಕಾರ್ಯಕ್ರಮಗಳು

ಕಾರ್ಮಿಕ ವರ್ಗದ ಮಹಾನ್ ನಾಯಕ ಹಾಗೂ ಪ್ರಥಮ ಸಮಾಜವಾದಿ ಕ್ರಾಂತಿಯ ರೂವಾರಿ ಲೆನಿನ್‌ರವರ 100ನೇ ಮರಣ ವಾರ್ಷಿಕ ಸಂದರ್ಭದಲ್ಲಿ ನಮ್ಮ ಪಕ್ಷ ಎಸ್‌ಯುಸಿಐ (ಕಮ್ಯುನಿಸ್ಟ್)ನ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ನಾಲ್ಕು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಬೆಂಗಳೂರಿನ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಎಸ್‌ಯುಸಿಐ(ಸಿ) ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣರವರು ಮಾರ್ಕ್ಸ್‌ವಾದ ಸಿದ್ಧಾಂತವು ನಿಂತ ನೀರಲ್ಲ, ಅದು ಕ್ರಿಯೆಗೆ ವೈಜ್ಞಾನಿಕ ಮಾರ್ಗದರ್ಶಿಯಾಗಿದೆ. ಮಾರ್ಕ್ಸ್‌ವಾದವನ್ನು ಕೇವಲ ಅರ್ಥೈಸಿಕೊಂಡರೆ ಸಾಲದು, ಅದನ್ನು ಆಚರಣೆಗೆ ತರಬೇಕಾಗುತ್ತದೆ. ನಮ್ಮ ಜೀವನದಲ್ಲಿ ನಾವು ಮಾರ್ಕ್ಸ್‌ವಾದವನ್ನು ಪಾಲಿಸುತ್ತಿದ್ದೇವೆಂದರೆ, ನಮ್ಮ ಜೀವನದಲ್ಲಿ ಅದರ ಚಿಂತನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ನಾವೂ ಆ ತತ್ವಕ್ಕೆ ಬದ್ಧರಾಗಿ ಬದಲಾಗಬೇಕಾಗುತ್ತದೆ, ಇಲ್ಲದಿದ್ದರೆ ಅದು ಪರಿಷ್ಕರಣಾವಾದಕ್ಕೆ ಈಡಾಗುತ್ತದೆ, ಎಂದು ಹೇಳಿದರು.

ಮುಂದುವರೆದು ಅವರು "ಈ ಹಿನ್ನೆಲೆಯಲ್ಲಿ ಈ ಜಗತ್ತು ಕಂಡ ಮಹಾನ್ ಕ್ರಾಂತಿಕಾರಿ ಲೆನಿನ್ ಅವರು ಮಾರ್ಕ್ಸ್‌ವಾದವನ್ನು ಗ್ರಹಿಸಿದ್ದಲ್ಲದೇ, ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದರು, ಅದೇ ರಷ್ಯನ್ ಮಹಾಕ್ರಾಂತಿ. ಅವರ ನಂತರ ಬಂದ ಇನ್ನೋರ್ವ ಮಹಾನ್ ನಾಯಕ ಹಾಗೂ ಕ್ರಾಂತಿಕಾರಿ ಸ್ಟಾಲಿನ್ ಅವರು, ಲೆನಿನ್‌ವಾದದ ಕುರಿತಾಗಿ ಹೀಗೆ ನುಡಿದರು, "ಸಾಮ್ರಾಜ್ಯವಾದ ಮತ್ತು ಕಾರ್ಮಿಕವರ್ಗದ ಕ್ರಾಂತಿಗಳ ಯುಗದ ಮಾರ್ಕ್ಸ್‌ವಾದವೇ ಲೆನಿನ್‌ವಾದ".

ಬಿಡುಗಡೆಯಾಗಿರುವ ನಾಲ್ಕು ಪುಸ್ತಕಗಳ ಸಂಕ್ಷಿಪ್ತ ವಿವರಣೆ ಕೆಳಕಂಡಂತಿದೆ:




**ನಮ್ಮ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಕಾ॥ ಕೆ. ರಾಧಾಕೃಷ್ಣರಿಂದ ಕಾಮ್ರೇಡ್ ಶಿವದಾಸ್ ಘೋಷ್‌ರವರ ನಾಲ್ಕು ಕೃತಿಗಳ ಬಿಡುಗಡೆ. ರಾಜ್ಯ ಕಾರ್ಯದರ್ಶಿಗಳಾದ ಕಾ॥ ಕೆ. ಉಮಾ ಹಾಗೂ ರಾಜ್ಯ ಸಮಿತಿಯ ಇತರ ಸದಸ್ಯರು ಉಪಸ್ಥಿತರಿದ್ದಾರೆ.**

1) ನವೆಂಬರ್ ಮಹಾಕ್ರಾಂತಿಯ ಪತಾಕೆ ಎತ್ತಿ ಹಿಡಿಯಿರಿ: ವಿಶ್ವದ ರೂಪ ರೇಷೆಯನ್ನೇ ಬದಲಿಸಿದ ದುಡಿಯುವ ಜನತೆಗೆ ಆಶಾಕಿರಣವಾಗಿ ಹೊರಹೊಮ್ಮಿದ ಸೋವಿಯತ್ ಸಮಾಜವಾದಿ ಸಮಾಜವನ್ನು ಸೃಷ್ಟಿಸಿದ ಮಹಾನ್ ನವೆಂಬರ್ ಕ್ರಾಂತಿಯ ಬಹುಮುಖ್ಯ ಪಾಠಗಳನ್ನು ಈ ಚರ್ಚೆಯಲ್ಲಿ ಶಿವದಾಸ್ ಘೋಷ್ ವಿವರಿಸಿದ್ದಾರೆ.

2) ವೈಜ್ಞಾನಿಕ ದ್ವಂದ್ವಾತ್ಮಕ ವಿಧಾನಕ್ರಮವೇ ಮಾರ್ಕ್ಸ್‌ವಾದಿ ವಿಜ್ಞಾನ: ಮಾರ್ಕ್ಸ್‌ವಾದವೇ ವಿಜ್ಞಾನ ಎನ್ನುವ ಮತ್ತು ಅದರ ತಿರುಳು ವೈಜ್ಞಾನಿಕ ದ್ವಂದ್ವಾತ್ಮಕ ವಿಧಾನಕ್ರಮವೆನ್ನುವ ಮೂಲಭೂತ ಅಂಶವನ್ನು ಈ ಚರ್ಚೆಯಲ್ಲಿ ಶಿವದಾಸ್ ಘೋಷ್ ತೋರಿಸಿಕೊಟ್ಟಿದ್ದಾರೆ.

3) ಚೆಕೊಸ್ಲೋವಾಕಿಯಾದಲ್ಲಿ ಸೋವಿಯತ್ ಮಿಲಿಟರಿ ಹಸ್ತಕ್ಷೇಪ ಮತ್ತು ಪರಿಷ್ಕರಣವಾದ: ಈ ಪುಸ್ತಕದಲ್ಲಿ ಚೆಕೊಸ್ಲೋವಾಕಿಯಾದಲ್ಲಿ ಸೋವಿಯತ್ ಒಕ್ಕೂಟವು ನಡೆಸಿದ ಸೈನಿಕ ಕಾರ್ಯಾಚರಣೆಯನ್ನು ಗಮನಿಸಿ ಆ ವಿದ್ಯಮಾನದ ಹಿನ್ನೆಲೆಯನ್ನು ವಿಶ್ಲೇಷಿಸಿದ್ದಾರೆ. ಅದರ ಮೂಲದಲ್ಲಿ ಸೋವಿಯತ್ ಒಕ್ಕೂಟದಲ್ಲಿ ಹುಟ್ಟಿದ ಪರಿಷ್ಕರಣವಾದವೇ ಕಾರಣ ಎಂಬುದನ್ನು ಈ ಚರ್ಚೆಯಲ್ಲಿ ತೋರಿಸಿಕೊಟ್ಟಿದ್ದಾರೆ.

4) ಭಾರತದಲ್ಲಿ ಜನ ಹೋರಾಟಗಳ ಸಮಸ್ಯೆಗಳು: 1975ರಲ್ಲಿ ತುರ್ತು ಪರಿಸ್ಥಿತಿಯ ಹೇರಿಕೆಯ ಕೊಂಚ ಸಮಯ ಮುಂಚಿತವಾಗಿ ನಮ್ಮ ದೇಶದಲ್ಲಿದ್ದ ರಾಜಕೀಯ ಪರಿಸ್ಥಿತಿಯನ್ನು ಮತ್ತು ಅದನ್ನು ಇಂದಿನ ತಲೆಮಾರು ಅರಿತುಕೊಳ್ಳುವುದರ ಅಗತ್ಯ ಮತ್ತು ಅದರ ಪ್ರಸ್ತುತತೆಯನ್ನು ಈ ಚರ್ಚೆಯಲ್ಲಿ ಶಿವದಾಸ್ ಘೋಷ್ ತೋರಿಸಿಕೊಟ್ಟಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ, ಕಾ. ಕೆ. ಉಮಾ ವಹಿಸಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಪಕ್ಷದ ಸದಸ್ಯರುಗಳು ಹಾಗೂ ಬೆಂಬಲಿಗರು ಉಪಸ್ಥಿತರಿದ್ದರು. ■



**ದಾವಣಗೆರೆ : ಪುಸ್ತಕ ಬಿಡುಗಡೆ**



**ಧಾರವಾಡ**




**ಮೈಸೂರು : ಎಐಡಿಎಸ್‌ಓ - ವಿದ್ಯಾರ್ಥಿಗಳೊಡನೆ ಲೆನಿನ್‌ರ ಕುರಿತು ಚರ್ಚೆ**



**ಮುಂಡಗೋಡ-ಉ.ಕ : ಎಐಯುಟಿಯುಸಿ - ಕಾರ್ಮಿಕರ ನಡುವೆ ಲೆನಿನ್ ಸ್ಮರಣ ದಿನಾಚರಣೆ**

# ಭಾರತದಲ್ಲಿ ಅಸಮಾನತೆಯು ಹೆಚ್ಚುತ್ತಿದೆ ಎಂಬುದೆಲ್ಲ ಕಟ್ಟುಕಥೆ : ಕೇಂದ್ರ ಹಣಕಾಸು ಸಚಿವೆ!!

ಭಾರತದಲ್ಲಿ ಅಸಮಾನತೆಯು ಹೆಚ್ಚುತ್ತಿದೆ ಎಂಬ ಆರೋಪವು ಕಟ್ಟುಕಥೆಯಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. 140 ಕೋಟಿ ಜನಸಂಖ್ಯೆಯಲ್ಲಿ ಕೇವಲ ಶೇಕಡ ಮೂರರಷ್ಟು ಜನರು ಭಾಗವಹಿಸಿದ್ದ ಸ್ಯಾಂಪಲ್ ಸರ್ವೆಯನ್ನು ಆಧರಿಸಿ ತಯಾರಿಸಿದ ಎಸ್‌ಬಿಐನ ಆರ್ಥಿಕ ಸಂಶೋಧನಾ ಇಲಾಖೆಯ ವರದಿಯನ್ನು ಅವರು ಉಲ್ಲೇಖಿಸಿದ್ದಾರೆ. ಈ ವರದಿಯನ್ನು ಮುಂದಿಟ್ಟು 'ದೇಶದ ಆರ್ಥಿಕ ಬೆಳವಣಿಗೆಯು ಅಸಮಾನವಾಗಿಲ್ಲ' ಎಂಬಂತಹ ವಾದವನ್ನು ಹರಿಬಿಡುತ್ತಿರುವ ವಕ್ತಾರರು, ಪಿರಮಿಡ್ಡಿನ ಕೆಳಭಾಗದಲ್ಲಿ ನಡೆಯುತ್ತಿರುವ ಭಾರಿ ಪ್ರಮಾಣದ ವಲಸೆಯನ್ನು ಗಮನಿಸುತ್ತಿಲ್ಲ.

ರೂ 3.5 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವವರಲ್ಲಿ, ಶೇಕಡ 36.3% ಜನರು, ಹೆಚ್ಚಿನ ಆದಾಯವಿರುವ ಗುಂಪಿಗೆ ಏರಿದ್ದಾರೆಂಬುದು ವರದಿಯ ಒಂದು ವಾದ. ಆದರೆ, ಈ ಒಂದು ಅಂಶವು ಅದು ಹೇಗೆ ಅಸಮಾನತೆಯು ಹೆಚ್ಚುತ್ತಿದೆ ಎಂಬ ಸತ್ಯವನ್ನು ಹುಸಿಗೊಳಿಸುತ್ತದೆ?

ಆಕ್ಸ್‌ಫಾಮ್ ವರದಿಯು ಬಹಿರಂಗ ಪಡಿಸಿರುವಂತೆ, ಭಾರತದ ಮೇಲ್ಪದರದ ಕೇವಲ 1%ರಷ್ಟು ಜನರು ದೇಶದ ಶೇ 40.5%ರಷ್ಟು ಸಂಪತ್ತಿನ ಮೇಲೆ ತಮ್ಮ ಒಡೆತನವನ್ನು ಹೊಂದಿದ್ದಾರೆ. ಇನ್ನೊಂದೆಡೆ, ಶೇ 50%ರಷ್ಟು ಜನರು ದೇಶದ ಸಂಪತ್ತಿನ ಶೇ 3%ರ ಒಡೆತನಕ್ಕೆ ಸೀಮಿತಗೊಂಡಿದ್ದಾರೆ. ಯುಎನ್‌ಓ ಪ್ರಕಾರ, ಭಾರತದ 100 ಕೋಟಿ ಬಡವರಿಗೆ ತಮ್ಮ ಜೀವನದ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಭಾರತದ ಅಗರ್ಭ ಶ್ರೀಮಂತರ ಪೈಕಿ ಮೊದಲ ಸ್ಥಾನದಲ್ಲಿರುವ ಗೌತಮ್ ಅದಾನಿಯವರ ಸಂಪತ್ತು 2022 ರಲ್ಲಿ ಶೇ 46%ರಷ್ಟು ಏರಿಕೆ ಕಂಡಿದೆ (ಒಟ್ಟು ಸಂಪತ್ತು 6.54 ಲಕ್ಷ ಕೋಟಿ), ಭಾರತದ 100 ಶ್ರೀಮಂತರ ಆದಾಯವು 660 ಬಿಲಿಯನ್ ಡಾಲರ್ ಮುಟ್ಟಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮುಖೇಶ ಅಂಬಾನಿಯ ಆದಾಯ ಪ್ರತಿ ಗಂಟೆಗೆ 90 ಕೋಟಿ ರೂ. ! (ಈಗ ಒಟ್ಟು ಆದಾಯವು 8.30 ಲಕ್ಷಕೋಟಿ). 3.2 ಕೋಟಿ ಜನರು ಮಧ್ಯಮ ವರ್ಗದಿಂದ ಕೆಳಗೆ ಬಿದ್ದಿದ್ದಾರೆ. ಅಂದರೆ, 3.2 ಕೋಟಿ ಜನರು ಈಗ ಬಡತನಕ್ಕೆ ದೂಡಲ್ಪಟ್ಟಿದ್ದಾರೆ. ಪ್ರತಿ ದಿನ 20 ಕೋಟಿ ಭಾರತೀಯರು ಉಪವಾಸ ಮಲಗುತ್ತಾರೆ ಮತ್ತು ಪ್ರತಿವರ್ಷ 25 ಲಕ್ಷ ಜನ ಹಸಿವೆಯಿಂದ ಸಾವನ್ನಪ್ಪುತ್ತಾರೆ.

ಆರ್ಥಿಕ ಇಲಾಖೆಯ ಅಧಿಕಾರಿಗಳೇ ಒಪ್ಪಿಕೊಳ್ಳುವಂತೆ, ಅವಶ್ಯಕ ವಸ್ತುಗಳ ಖರೀದಿಗಾಗಿನ ಬೇಡಿಕೆಯು ಶೇ 100 ರಷ್ಟು ಇಳಿದಿದೆ. ಒಟ್ಟು ಗೃಹಬಳಕೆಯ ವೆಚ್ಚವು ಕೂಡ ಹಠಾತ್ ಕುಸಿತವನ್ನು ಕಂಡಿದೆ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತವು 123 ದೇಶಗಳ ಪೈಕಿ 111ನೇ ಸ್ಥಾನಕ್ಕೆ ಇಳಿದಿದೆ. 2/3ರಷ್ಟು ಭಾರತಿಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಮುಖೇಶ್ ಅಂಬಾನಿಯ ಮಡದಿ ನೀತಾ ಅಂಬಾನಿಯು ಬೆಳಗಿನ ಚಹಾವನ್ನು 3,00,000 ರೂಪಾಯಿಯ ಕಪ್ಪಿನಲ್ಲಿ ಸೇವಿಸುತ್ತಾರೆ. ಜಪಾನಿನ ಹಳೆಯ ಪಿಂಗಾಣಿ ತಯಾರಿಕಾ ಕಂಪನಿಯಾದ ನೊರಿಟೆಕ್‌ನಿಂದ ತಯಾರಿಸಲ್ಪಟ್ಟಿರುವ ಈ ಟೀ ಸೆಟ್ಟಿನ ಬೆಲೆ ಕೇವಲ 1.5 ಕೋಟಿ ರೂಪಾಯಿ! ಈ ಪಟ್ಟಿಯು ಹೀಗೆಯೇ ಬೆಳೆಯುತ್ತಾ ಹೋಗುತ್ತದೆ. ಈಗ, ಕೇಂದ್ರ ಹಣಕಾಸು ಸಚಿವರ ಮಾತನ್ನು ಏನೆಂದು ಕರೆಯಬಹುದು– ವರ್ಷದ ದೊಡ್ಡ ಹಾಸ್ಯ ಚಟಾಕಿಯೆಂದೋ ಅಥವಾ ಹಸಿ ಸುಳ್ಳನ್ನೇ ಬಲವಾಗಿ ಪ್ರತಿಪಾದಿಸುವ, ಅಧಿಕಾರದಿಂದ ತಲೆತಿರುಗಿರುವ ಬೂರ್ಜ್ವಾ ರಾಜಕಾರಣಿಯೊಬ್ಬರ ಹೇಳಿಕೆಯೆಂದೋ? ■

## ಎಐಡಿವೈಓ : ಖಾಲಿ ಹುದ್ದೆ ಭರ್ತಿ - ನೇಮಕಾತಿಯಲ್ಲಿನ ಭ್ರಷ್ಟಾಚಾರದ ವಿರುದ್ಧ ರಾಜ್ಯ ಮಟ್ಟದ ಧರಣಿ

# "ಜನತೆಯ ಆಗ್ರಹಗಳು ಸರ್ಕಾರದ ಕಿವಿ ಮುಟ್ಟಲು ಹೋರಾಟ ಅವಶ್ಯಕ" – ಜಸ್ಟಿಸ್ ಸಂತೋಷ್ ಹೆಗ್ಡೆ

ನಮ್ಮ ಯುವ ಮುಂದಳ ಎಐಡಿವೈಓ ಕರ್ನಾಟಕ ರಾಜ್ಯ ಸಮಿತಿಯ ನೇತೃತ್ವದಲ್ಲಿ ಜನವರಿ 18ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಹಾಗೂ ನೇಮಕಾತಿಯಲ್ಲಿನ ಭ್ರಷ್ಟಾಚಾರದ ವಿರುದ್ಧ ಕ್ರಮ ಜರುಗಿಸಲು ಆಗ್ರಹಿಸಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಧರಣಿಯನ್ನು ಹಮ್ಮಿಕೊಳ್ಳಲಾಗಿತ್ತು.

ಮಾಜಿ ಲೋಕಾಯುಕ್ತರಾದ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆಯವರು ಮುಖ್ಯ ಅತಿಥಿಗಳಾಗಿ ಧರಣಿಯಲ್ಲಿ ಭಾಗವಹಿಸಿ ಮಾತನಾಡಿದರು. "ರಾಜ್ಯದಲ್ಲಿ 2 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ ಎಂದು ಸರ್ಕಾರವೇ ಒಪ್ಪಿಕೊಂಡಿದೆ. ಆದರೆ ನೇಮಕಾತಿ ಮಾಡುತ್ತಿಲ್ಲ. ಅಧಿಕಾರದಲ್ಲಿರುವವರಿಗೆ ಖಾಲಿ ಹುದ್ದೆಗಳ ನೇಮಕಾತಿ ಮಾಡಿದರೆ ನಮಗೇನು ಸಿಗುತ್ತದೆ ಎಂಬ ಧೋರಣೆ ಇರುವುದು ಖಂಡನೀಯ. ಇಂದು ರಾಜಕೀಯ ಎನ್ನುವುದು ಸಮಾಜ ಸೇವೆಗೆ ಬದಲಾಗಿ ಹಣ ಮಾಡುವ ದಂಧೆಯಾಗಿದೆ. ಅದಕ್ಕಾಗಿಯೇ ನ್ಯಾಯಾಧೀಶರು, ಐಪಿಎಸ್, ಐಎಎಸ್ ಅಧಿಕಾರಿಗಳು ಸಹ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ರಾಜಕೀಯ ಸೇರುತ್ತಿದ್ದಾರೆ. ದುರಾಸೆ ರಾಜಕಾರಣಿಗಳನ್ನು ಯಾವ ಹಂತಕ್ಕಾದರೂ ದೂಡುತ್ತದೆ. ಆದರೆ ಅವರ ದುರಾಡಳಿತದಿಂದ ನಿರಂತರವಾಗಿ ನಿರ್ಗತಿಕತನಕ್ಕೆ ದೂಡಲಾದ ಜನರು ಸುಮ್ಮನೆ ಕೂಡುವುದಿಲ್ಲ, ಅವರು ಪ್ರಶ್ನೆ ಮಾಡುವುದನ್ನು ಕಲಿಯುತ್ತಾರೆ. ನಿರುದ್ಯೋಗ ಹೆಚ್ಚಾದಂತೆ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತವೆ. ನ್ಯಾಯಾಂಗದ ಮೂಲಕವೇ ಈ ಎಲ್ಲಾ ಸಮಸ್ಯೆಗಳಿಗೆ ನ್ಯಾಯ ಸಿಗಲು ಸಾಧ್ಯವಿಲ್ಲ. ಆದರೆ ಹೋರಾಟಗಳಿಂದ ಜನತೆಯ ಆಗ್ರಹಗಳು ಸರ್ಕಾರಗಳ ಕಿವಿಮುಟ್ಟಲು ಸಾಧ್ಯ. ಹಾಗಾಗಿ ಯುವಜನರು ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟಕ್ಕೆ ಸಜ್ಜಾಗಬೇಕು. ಒಗ್ಗಟ್ಟಿನ ಹೋರಾಟದಿಂದ ಮಾತ್ರ ಗೆಲುವು ಸಾಧ್ಯ. ಆದ್ದರಿಂದ ಒಗ್ಗಟ್ಟಿನ ಹೋರಾಟವನ್ನು ಮುಂದುವರೆಸಿ" ಎಂದು ಕರೆ ನೀಡಿದರು.

ಅತಿಥಿಗಳಾಗಿ ಭಾಗವಹಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ಟಿ. ಆರ್. ಚಂದ್ರಶೇಖರ್ ಅವರು ಮಾತನಾಡಿ, 'ನಮ್ಮ ದೇಶದಲ್ಲಿ ಅಪೌಷ್ಟಿಕತೆ, ನಿರುದ್ಯೋಗ, ಬಡತನ, ಮಹಿಳೆಯರ ಮೇಲಿನ ದೌರ್ಜನ್ಯ, ರೈತರ ಆತ್ಮಹತ್ಯೆಗಳು ಹೆಚ್ಚುತ್ತಲೇ ಇವೆ. ಹಸಿವೆಯ ಸೂಚ್ಯಂಕದಲ್ಲಿ ಪ್ರಪಂಚದ 125 ದೇಶಗಳಲ್ಲಿ ನಮ್ಮ ದೇಶ 111ನೇ ಸ್ಥಾನದಲ್ಲಿದೆ. ಇದಕ್ಕೆ ನಿರುದ್ಯೋಗ ಪ್ರಮುಖ ಕಾರಣ. ಆಳುವ ಸರ್ಕಾರಗಳ ಕಾರ್ಪೋರೇಟ್ ಪರ, ಖಾಸಗೀಕರಣದ ಪರವಾಗಿರುವ ಆರ್ಥಿಕ ನೀತಿಗಳಿಂದಾಗಿ ನಿರುದ್ಯೋಗ ದಿನೇದಿನೇ ಹೆಚ್ಚುತ್ತಿದೆ. ಖಾಸಗಿಯವರ ಉದ್ದೇಶ ಗರಿಷ್ಠ ಲಾಭವಾಗಿದೆ. ಆದ್ದರಿಂದ ಕಾರ್ಮಿಕರ ಸಂಖ್ಯೆ ಕಡಿಮೆ ಮಾಡಿ ಯಾಂತ್ರೀಕರಣದ ಮೊರೆ ಹೋಗುತ್ತಾರೆ. ಖಾಸಗಿ ಉದ್ದಿಮೆಗಳು ಉದ್ಯೋಗ ಸಾಂದ್ರವಾಗಿಲ್ಲ. ಖಾಸಗಿ ಬಂಡವಾಳಿಗರು ಯಾಂತ್ರಿಕ ಬುದ್ಧಿಮತ್ತೆಯನ್ನು ಬಳಸಿ ತಮ್ಮ ಲಾಭವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಮತ್ತು ಅಪಾರ ಪ್ರಮಾಣದ ಕಾರ್ಮಿಕರನ್ನು ಮನೆಗೆ ಕಳಿಸುವ ತವಕದಲ್ಲಿದ್ದಾರೆ. ಸಂಘಟಿತ ವಲಯದಲ್ಲಿ ಮಾತ್ರವಲ್ಲದೇ ಕಟ್ಟಡ ನಿರ್ಮಾಣ ಕ್ಷೇತ್ರ ಮತ್ತು ದಿನಗೂಲಿ ಕಾರ್ಮಿಕರಂತಹ ಅಸಂಘಟಿತ ವಲಯದಲ್ಲಿಯೂ ನಿರುದ್ಯೋಗದ ಪ್ರಮಾಣ ಅಗಾಧವಾಗಿ ಹೆಚ್ಚಾಗುತ್ತಿದೆ. ಕೆಲಸ ಕಳೆದುಕೊಂಡ ಕಾರ್ಮಿಕರು ಬೀದಿಗೆ ಬೀಳುತ್ತಿದ್ದಾರೆ. ಸಂಪನ್ಮೂಲದ ಕೊರತೆ ಅಥವಾ ಜನಸಂಖ್ಯೆಯಿಂದಾಗಿ ನಿರುದ್ಯೋಗ ಹೆಚ್ಚುತ್ತಿದೆ ಎಂಬುದು ಅಜ್ಞಾನಿಗಳ ಅಥವಾ ಕಪಟಿಗಳ ವಾದ. ನಿರುದ್ಯೋಗಕ್ಕೆ ಮೂಲಕಾರಣ ನಮ್ಮ ಸರ್ಕಾರಗಳ 'ಅಭಿವೃದ್ಧಿ'ಯ ಪರಿಕಲ್ಪನೆಯಲ್ಲೇ ದೋಷವಿರುವುದಾಗಿದೆ. ಜನಸಾಮಾನ್ಯರನ್ನು ಗಮನಿಸದೇ ಕೇವಲ ಬೃಹತ್ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ವಿಮಾನ ನಿಲ್ದಾಣಗಳ ನಿರ್ಮಾಣವೇ ಅಭಿವೃದ್ಧಿ ಎಂಬ ಕಾರ್ಪೋರೇಟ್‌ಪರವಾದ ನೀತಿಗಳಿಂದಾಗಿ ನಿರುದ್ಯೋಗ ಹೆಚ್ಚುತ್ತಿದೆ. ಆದ್ದರಿಂದ ಸರ್ಕಾರದ ಇಂತಹ ನೀತಿಗಳು ಬದಲಾಗಬೇಕು. ಅವು ಉದ್ಯೋಗ ನಿರ್ಮಾಣದ ಪರವಾಗಿ ರೂಪಗೊಳ್ಳಬೇಕು' ಎಂದು ಆಗ್ರಹಿಸಿದರು.

ಎಐಡಿವೈಓನ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಜಿ. ಎಸ್. ಕುಮಾರ್‌ರವರು ಮಾತನಾಡಿ, "ಜನಗಳ ಸೇವೆ ಮಾಡುವುದಾಗಿ ಹೇಳಿ ಅಧಿಕಾರಕ್ಕೆ ಬಂದ ಸರ್ಕಾರಗಳು ಲಕ್ಷ ಲಕ್ಷ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಹೇಗೆ ಜನಗಳ ಸೇವೆ ಮಾಡಲು ಸಾಧ್ಯ? ಯುವಕರು ನಾವು ದುಡಿಯುತ್ತೇವೆ ನಮಗೆ ಕೆಲಸ ಕೊಡಿ ಎಂದರೂ ಸರ್ಕಾರ ಕೆಲಸ ಕೊಡುತ್ತಿಲ್ಲ. ಇವತ್ತು ಸರ್ಕಾರಗಳ ಆದ್ಯತೆ ಬೇರೆಯೇ ಇದೆ. ಚುನಾವಣೆಗಳಲ್ಲಿ ಕಾರ್ಮಿಕರ–ರೈತರ ಮತ ಪಡೆದು ಅಧಿಕಾರಕ್ಕೆ ಬಂದು ಬಂಡವಾಳಿಗರ ಪರವಾಗಿ ನೀತಿಗಳನ್ನು ರೂಪಿಸುತ್ತಿವೆ. ಆದರೆ ಯುವಕರಿಗೆ ಕೆಲಸ ನೀಡುತ್ತಿಲ್ಲ. ಸರ್ಕಾರಗಳೇ ಘೋಷಿಸಿರುವಂತೆ ರಾಜ್ಯದಲ್ಲಿ 2.58 ಲಕ್ಷ ಹುದ್ದೆಗಳು ಮತ್ತು ಕೇಂದ್ರದಲ್ಲಿ 9.65 ಲಕ್ಷ ಹುದ್ದೆಗಳು ಖಾಲಿ ಇವೆ. ಆದರೆ ವಾಸ್ತವದಲ್ಲಿ ಇನ್ನೂ ಹೆಚ್ಚಿನ ಹುದ್ದೆಗಳು ಖಾಲಿ ಇವೆ. ಆದರೆ ಸರ್ಕಾರಗಳು ಅವುಗಳನ್ನು ಭರ್ತಿ ಮಾಡುತ್ತಿಲ್ಲ. ಅಲ್ಪ ಸ್ವಲ್ಪ ಹುದ್ದೆಗಳ ನೇಮಕಾತಿಗಾಗಿ ನಡೆದ ಆಯ್ಕೆ ಪ್ರಕ್ರಿಯೆಗಳಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಇಂತಹ ಭ್ರಷ್ಟಾಚಾರವನ್ನು ಮಟ್ಟಹಾಕಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಹಾಗೂ ಹೊಸ ಹುದ್ದೆಗಳನ್ನು ಸೃಷ್ಟಿಸುವ ಕುರಿತಂತೆ ಇದುವರೆಗೆ ಯಾವ ಸರ್ಕಾರಗಳೂ ಒಂದು ಉದ್ಯೋಗ ನೀತಿಯನ್ನೇ ಅಳವಡಿಸಿಕೊಂಡಿಲ್ಲ. ರಾಜ್ಯ ಸರ್ಕಾರವು ಚುನಾವಣಾ ಸಂದರ್ಭದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿಮಾಡುವುದಾಗಿ ತಾನಿತ್ತ ಭರವಸೆಯನ್ನು ಸಂಪೂರ್ಣವಾಗಿ ಮರೆತಿದೆ. ಇನ್ನು ನಿರುದ್ಯೋಗ ಭತ್ಯೆ ನೀಡುವ ಯುವನಿಧಿ ಯೋಜನೆಯೂ ಸಹ ಉದ್ಯೋಗಾಕಾಂಕ್ಷಿಗಳ ಮೂಗಿಗೆ ತುಪ್ಪ ಸವರುವ ಯೋಜನೆಯಾಗಿದೆ. ಹತ್ತಾರು ವರ್ಷಗಳಿಂದ ನಿರುದ್ಯೋಗದ ಬೇಗೆಯಲ್ಲಿ ಬೇಯುತ್ತಿರುವವರನ್ನು ಪರಿಗಣಿಸದೇ ಕೇವಲ 2022–23ರಿಂದೀಚೆಗೆ ಪದವಿ ಅಥವಾ ಡಿಪ್ಲೊಮಾ ಮುಗಿಸಿದವರನ್ನು ಮಾತ್ರ ಈ ಯೋಜನೆಗೆ ಪರಿಗಣಿಸಿರುವುದು ಯಾವ ರೀತಿಯಲ್ಲೂ ಸೂಕ್ತವಲ್ಲ. ಆದರೆ ಸರ್ಕಾರ ಈ ಕುರಿತು ಯಾವುದೇ ಸ್ಪಷ್ಟನೆ ನೀಡಿಲ್ಲ. ಉದ್ಯೋಗದ ಕುರಿತಾಗಿ ಇರುವ ಈ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಯುವಜನರ ಮುಂದೆ ಹೋರಾಟದ ಮಾರ್ಗವನ್ನುಳಿದು ಬೇರೆ ದಾರಿಯಿಲ್ಲ. ಆದರೆ ನಮ್ಮ ಹೋರಾಟ ಕೇವಲ ಕೆಲವು ಆರ್ಥಿಕ ಬೇಡಿಕೆಗಳ ಈಡೇರಿಕೆಗೆ ಸೀಮಿತವಾಗಬಾರದು. ಸರ್ಕಾರಗಳ ಯುವಜನ ವಿರೋಧಿ ನೀತಿಗಳ ವಿರುದ್ಧ ಹೊರಾಡುತ್ತಲೇ, ಸಮಾಜದಲ್ಲಿನ ಅಸಮಾನತೆಯನ್ನು ತೊಡೆದು ಹಾಕಿ ಸಮ ಸಮಾಜ ನಿರ್ಮಾಣದ ಕ್ರಾಂತಿಕಾರಿ ಹೋರಾಟವನ್ನು ಬೆಳೆಸಬೇಕು" ಎಂದು ಕರೆ ನೀಡಿದರು.




**ಧರಣಿಯನ್ನುದ್ದೇಶಿಸಿ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಮಾತನಾಡುತ್ತಿರುವುದು. ವೇದಿಕೆಯಲ್ಲಿ ಪ್ರೊ. ಟಿ.ಆರ್. ಚಂದ್ರಶೇಖರ್. ನಾ.ದಿವಾಕರ್ ಹಾಗೂ ಎಐಡಿವೈಓ ಅಖಿಲ ಭಾರತ ನಾಯಕರು ಮತ್ತು ರಾಜ್ಯ ನಾಯಕರು**

ಪ್ರಗತಿಪರ ಚಿಂತಕರು ಹಾಗೂ ಅಂಕಣಕಾರರಾದ ಡಾ. ನಾ. ದಿವಾಕರ್‌ರವರು ಮಾತನಾಡಿ '1990 ರಲ್ಲಿ ಜಾರಿಯಾದ ಜಾಗತೀಕರಣ, ಉದಾರೀಕರಣದ ನೀತಿಗಳ ಫಲವನ್ನು ನಾವು ಇಂದು ಉಣ್ಣುತ್ತಿದ್ದೇವೆ. ಉದ್ಯೋಗ ನೀಡುವುದು ಆಳ್ವಿಕರ ಜವಾಬ್ದಾರಿ ಅಲ್ಲ ಎಂಬ ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆಯ ನೀತಿಯನ್ನೇ ಇಂದು ಎಲ್ಲಾ ದೇಶಗಳು ಅನುಸರಿಸುತ್ತಿದ್ದು, ಅದಕ್ಕೆ ಭಾರತವು ಹೊರತಾಗಿಲ್ಲ. ತಂತ್ರಜ್ಞಾನದ ಬಳಕೆ ವ್ಯಾಪಿಸುತ್ತಿರುವಂತೆಲ್ಲಾ ಮಾನವ ಶ್ರಮದ ಅವಶ್ಯಕತೆ ಕಡಿಮೆ ಆಗುತ್ತಿದೆ. ಮಾನವ ಶ್ರಮರಹಿತ ಆರ್ಥಿಕತೆಯನ್ನು ಬೆಳೆಸುವುದು ನವ ಉದಾರವಾದಿ ಬಂಡವಾಳಶಾಹಿಯ ನಾಲ್ಕನೆಯ ಹಂತದ ಪ್ರಧಾನ ಧ್ಯೇಯವಾಗಿದೆ. ಒಂದು ವರದಿಯ ಪ್ರಕಾರ ಕೃತಕ ಬುದ್ಧಿಮತ್ತೆ ಅಥವಾ ಯಾಂತ್ರಿಕ ಬುದ್ಧಿಮತ್ತೆ (Artificial Intelligence) ಪರಿಣಾಮ ಈ ವರ್ಷ ವಿಶ್ವದಾದ್ಯಂತ ಶೇ 40ರಷ್ಟು ನೌಕರಿಗಳು ನಾಶವಾಗಲಿವೆ. ಇಂದು ಗಿಗ್ ವರ್ಕರ್ಸ್ ಎಂದು ಕರೆಯಲಾಗುವ ಝೊಮೋಟೋ, ಸ್ವಿಗ್ಗಿ, ಅಮೆಜಾನ್, ಓಲಾ, ಊಬರ್ ಮುಂತಾದೆಡೆ ನೌಕರಿ ಮಾಡುವ ಲಕ್ಷಾಂತರ ಕಾರ್ಮಿಕರು ಅತಂತ್ರ ಭವಿಷ್ಯವನ್ನು ಎದುರಿಸುತ್ತಿದ್ದಾರೆ. ಉದ್ಯೋಗ ಪಡೆದವರಿಗೆ ಅವರ ನಿವೃತ್ತಿಯ ನಂತರ ನೀಡಬೇಕಾದ ಭವಿಷ್ಯನಿಧಿ, ಗ್ರಾಚ್ಯುಯಿಟಿ, ಪಿಂಚಣಿ ಎಲ್ಲ ವರ್ಗದವರಿಗೂ ಲಭಿಸುತ್ತಿಲ್ಲ. ಗಿಗ್ ನೌಕರರು ಈ ಸೌಲಭ್ಯಗಳಿಂದ ಹಾಗೂ ನೌಕರಿಯ ಭದ್ರತೆಯಿಂದ ಸಂಪೂರ್ಣ ವಂಚಿತರಾಗಿದ್ದಾರೆ. ಯುವ ಪೀಳಿಗೆಯನ್ನು ಈ ಸಮಸ್ಯೆ ಗಾಢವಾಗಿ ಕಾಡುತ್ತಿದೆ. ಈ ಯುವ ಪೀಳಿಗೆಗೆ ಸುಸ್ಥಿರ ಬದುಕಿನ ಬೀಜಾಕ್ಷರ ಹಂಚಬೇಕಾದ ಸಾಮಾಜಿಕ ವ್ಯವಸ್ಥೆ ಇಂದು ಮಂತ್ರಾಕ್ಷತೆ ಹಂಚುವ ಮೂಲಕ ಮೋಡಿ ಮಾಡುತ್ತಿದೆ. ಧರ್ಮ, ಧಾರ್ಮಿಕ ಶ್ರದ್ಧೆ ನಂಬಿಕೆಗಳು ಮಾನವ ಸಮಾಜದ ಅವಿಭಾಜ್ಯ ಅಂಗವಾಗಿವೆ ಆದರೆ ಈ ನಂಬಿಕೆಗಳು ಜೀವನೋಪಾಯದ ಆಧಾರವಾಗಲು ಸಾಧ್ಯವಿಲ್ಲ." ಎಂದರು.



**ರಾಜ್ಯದ ಮೂಲೆ ಮೂಲೆಗಳಿಂದ ಬಂದು ಧರಣಿಯಲ್ಲಿ ಪಾಲ್ಗೊಂಡ ಉದ್ಯೋಗಾಕಾಂಕ್ಷಿ ಯುವಜನತೆ**

ಮುಂದುವರೆದು, "ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಷ್ಟೇ ಅಲ್ಲದೆ ದೇಶದ ಪ್ರತಿಯೊಬ್ಬ ವಿದ್ಯಾವಂತ, ಅವಿದ್ಯಾವಂತ ವ್ಯಕ್ತಿಗೂ ಜೀವನಾವಶ್ಯವನ್ನು ಪೂರೈಸುವ ಉದ್ಯೋಗ ನೀಡಲು ಸರ್ಕಾರಗಳನ್ನು ಆಗ್ರಹಿಸಬೇಕಿದೆ. ಬಹಳ ಗಂಭೀರವಾಗಿ ನಾವು ಪರಿಗಣಿಸಬೇಕಾದ ವಿಷಯ ಎಂದರೆ ಶಿಕ್ಷಣ, ಆರೋಗ್ಯ, ಆಹಾರದಂತೆ ಉದ್ಯೋಗ ನಮ್ಮ ಮೂಲಭೂತ ಹಕ್ಕು ಎಂದು ಶಾಸನಬದ್ಧವಾಗಿ ಘೋಷಣೆಯಾಗಬೇಕು. ಈ ಹಕ್ಕಿಗಾಗಿ ನಾವು ಆಗ್ರಹಿಸಬೇಕಿದೆ" ಎಂದರು.

ಎಐಡಿವೈಓನ ಇನ್ನೋರ್ವ ಅಖಿಲ ಭಾರತ ಉಪಾಧ್ಯಕ್ಷರಾದ ರಾಜಗೋಪಾಲ್ ಅವರು ಮಾತನಾಡಿ 'ಇಂದು ನಿರುದ್ಯೋಗ ಎಂಬುದು ಜಾಗತಿಕ ಸಮಸ್ಯೆಯಾಗಿದೆ. ಯೂರೋಪ್ ಇನ್ನಿತರ ಪಾಶ್ಚಿಮಾತ್ಯ ದೇಶಗಳಲ್ಲಿ ಉದ್ಯೋಗ ಸಿಗದೇ ಕೌಟುಂಬಿಕ ಜೀವನಕ್ಕೆ ಕಾಲಿಡದ ಯುವಜನರಿಂದ ಮುಂದಿನ ಪೀಳಿಗೆಗೆ ಜನನ ಪ್ರಮಾಣವೂ ಕಡಿಮೆಯಾಗುತ್ತಿದೆ. ಇದು ಮಾನವ ಕುಲದ ದುರಂತವೇ ಸರಿ. ಈ ನಿರುದ್ಯೋಗ ಸಮಸ್ಯೆಯ ವಿರುದ್ಧ ನಿರ್ಣಾಯಕವಾದ ಹೋರಾಟವನ್ನು ಬೆಳೆಸಬೇಕಿದೆ. ಎಐಡಿವೈಓ ನಿರುದ್ಯೋಗದ ವಿರುದ್ಧ ಗಂಭೀರವಾದ ಹೋರಾಟವನ್ನು ನಡೆಸುತ್ತಿದೆ. ಈ ಸಂಘಟನೆ ಯಾವುದೇ ಸಮಸ್ಯೆಯ ವಿರುದ್ಧ ಹೋರಾಟ ಕೈಗೆತ್ತಿಕೊಂಡರೆ ದಡ ಮುಟ್ಟಿಸುವವರೆಗೆ ಬಿಡುವುದಿಲ್ಲ. ಅದೇ ರೀತಿಯಲ್ಲಿ ಎಲ್ಲಾ ಯುವಜನರು ಈ ದಿಕ್ಕಿನಲ್ಲಿ ಹೋರಾಟವನ್ನು ಮುಂದುವರೆಸಬೇಕು. ನಮ್ಮ ದೇಶದ ಮಹಾನ್ ಕ್ರಾಂತಿಕಾರಿ ಹೋರಾಟಗಾರರಾದ ಭಗತ್ ಸಿಂಗ್, ನೇತಾಜಿಯವರ ವೈಚಾರಿಕ ಪರಂಪರೆಯನ್ನು ಎತ್ತಿಹಿಡಿಯಬೇಕು" ಎಂದರು.

ಎಐಡಿವೈಓ ರಾಜ್ಯಾಧ್ಯಕ್ಷರಾದ ಶರಣಪ್ಪ ಉದ್ಬಾಳ್‌ರವರು ಪ್ರತಿಭಟನಾ ಧರಣಿಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾತನಾಡಿ, 'ಕಳೆದ ಮೂರು ದಶಕಗಳಿಂದ ಎಐಡಿವೈಓ ಹೋರಾಟ ಮಾಡುತ್ತಲೇ ಬಂದಿದೆ. ಹಲವಾರು ಯಶಸ್ವಿ ಹೋರಾಟಗಳನ್ನು ನಡೆಸಿದೆ. ಮುಂದೆಯೂ ಸಹ ನಮ್ಮ ಬೇಡಿಕೆಗಳು ಈಡೇರುವವರೆಗೂ ಹೋರಾಟವನ್ನು ಮುಂದುವರೆಸೋಣ, ಸಮಾನ ಮನಸ್ಕ ವ್ಯಕ್ತಿಗಳನ್ನು ಮತ್ತು ಸಂಘಟನೆಯನ್ನು ಸೇರಿಸಿಕೊಂಡು ಹೋರಾಟಗಳನ್ನು ಮುಂದುವರೆಸೋಣ' ಎಂದರು. ಎಐಡಿವೈಓನ ರಾಜ್ಯ ಕಾರ್ಯದರ್ಶಿಗಳಾದ ಸಿದ್ಧಲಿಂಗ ಬಾಗೇವಾಡಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕ ರಾಜ್ಯ ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳ ಅಸೋಸಿಯೇಷನ್(ರಿ)ನ ರಾಜ್ಯ ಕಾರ್ಯದರ್ಶಿ ಸಿದ್ದೇಶ ಈ, ಡಿವೈಎಫ್‌ಐನ ಮುಖಂಡರಾದ ವಿ.ಅಂಬರೀಶ್, ಕ್ರಾಂತಿಕಾರಿ ಯುವಜನ ಸಂಘಟನೆ (ಆರ್‌ವೈಎ) ಮುಖಂಡರಾದ ಬಸವರಾಜ ಪೂಜಾರ, ಎಐವೈಎಫ್‌ನ ರಾಜ್ಯಾಧ್ಯಕ್ಷರಾದ ಹರೀಶ್ ಬಾಲಾ, ಕರ್ನಾಟಕ ರಾಜ್ಯ ಚಿತ್ರಕಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾದ ಬಿ.ಜಿ.ಅವಟಿ, ಸರ್ಕಾರಿ ಐಟಿಐ ಅತಿಥಿ ಬೋಧಕರ ಸಮಿತಿಯ ರಾಜ್ಯಾಧ್ಯಕ್ಷರಾದ ನಾಗವೇಣಿ, ಯುಎಫ್‌ಡಿಪಿಯುನ ರಾಜ್ಯಾಧ್ಯಕ್ಷರಾದ ವಿನಯ್ ಸಾರಥಿ, ಎಐಯುವೈಎಸ್‌ಸಿಯ ರಾಜ್ಯಾಧ್ಯಕ್ಷರಾದ ವಿಜಯ್‌ಕುಮಾರ್, ಸಂಗೀತ ಶಿಕ್ಷಕರ ಸಂಘದ ಮಲ್ಲಿಕಾರ್ಜುನ ಸಾವಿರಮಠ ಇವರುಗಳು ಪ್ರತಿಭಟನೆಯಲ್ಲಿ ಭಾಗವಹಿಸಿ ಬೆಂಬಲಿಸಿ ಮಾತನಾಡಿದರು.

ಹಲವಾರು ಜನ ಪ್ರಗತಿಪರರು, ಹೋರಾಟಪರರು ಮತ್ತು ಸಾವಿರಾರು ಸಂಖ್ಯೆಯ ಉದ್ಯೋಗಾಕಾಂಕ್ಷಿ ಯುವಜನರು ಧರಣಿಯಲ್ಲಿ ಭಾಗವಹಿಸಿದ್ದರು.

ನಂತರ ಹೋರಾಟದ ಹಕ್ಕೊತ್ತಾಯಗಳ ಮನವಿ ಪತ್ರವನ್ನು ಮುಖ್ಯಮಂತ್ರಿಗಳ ಕಚೇರಿಗೆ ತಲುಪಿಸಲಾಯಿತು. ಅಲ್ಲದೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವರಾದ ಪ್ರಿಯಾಂಕ್ ಖರ್ಗೆಯವರನ್ನು ನಿಯೋಗದಲ್ಲಿ ಭೇಟಿ ಮಾಡಿ ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಬೇಡಿಕೆಗಳ ಈಡೇರಿಕೆಗೆ ತುರ್ತು ಕ್ರಮ ಕೈಗೊಳ್ಳಲು ಆಗ್ರಹಿಸಲಾಯಿತು. ■

### ಎಐಎಂಎಸ್‌ಎಸ್ ಸಂಘಟಿತ 7ನೇ ರಾಜ್ಯ ಮಟ್ಟದ ಮಹಿಳಾ ಸಮ್ಮೇಳನ - ದಾವಣಗೆರೆ

# ಸಮಾಜವಾದಿ ಕ್ರಾಂತಿಯಲ್ಲಿ ಮಹಿಳೆಯರ ವಿಮುಕ್ತಿ ಅಡಗಿದೆ – ಕಾ॥ ಕೆ. ರಾಧಾಕೃಷ್ಣ

ನೊಂದ ಮಹಿಳೆಯರ ಧ್ವನಿಯಾಗಿ ರಾಜ್ಯದಾದ್ಯಂತ ಹೋರಾಟಗಳನ್ನು ಸಂಘಟಿಸುತ್ತಾ ಬಂದಿರುವ ಎಐಎಂಎಸ್‌ಎಸ್, ಹೋರಾಟದ ಮುಂದುವರೆದ ಭಾಗವಾಗಿ ಕಳೆದ ಜನವರಿ 6 ಮತ್ತು 7, 2024ರಂದು 'ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಿ, ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮತ್ತು ಆರೋಗ್ಯದ ಭದ್ರತೆಯನ್ನು ಖಾತ್ರಿಪಡಿಸಿ, ದುಡಿಯುವ ಮಹಿಳೆಯರಿಗೆ ಕನಿಷ್ಠ ವೇತನ, ಸೇವಾ ಭದ್ರತೆ ಖಚಿತಪಡಿಸಿ' ಎಂಬ ಘೋಷ ವಾಕ್ಯದೊಂದಿಗೆ 7ನೇ ರಾಜ್ಯ ಮಟ್ಟದ ಸಮ್ಮೇಳನವನ್ನು ದಾವಣಗೆರೆಯಲ್ಲಿ ಸಂಘಟಿಸಿತ್ತು. ಹಿರಿಯರು ಮತ್ತು ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಶನ್‌ನ ಮಾಜಿ ಅಧ್ಯಕ್ಷರಾದ ಶ್ರೀ ಎಂ. ಆರ್. ಹಿರೇಮಠ್‌ರವರು ಜಯದೇವ ಸರ್ಕಲ್‌ನಲ್ಲಿ ಮೆರವಣಿಗೆಗೆ ಚಾಲನೆ ನೀಡಿದರು. ಸುಮಾರು 25 ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ರೈತಾಪಿ–ಕೂಲಿಕಾರ್ಮಿಕ ಮಹಿಳೆಯರು, ಗೃಹಿಣಿಯರು, ಗಾರ್ಮೆಂಟ್–ಇತರ ಉದ್ಯೋಗಸ್ಥ ಮಹಿಳೆಯರು, ವಿದ್ಯಾರ್ಥಿನಿಯರು ಸೇರಿದಂತೆ ವಿವಿಧ ಸ್ತರದ ಮಹಿಳೆಯರು ನಗರದ ಪ್ರಮುಖ ಬೀದಿಗಳಲ್ಲಿ ಸಾಗುತ್ತಾ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ, ಮಹಿಳಾ ವಿಮುಕ್ತಿಗಾಗಿ ಘೋಷಣೆ ಕೂಗುತ್ತಾ ಬಹಿರಂಗ ಅಧಿವೇಶಕ್ಕೆ ಸಜ್ಜಾಗಿದ್ದ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಆವರಣ(ಪಿ.ಬಿ.ರಸ್ತೆ)ಕ್ಕೆ ಬಂದು ಸೇರಿದರು. ಮಹಾನ್ ವ್ಯಕ್ತಿಗಳ ಸೂಕ್ತಿ ಮತ್ತು ಛಾಯಾಚಿತ್ರ ಪ್ರದರ್ಶನವನ್ನು ಡಿಆರ್‌ಎಂ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಶ್ರೀ ಈಶ್ವರಪ್ಪ. ಕೆ.ಎಸ್ ಉದ್ಘಾಟಿಸಿದರು. ಬಳಿಕ ಎಐಎಂಎಸ್‌ಎಸ್‌ನ ಅಖಿಲ ಭಾರತ ಉಪಾಧ್ಯಕ್ಷರಲ್ಲಿ ಒಬ್ಬರಾದ ಡಾ. ಸುಧಾ ಕಾಮತ್ ಹುತಾತ್ಮ ಸ್ಮಾರಕಕ್ಕೆ ಗೌರವಾರ್ಪಣೆ ಮಾಡಿದರು.

ಬಹಿರಂಗ ಅಧಿವೇಶನವನ್ನು ಹೆಸರಾಂತ ಸಾಮಾಜಿಕ ಹೋರಾಟಗಾರ್ತಿ ಶ್ರೀಮತಿ ರೂಪಾ ಹಾಸನ್ ಉದ್ಘಾಟಿಸಿ ಮಾತನಾಡುತ್ತಾ, "ಇಂದು ಪ್ರಜಾತಂತ್ರವನ್ನು ಬಲಿಕೊಟ್ಟು ಫ್ಯಾಸಿಸ್ಟ್ ಶಕ್ತಿಗಳು ಬೆಳೆಯುತ್ತಿವೆ. ಪ್ರಜಾತಾಂತ್ರಿಕ ಮೌಲ್ಯಗಳೇ ಅಸ್ತಿತ್ವದಲ್ಲಿ ಇಲ್ಲದಂತಹ ಪರಿಸ್ಥಿತಿ ಎದುರಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ತಮ್ಮ ಸಮಸ್ಯೆಗಳ ವಿರುದ್ಧ ಸಂಘಟಿತರಾಗಲು ಈ ಸಮ್ಮೇಳನ ದಿಕ್ಸೂಚಿಯಾಗಲಿ. ಸ್ವಾತಂತ್ರ್ಯಾ ನಂತರ ದೇಶದಲ್ಲಿ 6 ಕೋಟಿಯಷ್ಟು ಹೆಣ್ಣು ಭ್ರೂಣಗಳ ಹತ್ಯೆ ನಡೆದಿದೆ ಎಂಬುದನ್ನು ಸರ್ಕಾರಿ ದಾಖಲೆಗಳೇ ತಿಳಿಸುತ್ತಿವೆ. ಅದು ಇಂದಿಗೂ ಅವ್ಯಾಹತವಾಗಿ ಮುಂದುವರೆದಿದೆ. ಇದು ಸ್ತ್ರೀ ಸಂಕುಲದ ಮೇಲೆ ನಡೆಸುತ್ತಿರುವ ಸಾಂಸ್ಕೃತಿಕ ಅತ್ಯಾಚಾರವಾಗಿದೆ. ಸ್ತ್ರೀ ಸಂಕುಲವನ್ನು ಗರ್ಭದಲ್ಲೇ ಕೊಲ್ಲುವ ಪುರುಷ ಪ್ರಧಾನ ಸಮಾಜದ ಇಂತಹ ಹೀನ ಮನಸ್ಥಿತಿಯನ್ನು ಖಂಡಿಸಿ ಮಾರ್ಚ್ 8ರಂದು 'ಕರಾಳ ಮಹಿಳಾ ದಿನ' ಆಚರಿಸುವ ಮೂಲಕ ಮಹಿಳೆಯರ ಮೇಲಿನ ಶೋಷಣೆಯ ವಿರುದ್ಧ ಗಟ್ಟಿ ಧ್ವನಿ ಎತ್ತಬೇಕು. ಇನ್ನೊಂದೆಡೆ ಬಂಡವಾಳಶಾಹಿಯ ಕಪಿಮುಷ್ಟಿಗೆ ಸಿಲುಕಿರುವ ಮಹಿಳೆ ವ್ಯಾಪಾರಿ ಸರಕಾಗಿ ಬದಲಾಗುತ್ತಿದ್ದಾಳೆ. ದೇಶದ ಲಕ್ಷಾಂತರ ಹೆಣ್ಣುಮಕ್ಕಳು ಬಲವಂತವಾಗಿ ವೇಶ್ಯಾವಾಟಿಕೆಗೆ ತಳ್ಳಲ್ಪಡುತ್ತಿದ್ದಾರೆ. 15 ನಿಮಿಷಕ್ಕೊಂದು ಅತ್ಯಾಚಾರ, ಪ್ರತಿ 2 ನಿಮಿಷಕ್ಕೊಂದು ದೌರ್ಜನ್ಯಕ್ಕೆ ಮಹಿಳೆ ಒಳಗಾಗುತ್ತಿದ್ದಾಳೆ. ದೇಶಕ್ಕೆ ಮುನ್ನಡೆಯನ್ನು ತೋರಿಸುವುದು ತಾಯ್ತನದ ಕರ್ತವ್ಯ. ದುರಂತವೆಂದರೆ ಇವತ್ತಿಗೂ ಕೆಲವೇ ಕ್ಷೇತ್ರಗಳಲ್ಲಿ ಬೆರಳಣಿಕೆಯಷ್ಟು ಮಹಿಳೆಯರಿದ್ದಾರೆ. ಹೀಗಿರುವಾಗ ಪ್ರತಿಯೊಂದು ಸಮಸ್ಯೆಗಳನ್ನು ರಾಜಕೀಕರಣಗೊಳಿಸುವ ಅವಶ್ಯಕತೆಯಿದೆ. ಆ ಮೂಲಕ ಮಹಿಳೆಯರು ಘನತೆ, ಗೌರವದ ಬದುಕನ್ನು ಕಟ್ಟಿಕೊಳ್ಳಲು ಹೋರಾಡಬೇಕು" ಎಂದು ಕರೆ ನೀಡಿದರು.

ಮುಖ್ಯ ಅಥಿತಿಗಳಾಗಿ ಆಗಮಿಸಿ ಮಾತನಾಡಿದ ಎಸ್‌ಯುಸಿಐ(ಸಿ)ನ ರಾಜ್ಯ ಕಾರ್ಯದರ್ಶಿ ಕಾ॥ ಕೆ.ಉಮಾ, "ಹೆಣ್ಣಿಗೆ ಧೈರ್ಯವಿಲ್ಲ ಎಂದಲ್ಲ. ಹೆಣ್ಣುಮಕ್ಕಳಿಗೆ ಈ ಸಮಾಜ ಧೈರ್ಯವಾಗಿರಲು ಬಿಟ್ಟಿಲ್ಲ. ಸಾವಿತ್ರಿ ಬಾಯಿ ಫುಲೆ, ಜ್ಯೋತಿಬಾ ಫುಲೆ, ವಿದ್ಯಾಸಾಗರ್, ಕುದ್ಮಲ್ ರಂಗರಾವ್ ಮೊದಲಾದ ಮಹನೀಯರು ಮಹಿಳೆಯರ ಏಳಿಗೆಗಾಗಿ ಶ್ರಮಿಸಿದ್ದಾರೆ. ಪ್ರೀತಿಲತಾ ವದ್ದೆದಾರ್, ಮಾತಂಗಿನಿ ಹಜರಾ ಮೊದಲಾದವರ ಶೌರ್ಯ ಕಣ್ಣ ಮುಂದಿದೆ. ಆದರೆ ಸ್ವಾತಂತ್ರ್ಯ ಚಳುವಳಿಯ ವೈಫಲ್ಯದಿಂದಾಗಿ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ ಮರಿಚಿಕೆಯಾಗಿಯೇ ಉಳಿದಿವೆ. ಸಮಾಜ ಇಂದಿಗೂ ಪ್ರಜಾತಾಂತ್ರಿಕರಣಗೊಂಡಿಲ್ಲದ ಕಾರಣ ಅನ್ಯಾಯಕ್ಕೆ ಒಳಗಾದ ಮಹಿಳೆಯನ್ನೇ ಅಪವಾದಕ್ಕೆ ಗುರಿಮಾಡಲಾಗುತ್ತಿದೆ. ಐತಿಹಾಸಿಕವಾಗಿ ಗಮನಿಸಿದಾಗ ಮಾತೃಪ್ರಧಾನ ಸಮಾಜ ಖಾಸಗಿ ಆಸ್ತಿಯ ಉಗಮದೊಂದಿಗೆ ಪುರುಷ ಪ್ರಧಾನ ಸಮಾಜವಾಗಿ ಬದಲಾಯಿತು. ಅಲ್ಲಿಂದ ಮಹಿಳಾ ದೌರ್ಜನ್ಯ ಪ್ರಾರಂಭವಾಯಿತು. ಮಹಿಳೆ ಸಂಪ್ರದಾಯ, ಮೌಢ್ಯಗಳ ಚೌಕಟ್ಟಿನೊಳಗೆ ಬಂಧಿಯಾದಳು. ಇಂದು ಮಹಿಳಾ ಸಮುದಾಯ ಶೋಷಿತ ಕಾರ್ಮಿಕ ವರ್ಗದ ಜೊತೆ ಸೇರಿ ಶೋಷಕ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಲು ಸಮಾಜವಾದಿ ಕ್ರಾಂತಿಗೆ ಮುಂದಾಗಬೇಕಿದೆ" ಎಂದು ಕರೆ ನೀಡಿದರು.

ಎಐಎಂಎಸ್‌ಎಸ್‌ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾ॥ ಛಬಿ ಮೊಹಂತಿ ಮಾತನಾಡುತ್ತಾ, "ಮಹಾನ್ ಮಾರ್ಕ್ಸವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರ ಚಿಂತನೆಗಳ ಆಧಾರದ ಮೇಲೆ ಎಐಎಮ್‌ಎಸ್‌ಎಸ್ ದೇಶದಾದ್ಯಂತ ಮಹಿಳಾ ಚಳುವಳಿಗಳನ್ನು ಕಟ್ಟುತ್ತಿದೆ. ಮಹಿಳೆಯರ ಸಮಸ್ಯೆಗಳಿಗೆ ಮೂಲ ಕಾರಣ ಇಂದಿನ ಸಾಮಾಜಿಕ–ಆರ್ಥಿಕ ವ್ಯವಸ್ಥೆಯಲ್ಲಿದೆ. ಪರಿಣಾಮವಾಗಿ ಜನಪ್ರತಿನಿಧಿಗಳು ಮಂದಿರ–ಮಸೀದಿ ಹೆಸರಿನಲ್ಲಿ ಒಡೆದಾಳುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಜಾತಿ–ಧರ್ಮದ ಹೆಸರಿನಲ್ಲಿ ಮನುಷ್ಯತ್ವವನ್ನೇ ಕೊಲೆ ಮಾಡುತ್ತಿದ್ದಾರೆ. ಈ ವ್ಯವಸ್ಥೆಯನ್ನು ಕಿತ್ತೊಗೆಯುವ ಮೂಲಕ ನಾವು ಮಹಿಳಾ ವಿಮುಕ್ತಿಯ ಅಂತಿಮ ಗುರಿಯನ್ನು ಮುಟ್ಟುತ್ತೇವೆ" ಎಂದರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಅನುರಾಧ. ಪಿ. ಎಮ್ ಮಾತನಾಡುತ್ತಾ, "ಮಾನವೀಯ ಮೌಲ್ಯಗಳನ್ನು ಮರೆತಿರುವ ಮನುಕುಲಕ್ಕೆ ಮತ್ತೆ ಮತ್ತೆ ನೆನಪಿಸಬೇಕು. ಇತಿಹಾಸದುದ್ದಕ್ಕೂ ಹಲವಾರು ಮಹನೀಯರು ಮಾನವೀಯ ಮೌಲ್ಯಗಳನ್ನು ಮೈಲಿಗಲ್ಲುಗಳನ್ನಾಗಿ ನೆಟ್ಟಿದ್ದಾರೆ. ಅದಕ್ಕಾಗಿ ಮಾಡಿ ಮಡಿದಿದ್ದಾರೆ. ಆದರೆ ಅದನ್ನು ಪ್ರಜ್ಞಾಪೂರ್ವಕವಾಗಿ ವಿಸ್ಮೃತಿಗೆ ತಳ್ಳುತ್ತಿರುವುದು ಈ ಕಾಲದ ದುರಂತ. ಬೆಳಕನ್ನು ಚೆಲ್ಲುವ ಆದರ್ಶಗಳನ್ನು ಮೈಲಿಗಲ್ಲಿನ ಕೆಳಗೆ ಹೂತು ಹಾಕಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಉದ್ಧಾರಕ್ಕಾಗಿ ಯುಗಪುರುಷನ ಹುಟ್ಟಿಗಾಗಿ ಕಾಯುವುದರಲ್ಲಿ ಅರ್ಥವಿಲ್ಲ. ನಾವೇ ಬದಲಾವಣೆಯ ಹರಿಕಾರರಾಗಿ ನಿಲ್ಲುವ ಅನಿವಾರ್ಯತೆ ಎದುರಾಗಿದೆ" ಎಂದರು.

ಎಐಎಂಎಸ್‌ಎಸ್‌ನ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಸುಧಾ ಕಾಮತ್, ರಾಜ್ಯ ಅಧ್ಯಕ್ಷರಾದ ಕಾ.ಅಪರ್ಣಾ ಬಿ. ಆರ್, ಶ್ರೀ ಈಶ್ವರಪ್ಪ. ಕೆ.ಎಸ್ ಮಾತನಾಡಿದರು. ಸ್ವಾಗತ ಸಮಿತಿಯ ಇತರ ಸದಸ್ಯರುಗಳಾದ ಶ್ರೀ ಎಂ. ಆರ್ ಹಿರೇಮಠ್, ಶ್ರೀ ಇಸ್ಮಾಯಿಲ್.ಎಸ್. ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಹಿರಂಗ ಅಧಿವೇಶನದ ಸಭೆಯ ಅಧ್ಯಕ್ಷತೆಯನ್ನು ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿಗಳಾದ ಕಾ.ಶೋಭಾ. ಎಸ್. ವಹಿಸಿದ್ದರು.

ಪ್ರತಿನಿಧಿ ಅಧಿವೇಶನಕ್ಕೂ ಮೊದಲು ಅಂದು ಸಂಜೆ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಸಾಂಸ್ಕೃತಿಕ ಸಂಜೆ ಜರುಗಿತು. ಅದನ್ನು ಉದ್ಘಾಟಿಸಿದ ಬರಹಗಾರ್ತಿ ಶ್ರೀಮತಿ ಬಿ.ಟಿ. ಜಾಹ್ನವಿ ಅವರು ಮಾತನಾಡುತ್ತಾ, "ಮಹಿಳಾ ಹೋರಾಟಗಳಿಗೆ ಪೂರಕವಾಗಿ ಸಾಂಸ್ಕೃತಿಕ ಚಳುವಳಿಯ ಅಗತ್ಯವಿದೆ. ಮೌಲ್ಯ ನೀತಿಗಳನ್ನು ಹೃದಯದಲ್ಲಿ ನೆಲೆಗೊಳಿಸುವ ಕೆಲಸವನ್ನು ಸಾಹಿತ್ಯ, ನಾಟಕ, ಸಂಗೀತ ಮುಂತಾದ ಕಲಾ ಪ್ರಕಾರಗಳು ಮಾಡುತ್ತವೆ" ಎಂದರು. ಬಂಡಾಯ ಸಾಹಿತಿಗಳಾದ ಶ್ರೀ ಕಲೀಮ್ ಬಾಷಾ ಸಮ್ಮೇಳನದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಆ ನಂತರ ಮಹಿಳೆಯರು ಬದುಕಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ದೌರ್ಜನ್ಯಗಳನ್ನು ಚಿತ್ರಿಸುತ್ತಾ ಅವುಗಳ ವಿರುದ್ಧ ಬಂಡೆದ್ದು ನಿಲ್ಲುವ ವೈಚಾರಿಕತೆಯನ್ನು ಭಾವಮಾಧ್ಯಮದ ಮೂಲಕ ಕೊಂಡೊಯ್ಯುವತ್ತ ವಿವಿಧ ಕಾರ್ಯಕ್ರಮಗಳು ನಡೆದವು.

ಎರಡನೇ ದಿನ ಪ್ರತಿನಿಧಿ ಅಧಿವೇಶನದಲ್ಲಿ ವಿವಿಧ ಜಿಲ್ಲೆಗಳ 700ಕ್ಕೂ ಹೆಚ್ಚು ಪ್ರತಿನಿಧಿಗಳು ಮುಖ್ಯ ಗೊತ್ತುವಳಿ, ಸಂಘಟನಾತ್ಮಕ ವಿಷಯಗಳಿಗೆ ಸುತ್ತುವರೆದಂತೆ ಉತ್ಸಾಹದಿಂದ ಚರ್ಚೆಯಲ್ಲಿ ಭಾಗಿಯಾದರು. ವಿಸ್ತೃತವಾಗಿ ಚರ್ಚೆ ನಡೆದು ಗೊತ್ತುವಳಿಗಳು ಎಲ್ಲರ ಒಪ್ಪಿಗೆಯೊಂದಿಗೆ ಅನುಮೋದನೆಗೊಂಡವು.

ಎಐಎಂಎಸ್‌ಎಸ್‌ನ ಅಖಿಲ ಭಾರತ ಅಧ್ಯಕ್ಷರಾದ ಕಾ. ಕೆಯಾ ಡೇ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡುತ್ತಾ, ದೇಶದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಮಹಿಳೆಯರ ಜೀವನ ಮತ್ತಷ್ಟು ಶೋಚನೀಯವಾಗಿದೆ. ಇಂದಿಗೂ ಮಹಿಳೆಯರಿಗೆ ಸಮಾನ ಹಕ್ಕುಗಳು ಲಭಿಸಿಲ್ಲ. ಅವರು ಎಲ್ಲಾ ರೀತಿಯ ಶೋಷಣೆಗಳಿಂದ ಮುಕ್ತರಾಗಬೇಕೆಂದರೆ, ಸಂಘಟಿತರಾಗಬೇಕು ಮತ್ತು ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಬೇಕು ಎಂದರು.

ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯುರೊ ಸದಸ್ಯರಾದ ಕಾ॥ ಕೆ. ರಾಧಾಕೃಷ್ಣರವರು ಮಾತನಾಡಿ, "ನಮ್ಮ ಸಮಾಜದಲ್ಲಿ ಮಹಿಳಾ ಸಮುದಾಯದ ಉದ್ಧಾರದ ಬಗ್ಗೆ ಸಾಕಷ್ಟು ನಾಯಕರು ಭಾಷಣ ಮಾಡುತ್ತಾರೆ, ಲೇಖನಗಳನ್ನು ಬರೆಯುತ್ತಾರೆ. ಆದರೆ ಇದಾವುದರಿಂದಲೂ ಮಹಿಳೆಯರ ಸಮಸ್ಯೆಗಳು ಬಗೆಹರಿದಿಲ್ಲ. ನಾವು ರಾಜಕೀಯವಾಗಿ ಸ್ವತಂತ್ರರಾಗಿದ್ದೇವೆ. ಆದರೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ವಾತಂತ್ರ್ಯ ದೊರಕಿದೆಯೇ? ಇದನ್ನು ಗಹನವಾಗಿ ಆಲೋಚಿಸಬೇಕು. ಹೆಣ್ಣಿನ ಮಾನ ರಕ್ಷಣೆಗೆ ರಾಮ, ಕೃಷ್ಣ ಧರೆಗಿಳಿದು ಬರುತ್ತಾರೆ ಎಂದು ಕಾಯುವ ಕಾಲವಿದಲ್ಲ. ಸತಿ ಸಾವಿತ್ರಿ, ಸೀತಾ, ದಮಯಂತಿ, ಅನುಸೂಯಾ ಇಂದು ನಮಗೆ ಆದರ್ಶವಲ್ಲ. ಇಂದು ಶಕುನಿ ಸಂತತಿ ಬೆಳೆದಿದೆ. ನಮ್ಮ ಸಮಸ್ಯೆಗಳಿಗೆ ಧರ್ಮಗಳಲ್ಲಿ ಉತ್ತರವಿಲ್ಲ. ಧರ್ಮ, ಜಾತಿ ಪದ್ಧತಿಗಳು ಮಹಿಳೆಯರ ಶೋಷಣೆಯ ತಾಣಗಳಾಗಿವೆ. ಅದರ ವಿರುದ್ಧ ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಮೊದಲಾದವರು ಧ್ವನಿಯೆತ್ತಿದರೂ, ಸಮಸ್ಯೆಗಳು ಕೊನೆಯಾಗಿಲ್ಲ. ಮಹಾನ್ ವ್ಯಕ್ತಿಗಳ ಭಾವಚಿತ್ರಕ್ಕೆ ಪೂಜೆ ಮಾಡಿದ ಮಾತ್ರಕ್ಕೆ ಸಮಸ್ಯೆಗಳು ಪರಿಹಾರ ಆಗಲಾರವು. ಆಚಾರಗಳಿಂದ ಬದಲಾವಣೆ ಸಾಧ್ಯವಿಲ್ಲ, ವಿಚಾರಗಳ ಅವಶ್ಯಕತೆಯಿದೆ. ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿನ ಇತಿಮಿತಿಗಳಿಂದಾಗಿ ಈ ಎಲ್ಲಾ ಸಮಸ್ಯೆಗಳು ಇಂದಿಗೂ ಜೀವಂತವಾಗಿವೆ. ನಮ್ಮ ಮುಂದಿರುವ ಮಾರ್ಕ್ಸವಾದಿ ವಿಚಾರ ಮಾತ್ರ ಶೋಷಣೆಗೆ ಅಂತ್ಯ ಹಾಡಲು ದಾರಿ ತೋರಬಲ್ಲದು. ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್‌ರವರು, ಮಹಿಳೆಯರ ಮೇಲಿನ ಶೋಷಣೆಯ ಮೂಲ ಖಾಸಗಿ ಆಸ್ತಿಯ ಉಗಮ,






**ಪ್ರತಿನಿಧಿ ಅಧಿವೇಶನ: ಎಸ್‌ಯುಸಿಐ(ಸಿ) ಪಾಲಿಟ್ ಬ್ಯೂರೋ ಸದಸ್ಯರಾದ ಕಾ॥ ಕೆ. ರಾಧಾಕೃಷ್ಣ ಅವರು ಮಾತನಾಡುತ್ತಿರುವುದು. ವೇದಿಕೆಯಲ್ಲಿ ಎಐಎಂಎಸ್‌ಎಸ್‌ನ ಅಖಿಲ ಭಾರತ ಅಧ್ಯಕ್ಷರಾದ ಕಾ॥ ಕೇಯಾ ಡೇ, ಪ್ರಧಾನ ಕಾರ್ಯದರ್ಶಿ ಕಾ॥ ಛಬಿ ಮೊಹಂತಿ, ಪಕ್ಷದ ರಾಜ್ಯ ಕಾರ್ಯದರ್ಶಿ ಕಾ॥ ಕೆ.ಉಮಾ, ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಸುಧಾ ಕಾಮತ್ ಹಾಗೂ ಅತಿಥಿಗಳಾದ ಡಾ. ಅನುರಾಧ ಪಿ.ಎಂ. ಹಾಗೂ ಎಐಎಂಎಸ್‌ಎಸ್‌ನ ರಾಜ್ಯ ನಾಯಕರು ಉಪಸ್ಥಿತರಿದ್ದರು.**

ಆ ಮೂಲಕ ಸಮಾಜದಲ್ಲಿ ವರ್ಗ ವಿಭಜನೆವುಂಟಾಗಿ ಮಾತೃಪ್ರಧಾನ ಸಮಾಜ ಪಿತೃಪ್ರಧಾನ ಸಮಾಜವಾಗಿ ಮಾರ್ಪಟ್ಟಿದ್ದು ಎಂದು ತೋರಿಸಿಕೊಟ್ಟರು. ಮಹಿಳೆ ಅದನ್ನು ಪ್ರತಿರೋಧಿಸಿದಾಗ ಮಾನಸಿಕವಾಗಿ ಅವಳನ್ನು ಬಗ್ಗಿಸಲು ಶೋಷಕ ಪುರುಷ ಪ್ರಧಾನ ಸಮಾಜ ನೀತಿ–ನೈತಿಕತೆ, ಮೌಲ್ಯ, ಸಂಸ್ಕೃತಿಯಂತಹ ನಿಯಮಗಳನ್ನು ರೂಪಿಸಿತು. ಇಂದು ಶೋಷಕ ಬಂಡವಾಳಗಾರರು ಉತ್ಪಾದನೆಯ ಮಾಲೀಕರಾಗಿದ್ದಾರೆ. ಇಂದು ಮಹಿಳೆ ಬಂಡವಾಳಶಾಹಿಯ ಆರ್ಥಿಕ ದೌರ್ಜನ್ಯ ಮತ್ತು ಪುರುಷ ಪ್ರಧಾನ ಶೋಷಣೆಗಳಿಗೆ ಗುರಿಯಾಗಿದ್ದಾಳೆ. ಮಹಿಳೆಯರ ಹೋರಾಟ ಪುರುಷರ ವಿರುದ್ಧವಲ್ಲ, ಪುರುಷ ಪ್ರಧಾನ ಮನೋಧೋರಣೆಯ ವಿರುದ್ಧ. ಅಂತಿಮವಾಗಿ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯಲ್ಲಿ ಮಹಿಳೆಯರ ವಿಮುಕ್ತಿ ಅಡಗಿದೆ. ಹಾಗಾಗಿ ಮಹಿಳಾ ಹೋರಾಟ ಶೋಷಿತ ಕಾರ್ಮಿಕ ಸಮುದಾಯದ ಹೋರಾಟದ ಜೊತೆ ಬೆಸೆಯಬೇಕು" ಎಂದರು.

ಈ ಸಂದರ್ಭದಲ್ಲಿ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾ॥ ಎಂ.ಎನ್. ಮಂಜುಳಾ ಅಧ್ಯಕ್ಷರಾಗಿ, ಕಾ॥ ಶೋಭ.ಎಸ್. ಕಾರ್ಯದರ್ಶಿಯಾಗಿ, ಕಾ॥ ಈಶ್ವರಿ ಖಜಾಂಚಿಯಾಗಿ, ಕಾ॥ ಶಾಂತಾ.ಎ. ಕಚೇರಿ ಕಾರ್ಯದರ್ಶಿ, 8 ಜನ ಉಪಾಧ್ಯಕ್ಷರುಗಳು, 15ಜನ ಜಂಟಿ ಕಾರ್ಯದರ್ಶಿಗಳಾಗಿ, 43 ಜನ ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ, 74 ಜನ ಕೌನ್ಸಿಲ್ ಸದಸ್ಯರುಗಳಾಗಿರುವ ಒಟ್ಟು 144 ಜನರ ಬಲಿಷ್ಠ ನೂತನ ರಾಜ್ಯ ಸಮಿತಿ ರಚನೆಯಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಮಹಿಳೆಯರು ಹಲವಾರು ಚರ್ಚೆಗಳಿಂದ ಸ್ಫೂರ್ತಿಗೊಂಡು, ತಮ್ಮ ಸ್ಥಳಗಳಲ್ಲಿ ಮಹಿಳಾ ಹೋರಾಟವನ್ನು ಬಲಿಷ್ಠವಾಗಿ ಕಟ್ಟುವ ಸಂಕಲ್ಪದೊಂದಿಗೆ ಮರಳಿದರು. ■

...1ನೇ ಪುಟದಿಂದ

# ಲೆನಿನ್ : ಭವ್ಯ ಬದುಕಿನ ಯಶೋಗಾಥೆ

ತಮ್ಮ 21ನೇ ವಯಸ್ಸಿನಲ್ಲಿ ಹುತಾತ್ಮರಾದಾಗ ಲೆನಿನ್‌ಗೆ ಕೇವಲ 17 ವರ್ಷ ವಯಸ್ಸು. ಲೆನಿನ್ ಅದಾಗಲೇ ಖಜಾನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದರು ಮತ್ತು ಜಾರ್ ವಿರೋಧಿ ವಿದ್ಯಾರ್ಥಿ ಚಳುವಳಿಯನ್ನು ಅವರು ಸೇರಿ ಆಗಿತ್ತು. ಕಿರಿಯ ಲೆನಿನ್ ಮೇಲೆ ಹಿರಿಯ ಸಾಶ ಪ್ರಭಾವವು ಅಧಿಕವಾಗಿತ್ತು.

### ನಡಿಗೆ ಮಾರ್ಕ್ಸ್‌ವಾದದ ಕಡೆಗೆ......

ವಿದ್ಯಾರ್ಥಿದೆಸೆಯಿಂದಲೇ ಲೆನಿನ್ ಮಾರ್ಕ್ಸ್‌ವಾದಕ್ಕೆ ಆಕರ್ಷಿತರಾಗಿದ್ದರು. ಜಿನೀವಾದಲ್ಲಿ 1883ರಲ್ಲೇ 'ಲಿಬರೇಷನ್ ಆಫ್ ಲೇಬರ್' ಎಂಬ ರಷ್ಯಾದ ಮೊದಲ ಮಾರ್ಕ್ಸ್‌ವಾದಿ ಕ್ರಾಂತಿಕಾರಿ ಸಂಘಟನೆಯನ್ನು ಜಾರ್ಜಿ ಪ್ಲೆಖನೋವ್ ಎಂಬ ರಷ್ಯಾದ ಮಾರ್ಕ್ಸ್‌ವಾದಿ ನಾಯಕ ಇತರ ಕೆಲವರೊಡನೆ ಸೇರಿ ಸ್ಥಾಪಿಸಿ ಆಗಿತ್ತು. ರಷ್ಯಾದಲ್ಲಿ ಮಾರ್ಕ್ಸ್‌ವಾದವನ್ನು ಸ್ಥಾಪಿಸಲು ಮತ್ತು ಅದನ್ನು ಪಸರಿಸಲು ಈ ಸಂಘಟನೆಯು ಬಹು ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿತ್ತು. ಲೆನಿನ್ ಈ ಗುಂಪಿನ ಮೂಲಕವೇ ಮಾರ್ಕ್ಸ್‌ವಾದಕ್ಕೆ ಪರಿಚಿತರಾದದ್ದು. ಹೀಗಾಗಿಯೇ, ಪ್ಲೆಖನೋವ್‌ರನ್ನು ತಮ್ಮ ಗುರುಗಳು ಎಂದು ಲೆನಿನ್ ಭಾವಿಸಿದ್ದರು. ಇಷ್ಟೇ ಅಲ್ಲದೆ, ಲೆನಿನ್ ಶ್ರಮಿಕರ ಮನೆಗಳಿಗೆ ಭೇಟಿ ನೀಡಲು ಆರಂಭಿಸಿದರು ಮತ್ತು ಅವರ ಮಧ್ಯೆ ಬಹಳ ಸಂತೋಷವನ್ನು ಅನುಭವಿಸುತ್ತಿದ್ದರು. ಅಷ್ಟೇ ಏಕೆ, ಅವರಲ್ಲಿ ಮಾರ್ಕ್ಸ್‌ವಾದದ ಸಿದ್ಧಾಂತದ ಬಗ್ಗೆ ತಿಳುವಳಿಕೆಯನ್ನು ಮೂಡಿಸಲು ಅಧ್ಯಯನ ವೃಂದಗಳನ್ನು ಸಹ ಅವರು ಆರಂಭಿಸಿದರು.

### 'ನರೋದಿಸಂ' ವಿರುದ್ಧ ಹೋರಾಟ

1860 ಮತ್ತು 1870ರ ದಶಕದಲ್ಲಿ ರಷ್ಯಾದ ಬುದ್ಧಿಜೀವಿಗಳ ಒಂದು ವಿಭಾಗದಲ್ಲಿ ಜಾರ್ ವಿರೋಧಿ ಕ್ರಾಂತಿಕಾರಿ ಹೋರಾಟದ ಒಂದು ರಾಜಕೀಯ ಚಳುವಳಿಯಾಗಿ 'ನರೋದಿಸಂ' ಸ್ಥಾನವನ್ನು ಪಡೆದುಕೊಂಡಿತ್ತು. ಒಂದು ಕೃಷಿ ಆಧಾರಿತ ಸಮತಾವಾದದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದ ನರೋದ್ನಿಕರು, ಅಂದು ಪುಟ್ಟ ಅಲ್ಪಸಂಖ್ಯಾತ ವಿಭಾಗವಾಗಿದ್ದ ಕೈಗಾರಿಕಾ ಶ್ರಮಿಕ ವರ್ಗವನ್ನು ಕಡೆಗಣಿಸಿದ್ದರು. ಎರಡನೆಯದಾಗಿ, ಅವರು ಮಾರ್ಕ್ಸ್‌ವಾದವನ್ನು ವಿರೂಪಗೊಳಿಸಿದ್ದರು. ರಷ್ಯಾದ ರೈತಾಪಿ ಸಮುದಾಯ ಮಾತ್ರ ಕ್ರಾಂತಿಕಾರಿ ವರ್ಗವೆಂದು, ಅದರಿಂದ ಮಾತ್ರ ರಾಜಪ್ರಭುತ್ವವನ್ನು ಕಿತ್ತೊಗೆಯಲು ಸಾಧ್ಯ ಮತ್ತು 'ಗ್ರಾಮ ಕಮ್ಯೂನ್'ಗಳಲ್ಲಿ ಸಮಾಜವಾದದ ಬೀಜ ಅಡಕವಾಗಿದೆ ಎಂದು ಅವರು ತಿಳಿದಿದ್ದರು. ಹೀಗೆ ರಷ್ಯಾದಲ್ಲಿ, ಸಮಾಜವಾದವು ಬರಬೇಕಾದರೆ ಅದು, ಕಾರ್ಮಿಕ ವರ್ಗದ ಸರ್ವಾಧಿಕಾರದಿಂದ ಬರುವುದಿಲ್ಲ ಬದಲಾಗಿ ರೈತಾಪಿಗಳ ಕಮ್ಯೂನ್‌ನಿಂದ ಬರುತ್ತದೆ ಎಂಬುದು ಅವರ ತಿಳುವಳಿಕೆಯಾಗಿತ್ತು. ಆದ್ದರಿಂದಲೇ, ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯ ಮುಂಚೂಣಿ ನಾಯಕತ್ವದಲ್ಲಿ ಅವರು ಕಾರ್ಮಿಕ ವರ್ಗವನ್ನು ಒಪ್ಪಿಕೊಳ್ಳಲೇ ಇಲ್ಲ. ಹೀಗೆ ಅವರು ಮಾರ್ಕ್ಸ್‌ವಾದದ ಮೂಲ ತತ್ವದೊಂದಿಗೆ ವ್ಯತ್ಯಾಸವನ್ನು ಹೊಂದಿದ್ದರು. ಇದರ ಜೊತೆಯಲ್ಲಿಯೇ, ವೈಯಕ್ತಿಕ ಹತ್ಯೆಯ ಮಾರ್ಗದಿಂದ ಜಾರ್ ಆಳ್ವಿಕೆಯನ್ನು ಎದುರಿಸಬೇಕು ಎಂಬ ಹಾದಿಯನ್ನು ಅವರು ಆಯ್ದುಕೊಂಡಿದ್ದರು. ಅತ್ಯಂತ 'ಪ್ರತಿಭಾವಂತ ವ್ಯಕ್ತಿಗಳು' ಅಂದರೆ 'ನಾಯಕರು' ಇತಿಹಾಸವನ್ನು ಬರೆಯುತ್ತಾರೆ ಮತ್ತು ಜನಸಮುದಾಯಗಳು ಯಾವುದೇ ಪ್ರಜ್ಞಾಶೀಲ ಸಂಘಟಿತ ಕಾರ್ಯವನ್ನು ನಡೆಸಲು ಅಸಮರ್ಥ ಹಾಗೂ ಅವು ನಾಯಕರನ್ನು ಕುರುಡಾಗಿ ಅನುಸರಿಸಬಲ್ಲವು ಅಷ್ಟೇ ಎಂಬ ನಂಬಿಕೆಯನ್ನು ಅವರು ಹೊಂದಿದ್ದರು. ಇಂತಹ ಆಲೋಚನೆಗಳಿಂದಾಗಿಯೇ, ರೈತಾಪಿ ಜನತೆ ಮತ್ತು ಕಾರ್ಮಿಕರ ನಡುವಿನ ಹೋರಾಟ ರಂಗವನ್ನು ರಚಿಸುವ ಸಮೂಹ ಕ್ರಾಂತಿಕಾರಿ ಕೆಲಸಕ್ಕೆ ನರೋದ್ನಿಕರು ತಿಲಾಂಜಲಿ ನೀಡಿದರು ಮತ್ತು ವೈಯಕ್ತಿಕ ಭಯೋತ್ಪಾದಕ ಚಟುವಟಿಕೆಗಳ ಮಾರ್ಗವನ್ನು ತುಳಿದರು. ಈ ರೀತಿಯಲ್ಲಿ ರಷ್ಯಾದಲ್ಲಿ ಕ್ರಾಂತಿಕಾರಿ ಮಾರ್ಕ್ಸ್‌ವಾದದ ಬೆಳವಣಿಗೆಗೆ 'ನರೋದಿಸಂ' ಅಡ್ಡಗಾಲು ಹಾಕಿಕೊಂಡು ಒಂದು ತಡೆಗೋಡೆಯಾಗಿ ನಿಂತಿತ್ತು.

ಆ ಸಂದರ್ಭದಲ್ಲಿ ಕ್ರಾಂತಿಯ ಕಡೆ ವಾಲಿದ್ದ ಬುದ್ಧಿಜೀವಿ ಗುಂಪು ಕಾರ್ಖಾನೆಗಳ ಆಡಳಿತ ವರ್ಗಗಳ ವಿರುದ್ಧ ಕಾರ್ಮಿಕ ಹೋರಾಟಗಳನ್ನು ಉತ್ತೇಜಿಸುತ್ತಾ ಅಂತಹ ಶ್ರಮಿಕರ ಜೊತೆಗೆ ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತಿತ್ತು. 1898ರ ಹೊತ್ತಿಗೆ ಅವರ ಚಟುವಟಿಕೆಗಳು ರಷ್ಯನ್ ಸೋಷಲ್ ಡೆಮೊಕ್ರೆಟಿಕ್ ಲೇಬರ್ ಪಾರ್ಟಿ(ಆರ್‌ಎಸ್‌ಡಿಎಲ್‌ಪಿ)ಯ ಸ್ಥಾಪನೆಯೊಂದಿಗೆ ಒಂದು ಉಚ್ಚ ಹಂತವನ್ನು ಮುಟ್ಟಿತು. ಇದೇ ಪಕ್ಷವೇ ಮುಂದೆ ರಷ್ಯಾದ ನೆಲದಲ್ಲಿ ಕಮ್ಯುನಿಸ್ಟ್ ಪಕ್ಷವಾದದ್ದು.

ನರೋದ್ನಿಕರ ತಪ್ಪು ತಿಳುವಳಿಕೆಯನ್ನು ಮತ್ತು ಅವರ ತಪ್ಪಾದ ಟೀಕೆಗಳನ್ನು ಮಾರ್ಕ್ಸ್‌ವಾದಿ ವಿಮರ್ಶೆಯ ಮೂಲಕ ಮೊಟ್ಟಮೊದಲ ಬಾರಿಗೆ ತೋರಿಸಿ ಕೊಟ್ಟ ವ್ಯಕ್ತಿ ಪ್ಲೆಖನೋವ್. 'ಇತಿಹಾಸದ ಏಕತಾವಾದಿ ಧೋರಣೆಯ ಬೆಳವಣಿಗೆಯನ್ನು ಕುರಿತು' ಎಂಬ ತಮ್ಮ ಪುಸ್ತಕದಲ್ಲಿ ಅವರು ಮಾರ್ಕ್ಸ್‌ವಾದದ ಮೂಲ ತತ್ವಗಳನ್ನು ವಿವರಿಸಿದರು. ಆ ಪುಸ್ತಕವು ಒಂದು ಇಡೀ ರಷ್ಯನ್ ಮಾರ್ಕ್ಸ್‌ವಾದಿಗಳ ತಲೆಮಾರನ್ನು ಬೆಳೆಸಲು ಸಹಾಯ ಮಾಡಿತು ಎಂದು ಲೆನಿನ್ ಶ್ಲಾಘಿಸಿದರು(ಲೆನಿನ್ ಸಮಗ್ರ ಕೃತಿ ಸಂಪುಟ15 ಪುಟ347). ಹೀಗೆ, ಪ್ಲೆಖನೋವ್ ತಮ್ಮ ಕೃತಿಗಳ ಮೂಲಕ ನಡೆಸಿದ ದಣಿವರಿಯದ ಹೋರಾಟವು ಸಮಾಜದಲ್ಲಿದ್ದ ಕ್ರಾಂತಿಕಾರಿ ಬುದ್ಧಿಜೀವಿ ವರ್ಗದ ಮೇಲೆ ನರೋದ್ನಿಕರ ಪ್ರಭಾವವನ್ನು ತಗ್ಗಿಸಲು ಸಹಕಾರಿಯಾಯಿತು. ಆದರೆ ನರೋದ್ನಿಕರ ಸಂಪೂರ್ಣ ಸೈದ್ಧಾಂತಿಕ ಸೋಲು ಇನ್ನೂ ಪೂರ್ಣವಾಗಿರಲಿಲ್ಲ. ಏಕೆಂದರೆ, ಇತಿಹಾಸದ ಓಟದ ಗತಿಯಲ್ಲಿ ಕ್ರಾಂತಿಯ ಮುನ್ನಡೆಗೆ ರೈತಾಪಿ ವರ್ಗವನ್ನು ಕಾರ್ಮಿಕ ವರ್ಗವೇ ಮುನ್ನಡೆಸಲು ಸಾಧ್ಯ ಹಾಗೂ ಮುನ್ನಡೆಸಬೇಕು ಮತ್ತು ರೈತಾಪಿ ವರ್ಗ ಹಾಗೂ ಕಾರ್ಮಿಕ ವರ್ಗದ ಒಕ್ಕೂಟದಿಂದ ಮಾತ್ರ ಜಾರ್ ಆಡಳಿತವನ್ನು ಕಿತ್ತೊಗೆದು ಸಂಪೂರ್ಣ ವಿಜಯವನ್ನು ಸಾಧಿಸಲು ಸಾಧ್ಯ ಎನ್ನುವ ಅಂಶವನ್ನು ಗಣನೆಗೆ ತೆಗೆದುಕೊಳ್ಳಲು ಪ್ಲೆಖನೋವ್ ಸೋತರು. ರಷ್ಯಾದಲ್ಲಿನ ಮಾರ್ಕ್ಸ್‌ವಾದದ ಪಿತಾಮಹರಾದರೂ ಪ್ಲೆಖನೋವ್ ಕೊನೆಯಲ್ಲಿ, ನರೋಧಿಸಂನ ಪ್ರಭಾವದಿಂದ ಹೊರಬರಲು ಸಾಧ್ಯವಾಗಲಿಲ್ಲ. ತಮ್ಮ ಆಳವಾದ ತಿಳುವಳಿಕೆಯಿಂದ ನರೋದಿಸಂಗೆ ಅಂತಿಮ ಪ್ರಹಾರವನ್ನು ಕೊಟ್ಟು, ಅದನ್ನು ಸೋಲಿಸಿದ್ದು ಲೆನಿನ್. ಹೇಗೆ ನರೋದ್ನಿಕರು ಜನತೆಯ ಒಟ್ಟಾರೆ ಹಿತಾಸಕ್ತಿಯ ವಿರುದ್ಧ ಕಾರ್ಯೋನ್ಮುಖರಾಗಿದ್ದಾರೆ ಎಂದು ಅವರ ನಿಜವಾದ ಸ್ವರೂಪವನ್ನು ಬಹಿರಂಗಗೊಳಿಸಲು 1894ರಲ್ಲಿ ಲೆನಿನ್ ಬರೆದ ಅಮೂಲ್ಯ ಲೇಖನ – 'ಯಾರು ಜನತೆಯ ಮಿತ್ರ ಮತ್ತು ಅವರು ಸೋಷಲ್ ಡೆಮಾಕ್ರಾಟ್‌ಗಳ ವಿರುದ್ಧ ಹೋರಾಡಿದ್ದು ಹೇಗೆ' ಎಂಬುದು. ಜಾರ್ ದೊರೆಯ ಆಡಳಿತ ವ್ಯವಸ್ಥೆಯನ್ನು ಕಿತ್ತೊಗೆಯಲು ಕಾರ್ಮಿಕರು ಮತ್ತು ರೈತಾಪಿ ವರ್ಗದ ಕ್ರಾಂತಿಕಾರಿ ಒಕ್ಕೂಟವು ಸ್ಥಾಪನೆ ಆಗಬೇಕು ಎಂಬ ಚಿಂತನೆಯನ್ನು ಮೊಟ್ಟಮೊದಲಿಗೆ ಹೇಳಿದ್ದೇ ಲೆನಿನ್. ಒಂದು ವರ್ಷದ ನಂತರ ಲೆನಿನ್‌ರ ಮಾರ್ಗದರ್ಶನದಲ್ಲಿ, 'ಕಾರ್ಮಿಕ ವರ್ಗದ ವಿಮುಕ್ತಿಗಾಗಿ ಸೇಂಟ್ ಪೀಟರ್ ಬರ್ಗ್ ಸಂಘರ್ಷದ ಗುಂಪು' ಎಂಬ ಸಂಘವು ಸ್ಥಾಪನೆಯಾಯಿತು. ಹೀಗೆ ಈ ಪ್ರಕ್ರಿಯೆಯು ರಷ್ಯಾದಲ್ಲಿ ಮಾರ್ಕ್ಸ್‌ವಾದವನ್ನು ಪಸರಿಸಲು ಮತ್ತು ಒಂದು ನೈಜ ಕಮ್ಯುನಿಸ್ಟ್ ಪಕ್ಷವು ಜನ್ಮ ತಳೆಯಲು ವೇದಿಕೆಯನ್ನು ಸಿದ್ಧಪಡಿಸಿತು. ಬಂಡವಾಳವಾದವು ರಷ್ಯಾದಲ್ಲಿ ಬೆಳೆಯಲು ಸಾಧ್ಯವೇ ಇಲ್ಲ ಎನ್ನುವ ನರೋದ್ನಿಕರ ಅಭಿಪ್ರಾಯವನ್ನು ನುಚ್ಚುನೂರು ಮಾಡಿದ್ದು, 1897 ಮತ್ತು 1900ರ ನಡುವೆ ತಾವು ಸೈಬೀರಿಯಾದಲ್ಲಿ ಗಡಿಪಾರು ಶಿಕ್ಷೆಯನ್ನು ಅನುಭವಿಸುತ್ತಿದ್ದಾಗ ಲೆನಿನ್ ಬರೆದ ಹೆಸರಾಂತ ಕೃತಿ, ' ರಷ್ಯಾದಲ್ಲಿ ಬಂಡವಾಳವಾದದ ಬೆಳವಣಿಗೆ'ಯಿಂದ.

### ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯಲ್ಲಿ ಲೆನಿನ್‌ರ ಅದ್ವಿತೀಯ ಪಾತ್ರ

ಒಂದು ಕಮ್ಯುನಿಸ್ಟ್ ಪಕ್ಷದ ನಿರ್ದಿಷ್ಟವಾದ ರಚನೆ ಮತ್ತು ಸ್ವರೂಪವನ್ನು ಸ್ಪಷ್ಟವಾಗಿ ಮೊಟ್ಟಮೊದಲ ಬಾರಿಗೆ ತೋರಿಸಿಕೊಟ್ಟಿದ್ದೇ ಲೆನಿನ್. ಎರಡನೆಯದಾಗಿ, ಒಂದು ನೈಜ ಕಮ್ಯುನಿಸ್ಟ್ ಪಕ್ಷ ಇಲ್ಲದೆ ಹೋದಲ್ಲಿ ಜಾರ್ ಆಡಳಿತ ವ್ಯವಸ್ಥೆಯನ್ನು ಕಿತ್ತೊಗೆಯಲಾಗಲಿ ಅಥವಾ ಶೋಷಿತ ವರ್ಗಗಳ ಸಂಪೂರ್ಣ ವಿಮುಕ್ತಿಯಾಗಲಿ ಸಾಧ್ಯವಾಗುವುದಿಲ್ಲ ಎಂದು ಎಲ್ಲ ರೀತಿಯ ಸಂದೇಹಗಳನ್ನು ತೊಡೆದುಹಾಕಿದ್ದೇ ಲೆನಿನ್. ಪಕ್ಷದ ಪತ್ರಿಕೆಯಾಗಿದ್ದ 'ಇಸ್ಕ್ರಾ'ದ ಪ್ರಾಮುಖ್ಯತೆಯನ್ನು, ತಮ್ಮ ಲೇಖನ 'ವಾಟ್ ಇಸ್ ಟು ಬಿ ಡನ್'ನಲ್ಲಿ ವಿವರಿಸಿದ ಲೆನಿನ್, ಒಂದು ಪತ್ರಿಕೆಯು, 'ಕೇವಲ ಸಾಮೂಹಿಕ ಪ್ರಚಾರಕ ಹಾಗೂ ಸಾಮೂಹಿಕ ಹೋರಾಟಗಾರ ಮಾತ್ರವಲ್ಲ. ಅದು ಒಂದು ಸಾಮೂಹಿಕ ಸಂಘಟಕ ಕೂಡ' ಎಂದರು. ವಾಸ್ತವದಲ್ಲಿ ನಾವು ಗಮನಿಸಿರುವಂತೆ, 'ಇಸ್ಕ್ರಾ' ಪತ್ರಿಕೆಯು ಅಂದಿನ ರಷ್ಯಾದಲ್ಲಿ ಹೊರಹೊಮ್ಮಿದ್ದ ಹಲವು ರೀತಿಯ ಸೈದ್ಧಾಂತಿಕ ಮತ್ತು ರಾಜಕೀಯ ಗೊಂದಲಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು.

ರಷ್ಯಾದ ನೆಲದಲ್ಲಿ ನೈಜ ಕಮ್ಯುನಿಸ್ಟ್ ಪಕ್ಷ ಒಂದರ ಹುಟ್ಟಿಗೆ ಅಡ್ಡಗಾಲು ಹಾಕಿಕೊಂಡಿದ್ದದ್ದು ಅಲ್ಲಿದ್ದ ಕೆಲವು ಆರ್ಥಿಕವಾದಿ ಗುಂಪುಗಳ ಪ್ರಭಾವ. ತಮ್ಮ ಆರ್ಥಿಕ ಸ್ಥಿತಿಗತಿಗಳ ಮಟ್ಟವನ್ನು ಉತ್ತಮಪಡಿಸಿಕೊಳ್ಳುವುದು ಮಾತ್ರವೇ ಕಾರ್ಮಿಕ ವರ್ಗದ ಏಕೈಕ ಕಾರ್ಯ ಎಂದು ಇಂತಹ ಗುಂಪುಗಳು ನಂಬಿದ್ದವು. ಅವುಗಳಿಗೆ ರಾಜಕೀಯ ಹೋರಾಟ ಆಗಿ ಬರುತ್ತಿರಲಿಲ್ಲ. ಇವರು ನಿಜವಾಗಿಯೂ ಉದಾರವಾದಿ ಬಂಡವಾಳಶಾಹಿ ಆಗಿದ್ದರು. ಇಂತಹವರನ್ನು ಸಂಪೂರ್ಣವಾಗಿ ಸೋಲಿಸಲು ಲೆನಿನ್ ಬರೆದದ್ದೆ 'ವೇರ್ ಟು ಬಿಗಿನ್' ಲೇಖನ. ಈ ಲೇಖನದಲ್ಲಿ ಲೆನಿನ್ ಬರೆದ ನೈಜ ಕಮ್ಯುನಿಸ್ಟ್ ಪಕ್ಷದ ರೂಪರೇಷೆಗಳು ಮುಂದೆ ಅವರ ಖ್ಯಾತ ಕೃತಿ, 'ವಾಟ್ ಇಸ್ ಟು ಬಿ ಡನ್'ನಲ್ಲಿ ಒಂದು ಕ್ರಾಂತಿಕಾರಿ ಪಕ್ಷದ ಸೈದ್ಧಾಂತಿಕ ತಳಹದಿಯನ್ನು ಮತ್ತು ಸ್ಪಷ್ಟ ಪರಿಕಲ್ಪನೆಯನ್ನು ಪಡೆದವು. ಮುಂದೆ ಈ ಪರಿಕಲ್ಪನೆಯನ್ನು ಲೆನಿನ್ ತಮ್ಮ ಕೃತಿ 'ಪ್ರಿನ್ಸಿಪಲ್ಸ್ ಆಫ್ ಪಾರ್ಟಿ ಆರ್ಗನೈಸೇಷನ್'ನಲ್ಲಿ ಇನ್ನೂ ಸ್ಪಷ್ಟವಾಗಿ ವಿವರಿಸಿದರು. 1921ರಲ್ಲಿ ನಡೆದ ತೃತೀಯ ಕಮ್ಯುನಿಸ್ಟ್ ಅಂತರರಾಷ್ಟ್ರೀಯವು ಈ ತಿಳುವಳಿಕೆಯನ್ನು ಅನುಮೋದಿಸಿ ಅಳವಡಿಸಿಕೊಂಡಿತು.

### ಅಂಧತತ್ವ ಹಿಂಬಾಲಕರೊಂದಿಗೆ ಲೆನಿನ್‌ರ ಸೈದ್ಧಾಂತಿಕ ಸಮರ

'ಕಮ್ಯುನಿಸ್ಟ್ ಲೀಗ್' ಎನ್ನುವ ಅಂತರರಾಷ್ಟ್ರೀಯ ವೇದಿಕೆಯನ್ನು 1847ರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಸ್ಥಾಪಿಸಲು ತೆಗೆದುಕೊಂಡ ಮುಂದೊಡಗನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮುಂದೆ 1864ರಲ್ಲಿ, ಇದನ್ನೇ ಇಂಟರ್‌ನ್ಯಾಷನಲ್ ವರ್ಕಿಂಗ್ ಮೆನ್ಸ್ ಅಸೋಸಿಯೇಷನ್(ಐಡಬ್ಲ್ಯೂಎ) ಆಗಿ ಪರಿವರ್ತಿಸಿ ವಿಶ್ವದ ಎಲ್ಲ ಎಡವಾದಿ ಸಮಾಜವಾದಿಗಳು, ಕಮ್ಯುನಿಸ್ಟರು ಮತ್ತು ಕಾರ್ಮಿಕ ವರ್ಗದ ಸಿದ್ಧಾಂತ ಹಾಗೂ ವರ್ಗ ಸಂಘರ್ಷವನ್ನು ಒಪ್ಪಿಕೊಳ್ಳುವ ಎಲ್ಲಾ ಕಾರ್ಮಿಕ ಸಂಘಗಳನ್ನು ಒಂದು ವೇದಿಕೆಯಡಿಯಲ್ಲಿ ತರಬಲ್ಲ ಮೊದಲ ಅಂತರರಾಷ್ಟ್ರೀಯವಾಗಿ ಬೆಳೆಸಿದರು. ವಿಶ್ವದೆಲ್ಲೆಡೆಗಳಿಂದ ಕಮ್ಯುನಿಸ್ಟ್ ಪಕ್ಷಗಳು ಈ ಮೊದಲ ಅಂತರರಾಷ್ಟ್ರೀಯವನ್ನು ಸೇರಿಕೊಂಡಾಗ ಬಂಡವಾಳಶಾಹಿ ವಿರೋಧಿ ಕ್ರಾಂತಿ ಅಂದು ಇನ್ನು ವಾಸ್ತವಿಕತೆ ಆಗಿರಲಿಲ್ಲ. ಆ ಕಾಲದಲ್ಲಿ, ಮುಖ್ಯವಾದ ಉದ್ದೇಶವೇ ಮಾರ್ಕ್ಸ್‌ವಾದಿ ತತ್ವಶಾಸ್ತ್ರವನ್ನು ಹರಡುವುದಾಗಿತ್ತು.

ಆದರೆ 19ನೇ ಶತಮಾನದ ಅಂತ್ಯ ಭಾಗದ ಹೊತ್ತಿಗೆ ರಷ್ಯಾದಲ್ಲಿ ವರ್ಗ ಸಂಘರ್ಷವೂ ಪ್ರಖರವಾಗಿ ಬೆಳೆಯಲು ಆರಂಭವಾಯಿತು ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಮೂಲಭೂತ ಬದಲಾವಣೆಗಳು ಆದವು. ಆಗಲೇ, ಮಾರ್ಕ್ಸ್‌ವಾದಿ ವಿಜ್ಞಾನವನ್ನು ಈ ಬದಲಾದ ಪರಿಸ್ಥಿತಿಯ ಮೇಲೆ ಅನ್ವಯಿಸಿದ ಲೆನಿನ್, ಈಗ ಬಂಡವಾಳವಾದವು ತನ್ನ ಬೆಳವಣಿಗೆಯ ಗತಿಯಲ್ಲಿ ತನ್ನ ಗರಿಷ್ಠ ಮಟ್ಟವನ್ನು ತಲುಪಿದೆ. ಏಕಸ್ವಾಮ್ಯ ವಿಪರೀತ ಬೆಳೆದು ಅದು ಸಾಮ್ರಾಜ್ಯವಾದದ ಹಂತವನ್ನು ತಲುಪಿದೆ ಎಂದು ತೋರಿಸಿಕೊಟ್ಟರು. ಬಹಳ ಹಿಂದೆ ಪ್ರಗತಿಪರ ಗುಣವನ್ನು ಹೊಂದಿದ್ದ ಮತ್ತು ಮಾರ್ಕ್ಸ್ ಕಾಲದಲ್ಲಿ ಅದರ ಕೆಲವು ಕುರುಹುಗಳನ್ನು ಮಾತ್ರ ಉಳಿಸಿಕೊಂಡಿದ್ದ ಬಂಡವಾಳವಾದವು ಈ ಹಂತದಲ್ಲಿ ಕೊಳೆತು ಹೋಗಿದೆ ಎಂಬುದನ್ನು ಲೆನಿನ್ ಸಾಬೀತುಪಡಿಸಿದರು.

ಬಂಡವಾಳವಾದದ ಈ ಹಂತವನ್ನು ಲೆನಿನ್, 'ಸಾಮ್ರಾಜ್ಯವಾದ ಮತ್ತು ಕಾರ್ಮಿಕ ಕ್ರಾಂತಿಯ ಯುಗ' ಎಂದು ಹೆಸರಿಸಿ, ಇಂದು, ಕಾರ್ಮಿಕ ವರ್ಗದ ನಾಯಕತ್ವವಿಲ್ಲದೆ, ಬೂರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯೂ ಸಹ ತನ್ನ ತಾರ್ಕಿಕ ಗಮ್ಯವನ್ನು ಮುಟ್ಟಲಾರದು ಎಂದು ತೋರಿಸಿಕೊಟ್ಟರು. 1916ರಲ್ಲಿ ಅವರು ಬರೆದ ಬಹುಮುಖ್ಯ ಕೃತಿ 'ಸಾಮ್ರಾಜ್ಯವಾದ–ಬಂಡವಾಳವಾದದ ಅತಿ ಗರಿಷ್ಠ ಹಂತ'ದಲ್ಲಿ ಈ ಕುರಿತು ವಿಶ್ಲೇಷಣೆಯನ್ನು ಕಾಣಬಹುದು. ಹೀಗೆ ಈಗ ಕ್ರಾಂತಿಯು ಕೇವಲ ಅಗತ್ಯ ಮಾತ್ರವಲ್ಲ ಅದು ಅನಿವಾರ್ಯವಾಗಿದೆ.

### ನೈಜ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಕುರಿತ ಚಿಂತನೆಗಳು

ಈ ಹಿನ್ನೆಲೆಯಲ್ಲಿ, ಎಲ್ಲಾ ಅತ್ಯಗತ್ಯ ನಿಬಂಧನೆಗಳನ್ನು ಪೂರೈಸುವ ಮತ್ತು ಎಲ್ಲಾ ಅತ್ಯಗತ್ಯ ಗುಣಲಕ್ಷಣಗಳನ್ನು ಹೊಂದಿರುವ ಒಂದು ನೈಜ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಬಗ್ಗೆ ಲೆನಿನ್ ಆಲೋಚಿಸಿದರು. ಪ್ಲೆಖನೋವ್ ಸೇರಿದಂತೆ ಎಲ್ಲಾ ಮಾರ್ಕ್ಸ್‌ವಾದಿಗಳೊಂದಿಗೆ ಲೆನಿನ್ ಒಂದು ಆರೋಗ್ಯಪೂರ್ಣ ಚರ್ಚೆ ಮತ್ತು ಅಭಿಪ್ರಾಯಗಳ ವಿನಿಮಯವನ್ನು ಆಶಿಸಿದ್ದರು. ತನ್ಮೂಲಕ ಆಲೋಚನೆಯಲ್ಲಿ ಏಕರೂಪತೆಯನ್ನು ತರುವುದು ಅವರ ಉದ್ದೇಶವಾಗಿತ್ತು. ಆರ್‌ಎಸ್‌ಡಿಎಲ್‌ಪಿಯ ಕರಡು ಕಾರ್ಯಕ್ರಮ ಎಂಬ ದಸ್ತಾವೇಜನ್ನು ತಯಾರು ಮಾಡುವಲ್ಲಿ ಪ್ಲೆಖನೋವ್ ಮತ್ತಿತರರು ಲೆನಿನ್ ಜೊತೆಯಲ್ಲಿ ತೀವ್ರತಮವಾದ ಸೈದ್ಧಾಂತಿಕ ಸಂಘರ್ಷದಲ್ಲಿ ತೊಡಗಿದ್ದರು. ಕಟ್ಟಕಡೆಯಲ್ಲಿ ಲೆನಿನ್‌ರ ನಿಲುವಿನ ನಿಖರತೆಯು ಸಾಬೀತಾಯಿತು ಮತ್ತು ಆ ಕಾರ್ಯಕ್ರಮದ ಅಂತಿಮ ಕರಡು 'ಇಸ್ಕ್ರಾ' ಪತ್ರಿಕೆಯ 21ನೇ ಸಂಚಿಕೆಯಲ್ಲಿ ಪ್ರಕಟವಾಯಿತು. 1917ರಲ್ಲಿ ಯಶಸ್ವಿಯಾದ ಮಹಾನ್ ಸೋವಿಯತ್ ಕ್ರಾಂತಿಯು ಇದೇ ಕರಡನ್ನು ಆಧರಿಸಿದೆ.

ನೈಜ ಮತ್ತು ಸರಿಯಾದ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಗಾಗಿ ಲೆನಿನ್, ಆರ್‌ಎಸ್‌ಡಿಎಲ್‌ಪಿಯ ಎರಡನೇ ಮಹಾಧಿವೇಶನವನ್ನು ನಡೆಸಲು ಕರೆ ನೀಡಿದರು. ಕಮ್ಯುನಿಸ್ಟ್ ಪಕ್ಷವೊಂದರ ಸ್ಥಾಪನೆಗೆ ಅಳವಡಿಸಿಕೊಳ್ಳಬೇಕಾದ ವಿಧಾನಕ್ರಮದ ಬಗ್ಗೆಯೇ ಲೆನಿನ್ ಮತ್ತು ಹುಸಿ ಮಾರ್ಕ್ಸ್‌ವಾದಿಗಳ ನಡುವೆ ತೀವ್ರತಮವಾದ ಸೈದ್ಧಾಂತಿಕ ಸಂಘರ್ಷಕ್ಕೆ ಇದು ವೇದಿಕೆಯನ್ನು ಸೃಷ್ಟಿಸಿತು. ಈ ಸಂಘರ್ಷದಲ್ಲೇ ಆರ್‌ಎಸ್‌ಡಿಎಲ್‌ಪಿ ಎರಡು ಬಣಗಳಾಗಿ ಹೋಳಾಯಿತು – ಒಂದು ಲೆನಿನ್ ನೇತೃತ್ವದ ಬೋಲ್ಷೆವಿಕ್ ಬಣ ಮತ್ತು ಇನ್ನೊಂದು ಸುಧಾರಣಾವಾದಿ ಮೆನ್ಷೆವಿಕ್ ಬಣ. ಪ್ಲೆಖನೋವ್, ಈ ಸಂಘರ್ಷದ ಆರಂಭದಲ್ಲಿ, ಲೆನಿನ್‌ರ ಜೊತೆಯಲ್ಲಿ ನಿಂತರೂ, ಅಂತಿಮವಾಗಿ ಅವರು ಮೆನ್ಷೆವಿಕ್ ಬಣವನ್ನು ಸೇರಿಕೊಂಡರು. 1904ರಲ್ಲಿ ಲೆನಿನ್ ತಾವು ಬರೆದ ಬಹುಮುಖ್ಯ ದಸ್ತಾವೇಜು, 'ಒನ್ ಸ್ಟೆಪ್ ಫಾರ್ವರ್ಡ್, ಟು ಸ್ಟೆಪ್ಸ್ ಬ್ಯಾಕ್'ನಲ್ಲಿ, ಮೆನ್ಷೆವಿಕ್ ಬಣವು ಹೇಗೆ ಪಕ್ಷವನ್ನು ಅರಾಜಕತಾವಾದಿಗಳು ಮತ್ತು ಅವಕಾಶವಾದಿಗಳ ಪಕ್ಷವನ್ನಾಗಿ ಹಾಳುಗೆಡವುತ್ತಿದೆ ಎಂದು ವಿವರಿಸಿದ್ದಾರೆ.

### 1905ರ ಕ್ರಾಂತಿ: ಮೆನ್ಷೆವಿಕ್ ಸುಧಾರಣಾವಾದದ ವಿರುದ್ಧ ಸಂಘರ್ಷ

1905 ಜನವರಿ 9ನ್ನು 'ಕರಾಳ ರವಿವಾರ' ಎಂದು ಇತಿಹಾಸವು ದಾಖಲಿಸಿದೆ. ಜಾರ್ ಅಡಿಯಲ್ಲಿದ್ದ ಪೊಲೀಸ್ ಅಂದು ಸಾವಿರಾರು ಕಾರ್ಮಿಕರು ನಡೆಸುತ್ತಿದ್ದ ಶಾಂತಿಪೂರ್ಣ ಮೆರವಣಿಗೆಯ ಮೇಲೆ ಬೇಕಾಬಿಟ್ಟಿ ಗುಂಡಿನ ದಾಳಿಯನ್ನು ನಡೆಸಿದ್ದರು. ಅಂದು ಸಹಸ್ರಾರು ಕಾರ್ಮಿಕರು ಅಸುನೀಗಿದ್ದರು. ಈ ರಕ್ತರಂಜಿತ ಘಟನೆಯೇ ಮುಂದೆ ರಷ್ಯನ್ ಮಹಾಕ್ರಾಂತಿಯು

9ನೇ ಪುಟಕ್ಕೆ...

# ಯುವಕನ ಆತ್ಮಹತ್ಯೆಗೆ ಎಐಡಿವೈಓ ತೀವ್ರ ಸಂತಾಪ

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಲಿಂಗನಮಠ ಗ್ರಾಮದ ಬಳಿ ಕೆಲಸಕ್ಕಾಗಿ ಅಲೆದು ಅಲೆದು ಬಳಲಿ, ವಯಸ್ಸಾದ ತಾಯಿಗೆ ತುತ್ತು ಅನ್ನ ಹಾಕಲಾಗದೇ ಮನನೊಂದು ಅಸಹಾಯಕ ಸ್ಥಿತಿಯಲ್ಲಿ ಯುವಕನೋರ್ವ ಆತ್ಮಹತ್ಯೆಗೆ ಶರಣಾಗಿರುವ ಮನಕಲಕುವ ಘಟನೆಗೆ ಎಐಡಿವೈಓ ತೀವ್ರ ವಿಷಾದ ವ್ಯಕ್ತಪಡಿಸುತ್ತದೆ.

ಆತ್ಮಹತ್ಯೆ ಮಾಡಿಕೊಂಡ ಯುವಕ ಮೂಲತಃ ಹಾವೇರಿ ಜಿಲ್ಲೆಯ ಯಲಗಚ್ಚು ಗ್ರಾಮದ ಬಸವರಾಜ ವೆಂಕಟ (30). ಒಂದೆಡೆ ಮಗ ದುಡಿಯುವ ಶಕ್ತಿ ಇದ್ದರೂ ಕೆಲಸ ಸಿಗದೆ ಅಸಹಾಯಕನಾಗಿ ಸತ್ತುಹೋದ. ಮತ್ತೊಂದೆಡೆ ತಾಯಿ ಸರ್ಕಾರಿ ಸೌಕರ್ಯ ಸಿಗದೇ ಬಳಲುತ್ತಿದ್ದಾರೆ. ಸರ್ಕಾರದ ಯೋಜನೆಗಳು ಬರಿ ಪ್ರಚಾರ ಹಾಗೂ ಜಾಹೀರಾತುಗಳಿಗೆ ಸೀಮಿತವಾಗಿದ್ದು, ಸಮಾಜದಲ್ಲಿ ತೀವ್ರ ಬಡತನದಲ್ಲಿರುವ ಜನರಿಗೆ ತಲುಪುತ್ತಿಲ್ಲ. ಇಂತಹ ಘಟನೆಗಳು ದೇಶದಾದ್ಯಂತ ಹೆಚ್ಚುತ್ತಿರುವುದು ನಿಜಕ್ಕೂ ಆತಂಕಕಾರಿ ಸಂಗತಿ. ತಮ್ಮ ಜೀವನದ ಸಮಸ್ಯೆಗಳಿಂದ ಆತ್ಮಹತ್ಯೆಗೆ ಶರಣಾಗುತ್ತಿರುವುದು ಆಳುವ ಸರ್ಕಾರಗಳಿಗೆ ನಾಚಿಕೆಗೇಡಿನ ವಿಷಯ!

ಸ್ವಾತಂತ್ರ್ಯಕ್ಕಾಗಿ ಕೆಚ್ಚೆದೆಯಿಂದ ಹೋರಾಡಿ ಹುತಾತ್ಮರಾದ ಯುವಜನರು ಹುಟ್ಟಿದ ಈ ದೇಶದಲ್ಲಿ ಇಂದು ತೀವ್ರ ಬಡತನ, ನಿರುದ್ಯೋಗ, ಹಸಿವೆಯಿಂದ ಅಸಹಾಯಕರಾಗಿ ಯುವಜನತೆ ಆತ್ಮಹತ್ಯೆಗೆ ಮೊರೆ ಹೋಗುತ್ತಿರುವುದು ನಿಜಕ್ಕೂ ನೋವಿನ ವಿಷಯ. ದೇಶದಲ್ಲಿ ಪ್ರತಿನಿತ್ಯ ನಿರುದ್ಯೋಗ, ಬಡತನ, ಹಸಿವೆಯಿಂದ ಸಾಯುತ್ತಿರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಆಳುವ ಸರ್ಕಾರಗಳು ಜನರ ತೆರಿಗೆ ಹಣವನ್ನು ಕೆಲವೇ ಕೆಲವು ಬೆರಳೆಣಿಕೆಯ ಕಾರ್ಪೊರೇಟ್ ಮನೆತನಗಳ, ಆಗರ್ಭ ಶ್ರೀಮಂತರ ಪರವಾದ ನೀತಿಗಳನ್ನು ತಂದು ಉಳ್ಳವರ ಸೇವೆ ಮಾಡುತ್ತಿದ್ದಾರೆ. ಆಳ್ವಿಕ ಸರ್ಕಾರಗಳ ಬಂಡವಾಳಶಾಹಿಪರ ನೀತಿಗಳೇ ಈ ದೇಶದ ಯುವಜನರ ಸಮಸ್ಯೆಗಳಿಗೆ ಕಾರಣವಾಗಿವೆ. ಈ ರೀತಿ ಜನ ಅಸಹಾಯಕರಾಗಿ ಸಾವಿಗೆ ಶರಣಾಗುತ್ತಿರುವುದನ್ನು ಆತ್ಮಹತ್ಯೆ ಎಂದು ಕರೆಯುವುದಕ್ಕಿಂತ ಆಳ್ವಿಕ ಸರ್ಕಾರಗಳ 'ಪ್ರಾಯೋಜಿತ ಕೊಲೆ' ಎಂದೇ ಹೇಳಬೇಕಿದೆ.

ಯಾವುದೇ ಸಮಸ್ಯೆಗೆ ಖಂಡಿತವಾಗಿ ಆತ್ಮಹತ್ಯೆ ಪರಿಹಾರವಲ್ಲ. ಹಾಗಾಗಿ ಈ ದೇಶದ ಯುವಜನರನ್ನು ಈ ಪರಿಸ್ಥಿತಿಗೆ ತಳ್ಳಿದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯುವಜನ ವಿರೋಧಿ ಹಾಗೂ ಬಂಡವಾಳಶಾಹಿ ಪರ ನೀತಿಗಳ ವಿರುದ್ಧ ಒಗ್ಗಟ್ಟಾಗಿ ಸಂಘಟಿತ ಹೋರಾಟವನ್ನು ಕಟ್ಟಲು ರಾಜ್ಯದ ಯುವಜನತೆಗೆ ಎಐಡಿವೈಓ ಕರೆ ನೀಡುತ್ತದೆ. ■

# ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಇಲ್ಲ!

# ಎಸ್‌ಯುಸಿಐ(ಸಿ) ಉಗ್ರ ಖಂಡನೆ

**ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್‌ಘೋಷ್ ಈ ಕೆಳಕಂಡ ಹೇಳಿಕೆ ನೀಡಿದ್ದಾರೆ**

"ಮುಖ್ಯ ಚುನಾವಣಾ ಆಯುಕ್ತರು, ಮತ್ತಿತರ ಚುನಾವಣಾ ಆಯುಕ್ತರು (ನಿಯುಕ್ತಿ, ಸೇವಾ ಅಧಿನಿಯಮಗಳು ಮತ್ತು ಸೇವಾವಧಿ) ಮಸೂದೆ, 2023 ಅನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು 2023ರ ಡಿಸೆಂಬರ್ 12ರಂದು ರಾಜ್ಯಸಭೆಯಲ್ಲಿ ಅತ್ಯಂತ ಅಪ್ರಜಾಸತ್ತಾತ್ಮಕವಾಗಿ ಮತ್ತು ಇಚ್ಛಾನುಸಾರವಾಗಿ ಅನುಮೋದಿಸಿರುವುದನ್ನು ನಾವು ಉಗ್ರವಾಗಿ ವಿರೋಧಿಸುತ್ತೇವೆ. ಇದುವರೆಗೂ, ಮುಖ್ಯ ಚುನಾವಣಾ ಆಯುಕ್ತರನ್ನು, ಮತ್ತಿತರ ಚುನಾವಣಾ ಆಯುಕ್ತರುಗಳನ್ನು ಆಯ್ಕೆ ಮಾಡುವ ಸಮಿತಿಯಲ್ಲಿ ಪ್ರಧಾನಿಗಳು, ವಿರೋಧ ಪಕ್ಷದ ನಾಯಕರು ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಗಳು ಇರುತ್ತಿದ್ದರು. ಇದೀಗ, ಈ ಹೊಸ ಮಸೂದೆ, ಮುಖ್ಯ ನ್ಯಾಯಮೂರ್ತಿಗಳನ್ನು ಕೈಬಿಟ್ಟು ಬದಲಿಗೆ, ಪ್ರಧಾನಿಯವರು ನೇಮಕ ಮಾಡುವ ಓರ್ವ ಸಚಿವರನ್ನು ಒಳಗೊಳ್ಳುವಂತೆ ಶಿಫಾರಸ್ಸು ಮಾಡಿದೆ. ಅಂದರೆ, ಇದು, ತನ್ನಿಷ್ಟದ ಚುನಾವಣಾ ಆಯುಕ್ತರುಗಳನ್ನು ಆಯ್ಕೆ ಮಾಡುವ ವಿಶೇಷ ಹಕ್ಕನ್ನು ಸರ್ಕಾರ ತನಗೆ ತಾನೇ ಕೊಟ್ಟುಕೊಂಡಂತೆ; ಅಲ್ಲದೆ, ಕಾಲಾನುಕ್ರಮದಲ್ಲಿ ಅನೇಕ ಕೈವಾಡಗಳಿಗೊಳಗಾಗಿರುವ ಚುನಾವಣಾ ಪ್ರಕ್ರಿಯೆಯ ಸಾಪೇಕ್ಷ ತಟಸ್ಥ ಲಕ್ಷಣಕ್ಕೆ ಈಗಾಗಲೇ ತೀವ್ರಧಕ್ಕೆಯಾಗಿದ್ದು, ಮತ್ತೀಗ ಅದು ಕೇಂದ್ರ ಸರ್ಕಾರದ ಕೈಚಳಕಕ್ಕೆ ಬಲಿಯಾಗುವ ಸಾಧ್ಯತೆ ಇದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಇತ್ತೀಚಿನ ಈ ನಡೆ, ಚುನಾವಣಾ ಆಯೋಗದಲ್ಲಿ ಅಳಿದುಳಿದಿರುವ ತಟಸ್ಥತೆಯನ್ನು ಸಹ ಹೊಸಕಿ ಹಾಕಲು ಅದು ಬಹಳವೇ ಉದ್ಯುಕ್ತವಾಗಿರುವ ಸ್ಪಷ್ಟ ಚಿಹ್ನೆಯಾಗಿದೆ. ಹೀಗೆ, ಆಯ್ಕೆ ಪ್ರಕ್ರಿಯೆಯಲ್ಲಿ ಇಲ್ಲಿಯವರೆಗೂ ಇದ್ದಂತಹ ಅಲ್ಪಸ್ವಲ್ಪ ತಪಾಸಣೆ ಮತ್ತು ಸಮತೋಲನಗಳೂ ಸಹ ಈಗ ನಾಶವಾಗುತ್ತವೆ. ಹಾಗಾಗಿ, ಇದು ಪ್ರಜಾತಂತ್ರದ ಮೂಲಭೂತ ಆಶಯಗಳ ತೀವ್ರ ಉಲ್ಲಂಘನೆಯಾಗಿದ್ದು, ದೇಶದಲ್ಲಿ ಫ್ಯಾಸೀವಾದಿ ಆಳ್ವಿಕೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿಯ ಇನ್ನೊಂದು ಹೆಜ್ಜೆಯಾಗಿದೆ.

ಈ ದುಷ್ಟ ವಿನ್ಯಾಸವನ್ನು ವಿರೋಧಿಸಿ, ಈ ಫ್ಯಾಸೀವಾದಿ ಮಸೂದೆಯನ್ನು ಬಿಜೆಪಿ ಸರ್ಕಾರ ಹಿಂತೆಗೆದುಕೊಳ್ಳುವಂತೆ ಅದರ ಮೇಲೆ ಒತ್ತಡ ಹೇರಲು, ದೇಶಾದ್ಯಂತ ಪ್ರಬಲ ಜನಾಂದೋಳನವನ್ನು ಬೆಳೆಸುವಂತೆ ನಾವು ಪ್ರಜಾತಂತ್ರ ಪ್ರೇಮಿ ಜನರಿಗೆ ಕರೆ ನೀಡುತ್ತೇವೆ. ■

# ರೈಲ್ವೆಯಲ್ಲಿ ಮಹಿಳಾ ಪ್ರಯಾಣಿಕರ ಸುರಕ್ಷತೆ ಖಾತ್ರಿಪಡಿಸಲು ಎಐಎಂಎಸ್‌ಎಸ್ ಮನವಿ

ಮಾಧ್ಯಮದಲ್ಲಿ ವರದಿಯಾದಂತೆ ಶಿವಮೊಗ್ಗ-ಯಶವಂತಪುರ ರೈಲಿನಲ್ಲಿ ಮಹಿಳೆಯೊಬ್ಬರನ್ನು ಹತ್ಯೆಮಾಡಿ, ಚಿನ್ನಾಭರಣ ದೋಚಿರುವ ದುರ್ಘಟನೆಯು, ನಾಡಿನ ನಾಗರೀಕರಿಗೆ ಅದರಲ್ಲೂ ಮಹಿಳೆಯರಿಗೆ ತೀವ್ರ ಆಘಾತವನ್ನುಂಟು ಮಾಡಿದೆ.

ಬೆಂಗಳೂರಿನ ಅರಣ್ಯ ಭವನದಲ್ಲಿ ಸ್ಟೆನೋಗ್ರಾಫರ್ ಆಗಿದ್ದ ಶ್ರೀಮತಿ ಜಿ.ಅನ್ನಪೂರ್ಣರವರು ಇಲಾಖೆಯ ಪರೀಕ್ಷೆಯ ಮೇಲ್ವಿಚಾರಣೆಗಾಗಿ ಶಿವಮೊಗ್ಗಕ್ಕೆ ಹೋಗಿ ಹಿಂದಿರುಗುವಾಗ ನಡೆದ ಈ ಘಟನೆ ರೈಲ್ವೆ ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಮಹಿಳಾ ಬೋಗಿಯಲ್ಲೇ ಈ ದುರ್ಘಟನೆ ನಡೆದಿದ್ದು, ಮಹಿಳಾ ಬೋಗಿಗಳು ಮಹಿಳೆಯರಿಗೆ ಎಷ್ಟರಮಟ್ಟಿಗೆ ಸುರಕ್ಷತೆಯನ್ನು ಖಾತ್ರಿಪಡಿಸುತ್ತವೆ ಎಂಬ ಪ್ರಶ್ನೆಗೆ ಇಲಾಖೆಯು ಉತ್ತರಿಸಬೇಕಿದೆ.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಈ ಘಟನೆಯನ್ನು ತೀವ್ರವಾಗಿ ಖಂಡಿಸಿ, ನಡೆದ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆಯನ್ನು ಖಾತ್ರಿಪಡಿಸಬೇಕು ಎಂದು ಆಗ್ರಹಿಸಿ ಎಐಎಂಎಸ್‌ಎಸ್ ಬೆಂಗಳೂರು ಜಿಲ್ಲಾ ಸಮಿತಿ ವತಿಯಿಂದ ರೈಲ್ವೆ ಸೆಕ್ಯೂರಿಟಿ ಕಮಿಷನರ್ ಶ್ರೀ ದೇವಾಂಶ್ ಶುಕ್ಲಾ ರವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಲಾಯಿತು.

### ಬೇಡಿಕೆಗಳು

1. ನಡೆದ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಖಾತ್ರಿಪಡಿಸಬೇಕು.
2. ಮಹಿಳಾ ಪ್ರಯಾಣಿಕರ ಸುರಕ್ಷತೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.
3. ರಜಾ ದಿನಗಳಲ್ಲಿ ಜನರಲ್ ಬೋಗಿಗಳನ್ನು ಹೆಚ್ಚಿಸಬೇಕು.
4. ಮಹಿಳಾ ಬೋಗಿಗಳನ್ನು ರೈಲಿನ ಮಧ್ಯಭಾಗದಲ್ಲಿ ಅಳವಡಿಸಬೇಕು. ■

# ಕೇಂದ್ರ ಬಿಜೆಪಿ ಸರ್ಕಾರದ ಅಪ್ರಜಾತಾಂತ್ರಿಕ ಪೋಸ್ಟ್ ಆಫೀಸ್ ಮಸೂದೆ 2023ಕ್ಕೆ ಎಸ್‌ಯುಸಿಐ(ಸಿ) ತೀವ್ರ ವಿರೋಧ

**ಎಸ್ ಯುಸಿಐ (ಸಿ) ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಪ್ರವಾಶ್ ಘೋಷ್‌ರವರು ಈ ಕೆಳಗಿನ ಪತ್ರಿಕಾ ಹೇಳಿಕೆ ಬಿಡುಗಡೆಗೊಳಿಸಿರುತ್ತಾರೆ**

ಕೇಂದ್ರ ಬಿಜೆಪಿ ಸರ್ಕಾರವು ಇನ್ನೊಂದು ಅಪ್ರಜಾತಾಂತ್ರಿಕ ಕರಾಳ ಕಾಯಿದೆಯನ್ನು ತಂದಿದ್ದು, ಈ ಅಂಚೆಕಚೇರಿ ಮಸೂದೆ 2023ರ ಪ್ರಕಾರ ದೇಶದ ಭದ್ರತೆ ಮತ್ತು ಸಾರ್ವಜನಿಕ ಸುರಕ್ಷತೆಯ ಕಾರಣಕ್ಕೆ ಯಾವುದೇ ಪಾರ್ಸೆಲನ್ನು ತೆರೆಯುವ, ತಡೆಹಿಡಿಯುವ ಮತ್ತು ನಾಶ ಮಾಡುವ ಅಧಿಕಾರವನ್ನು ಅಂಚೆ ಅಧಿಕಾರಿಗಳಿಗೆ ನೀಡಲಾಗಿದೆ. ಇದು ಪ್ರಜೆಗಳ ಖಾಸಗಿತನದ ಮೂಲಭೂತ ಪ್ರಜಾಸತ್ತಾತ್ಮಕ ಹಕ್ಕಿನ ಸ್ಪಷ್ಟವಾದ ಉಲ್ಲಂಘನೆಯಾಗಿದೆ.

ಈ ದುಷ್ಟ ಮಸೂದೆಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಮತ್ತು ಇದರ ಅಪಾಯವನ್ನು ಅರಿತುಕೊಂಡು, ಸರ್ಕಾರ ಹಿಂಪಡೆಯುವಂತೆ ಒತ್ತಡ ಹೇರಲು ದೇಶದ ಜನತಾಂತ್ರಿಕ ಮನಸ್ಸಿನ ಜನತೆ ಚಳವಳಿ ಕಟ್ಟಲು ಮುಂದಾಗಬೇಕು ಎಂದು ಕರೆ ನೀಡುತ್ತೇವೆ. ■

# ಲೆನಿನ್ : ಭವ್ಯ ಬದುಕಿನ ಯಶೋಗಾಥೆ

...8ನೇ ಪುಟದಿಂದ

ಸಾಕಾರವಾಗಲು ವಾಸ್ತವಿಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿತು. ಆ ಸಂದರ್ಭದಿಂದ ಮುಂದಕ್ಕೆ, ಜ಼ಾರ್ ಆಡಳಿತ ವ್ಯವಸ್ಥೆಯನ್ನು ಕಿತ್ತೊಗೆಯುವುದು, ಶಸ್ತ್ರಸಜ್ಜಿತ ದಂಗೆಯನ್ನು ಸಂಘಟಿಸಲು ತಯಾರಿ ಮಾಡುವುದು, ತಾತ್ಕಾಲಿಕ ಕ್ರಾಂತಿಕಾರಿ ಸರ್ಕಾರವನ್ನು ಸ್ಥಾಪಿಸುವುದು, ಸಂಘರ್ಷದಲ್ಲಿ ಪಾಲ್ಗೊಳ್ಳಲು ರೈತಾಪಿ ವರ್ಗವನ್ನು ಹುರಿದುಂಬಿಸುವುದು, ಎಲ್ಲಾ ಸೋಷಲ್ ಡೆಮಾಕ್ರಾಟ್‌ಗಳು ಕ್ರಾಂತಿಯಲ್ಲಿ ಪಾಲ್ಗೊಳ್ಳುವಂತೆ ಅವರನ್ನು ಪ್ರೇರೇಪಿಸುವುದು ಮತ್ತು ಎಲ್ಲಾ ಉದಾರವಾದಿ ಡೆಮಾಕ್ರಾಟ್‌ಗಳು ಉದಾತ್ತ ತಟಸ್ಥತೆಯ ನಿಲುವನ್ನು ಹೊಂದುವಂತೆ ಅವರನ್ನು ಪರಿವರ್ತಿಸುವುದು – ಇವೇ ಆ ಕ್ರಾಂತಿಯ ತತ್‌ಕ್ಷಣದ ಕೆಲಸಗಳಾದವು.

ಇಂತಹ ಉದ್ದೇಶದಿಂದಲೇ, ಲೆನಿನ್ ಆರ್‌ಎಸ್‌ಡಿಎಲ್‌ಪಿಯ ಮೂರನೇ ಮಹಾಧಿವೇಶನ ವನ್ನು ಸಂಘಟಿಸುವ ಪ್ರಸ್ತಾಪವನ್ನು ಮುಂದಿಟ್ಟರು. 1905ರ ಏಪ್ರಿಲ್‌ನಲ್ಲಿ ಆರ್‌ಎಸ್‌ಡಿಎಲ್‌ಪಿಯ ಮೂರನೇ ಮಹಾಧಿವೇಶನವು ಲಂಡನ್‌ನಲ್ಲಿ ಸಂಘಟಿತವಾಯಿತು. ಈ ಮಹಾಧಿವೇಶನದಲ್ಲಿ ಪಾಲ್ಗೊಳ್ಳುವ ಬದಲು ಮೆನ್ಷೆವಿಕ್‌ರು ತಮ್ಮದೇ ಇನ್ನೊಂದು ಅಧಿವೇಶನವನ್ನು ಸಂಘಟಿಸಲು ಮುಂದಾದರು. ಆದರೆ, ಪ್ರತಿನಿಧಿಗಳಾಗಿ ಜನರು ಬರದೇ, ಅದು ಒಂದು ಸಭೆಯಾಗಿ ಬದಲಾಯಿತು. ಈ ಮಧ್ಯೆ ಎರಡೂ ಬಣಗಳ ನಡುವೆ ಐಕ್ಯತೆಯನ್ನು ಸ್ಥಾಪಿಸುವ ಪ್ರಯತ್ನಗಳು ನಡೆದರೂ ಸಹ 1912 ರಲ್ಲಿ ಈ ಬಣಗಳ ನಡುವಿನ ಒಡಕು ಶಾಶ್ವತವಾಯಿತು ಮತ್ತು ಬೋಲ್ಷೆವಿಕ್ ಪಕ್ಷವು ಕ್ರಾಂತಿಕಾರಿ ಕಾರ್ಮಿಕ ವರ್ಗದ ವಿಭಿನ್ನವಾದ ಕ್ರಾಂತಿಕಾರಿ ಪಕ್ಷವಾಗಿ ಹೊರಹೊಮ್ಮಿತು. ಈ ಬೆಳವಣಿಗೆಯನ್ನೇ ಲೆನಿನ್, 'ಎರಡು ಮಹಾಧಿವೇಶನಗಳು, ಎರಡು ಪಕ್ಷಗಳು' ಎಂದು ಬಣ್ಣಿಸಿದ್ದು.

ಇದಾಗಿ ಎರಡು ತಿಂಗಳ ನಂತರ, ಲೆನಿನ್‌ರ ಇನ್ನೊಂದು ಪ್ರಖ್ಯಾತ ಕೃತಿ, 'ಟು ಟ್ಯಾಕ್ಟಿಕ್ಸ್ ಆಫ್ ಸೋಷಲ್ ಡೆಮಾಕ್ರಸಿ' ಪ್ರಕಟವಾಯಿತು. ತಮ್ಮ ಈ ಕೃತಿಯಲ್ಲಿ ಮೆನ್ಷೆವಿಕ್ ಮಾರ್ಗದ ಪೊಳ್ಳುತನವನ್ನು ಬಹಿರಂಗಗೊಳಿಸಿದ್ದಷ್ಟೇ ಅಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರ್ಕ್ಸ್‌ವಾದಿಗಳ ಮುಸುಕಿನಡಿಯಲ್ಲಿ ತಿರುಗಾಡುತ್ತಿರುವ ಅವರೊಳಗಿನ ಅವಕಾಶವಾದಿಗಳನ್ನು ಲೆನಿನ್ ಬಯಲಿಗೆಳೆದರು.

ಲೆನಿನ್ ಸ್ಪಷ್ಟವಾಗಿ ತೋರಿಸಿಕೊಟ್ಟಂತೆ 1905ರ ಕ್ರಾಂತಿಯ ವೈಫಲ್ಯದ ಕಾರಣಗಳು ಇಂತಿವೆ:

1) ರೈತಾಪಿ ವರ್ಗದಲ್ಲಿದ್ದ ಕ್ರಾಂತಿಕಾರಿ ಪ್ರಜ್ಞೆಯ ಕೊರತೆ ಹಾಗೂ ರೈತಾಪಿ ವರ್ಗ ಮತ್ತು ಕಾರ್ಮಿಕರ ನಡುವಿನ ಶಾಶ್ವತ ಐಕ್ಯರಂಗದ ಕೊರತೆ. ಅವರು ಬೋಲ್ಷೆವಿಕ್‌ರನ್ನು ಅವಲಂಬಿಸುವ ಬದಲು ಹೆಚ್ಚಾಗಿ ಒಂದು ಪೆಟಿ ಬೂರ್ಜ್ವಾ ದಳವಾಗಿದ್ದ 'ಸೋಷಲಿಸ್ಟ್ ರೆವಲ್ಯೂಷನರೀಸ್' ಪಕ್ಷದ ಮೇಲೆ ಅವಲಂಬಿತವಾಗಿದ್ದು.

2) ಜ಼ಾರ್ ಆಡಳಿತದ ಸೈನಿಕರಲ್ಲಿ ಕೆಲವು ವಿಭಾಗಗಳು ಕ್ರಾಂತಿಯ ಪರವಾಗಿ ಬೆಂಬಲವನ್ನು ವ್ಯಕ್ತಪಡಿಸಿದ್ದರೂ ಸಹ, ಬಹುಪಾಲು ಸೈನಿಕರು ಸೈನ್ಯದ ಮತ್ತು ಕಾರ್ಮಿಕರ ಬಂಡಾಯವನ್ನು ಹತ್ತಿಕ್ಕಲು ಕೆಲಸ ಮಾಡಿದ್ದು.

3) ಕಾರ್ಮಿಕರು ಧೀರೋದ್ದಾತ್ತವಾಗಿ ಹೋರಾಡಿ ಸೋವಿಯತ್(ಜನಸಮಿತಿ)ಗಳನ್ನು ಸ್ಥಾಪಿಸಿದರೂ ಸಹ ಅವರ ನಡುವಿನಲ್ಲಿ ಸೋದರಭಾವದ ಕೊರತೆಯಿದ್ದುದ್ದು.

ಲೆನಿನ್‌ರ ಬೋಧನೆಯಿಂದ ಬಲಿಷ್ಠವಾಗಿದ್ದ ಬೋಲ್ಷೆವಿಕ್‌ರು 1905ರ ಕ್ರಾಂತಿಯ ವೈಫಲ್ಯದಿಂದ ದಿಕ್ಕೆಡಲಿಲ್ಲ. ಕ್ರಾಂತಿಯು ನೇರವಾದ ರೇಖೆಯಂತೆ ಮುನ್ನಡೆಯುವುದಿಲ್ಲ, ಅದರ ಹಾದಿಯು ಅಂಕುಡೊಂಕಾಗಿರುತ್ತದೆ, ಮಾರ್ಕ್ಸ್‌ವಾದಿಗಳು ಪ್ರತಿಯೊಂದು ವೈಫಲ್ಯದಿಂದ ಸೂಕ್ತವಾದ ಪಾಠಗಳನ್ನು ಕಲಿತರೆ, ಸೋಲುಗಳ ಸರಣಿಯ ನಂತರ ವಿಜಯವು ಅವರದಾಗುತ್ತದೆ ಎಂದು ಲೆನಿನ್ ವಿವರಿಸಿದ್ದರು. ಲೆನಿನ್‌ರ ಈ ಬೋಧನೆಯಿಂದಾಗಿಯೇ 1917ರ ಕಾರ್ಮಿಕ ಕ್ರಾಂತಿಯು ಯಶಸ್ವಿಯಾದದ್ದು.

**(ಮುಂದುವರೆಯಲಿದೆ)** ■

# ಹಾಸ್ಟೆಲ್ ಕಾರ್ಮಿಕರ ರಾಜ್ಯ ಮಟ್ಟದ ಪ್ರತಿಭಟನೆ

ನಮ್ಮ ಕಾರ್ಮಿಕ ಮುಂದಳ ಎ.ಐ.ಯು.ಟಿ.ಯು.ಸಿ ಗೆ ಸಂಯೋಜನೆ ಗೊಂಡಿರುವ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘ(ರಿ)ದ ವತಿಯಿಂದ ಇಂದು ಜನವರಿ 19, 2024 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಾಸ್ಟೆಲ್ ಕಾರ್ಮಿಕರ ಬೃಹತ್ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿತ್ತು.

ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ವಿಶ್ವವಿದ್ಯಾನಿಲಯಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ರಾಜ್ಯದಾದ್ಯಂತ ನಡೆಯುತ್ತಿರುವ ವಿವಿಧ ವಸತಿನಿಲಯಗಳು, ವಸತಿಶಾಲೆ, ವಸತಿ ಕಾಲೇಜು ಮತ್ತು ಆಶ್ರಮ ಶಾಲೆಗಳಲ್ಲಿ ಹೊರಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ವಿವಿಧ ವಯೋಮಾನದ ಲಕ್ಷಾಂತರ ಮಕ್ಕಳ ಉತ್ತಮ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಮಕ್ಕಳಿಗೆ ಊಟ, ವಸತಿ, ಸುರಕ್ಷತೆ ಒದಗಿಸುವಲ್ಲಿ ಕಳೆದ 25 ವರ್ಷಗಳಿಂದ ಹಾಸ್ಟೆಲ್ ಹೊರಗುತ್ತಿಗೆ ಕಾರ್ಮಿಕರು ಕನಿಷ್ಠ ಕೂಲಿ ಆಧಾರದ ಮೇಲೆಯೇ ಮಹತ್ವದ ಸೇವೆ ನೀಡುತ್ತಾ ಬಂದಿದ್ದಾರೆ. ಇವರಲ್ಲಿ ಬಹುಪಾಲು ಕಾರ್ಮಿಕರು ಮಹಿಳೆಯರೇ ಇದ್ದಾರೆ. ಕಾರ್ಮಿಕ ಇಲಾಖೆಯು ಕಡ್ಡಾಯಗೊಳಿಸಿರುವ ಕನಿಷ್ಠ ವೇತನ, ಕಾನೂನುಬದ್ಧ ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜೆಗಳಿಂದ ವಂಚಿತರಾಗಿದ್ದಾರೆ. ಇಪಿಎಫ್, ಇಎಸ್‌ಐನ ಹಣ ಕೂಡಾ ಕಾರ್ಮಿಕರ ಖಾತೆಗಳಿಗೆ ಸರಿಯಾಗಿ ಜಮೆಯಾಗುತ್ತಿಲ್ಲ. ದಿನಕ್ಕೆ 8 ಗಂಟೆಗಳಿಗಿಂತ ಹೆಚ್ಚಿನ ಅವಧಿಯ ಕೆಲಸಕ್ಕೆ ಬಹುತೇಕ ಹಾಸ್ಟೆಲ್‌ಗಳಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. ಆದರೆ ಅದನ್ನು ಹೆಚ್ಚುವರಿ ದುಡಿತದ ಅವಧಿ (ಓಟಿ) ಎಂದು ಪರಿಗಣಿಸಿ ಹೆಚ್ಚುವರಿ ವೇತನ ನೀಡುತ್ತಿಲ್ಲ. ವೇತನ ಪಾವತಿ ಚೀಟಿ ಕಾರ್ಮಿಕರಿಗೆ ನೀಡುತ್ತಿಲ್ಲ. ಈಗಲೂ ಹಲವಾರು ತಿಂಗಳುಗಳ ಬಾಕಿ ವೇತನ ಸಾಮಾನ್ಯವಾಗಿದೆ.

ಐದು ವರ್ಷಕ್ಕೊಮ್ಮೆ ಕಾರ್ಮಿಕರ ವೇತನ ಪರಿಷ್ಕರಣೆಯಾಗಬೇಕು. 2021–22 ಕ್ಕೆ ಆಗಬೇಕಿದ್ದ ವೇತನ ಪರಿಷ್ಕರಣೆ ಇನ್ನೂ ಆಗಿಲ್ಲ. ಅಲ್ಲದೆ ಕಳೆದ ಬಾರಿ ಪುಡಿಗಾಸು ಹೆಚ್ಚಳ ಮಾಡಿ ಸರಕಾರ ಆದೇಶ ಮಾಡಿತ್ತು. ಅದೂ ಅವೈಜ್ಞಾನಿಕವಾಗಿತ್ತು.




ಧರಣಿಯನ್ನುದ್ದೇಶಿಸಿ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷರಾದ ಕೆ. ಸೋಮಶೇಖರ್ ಯಾದಗಿರಿ ಮಾತನಾಡುತ್ತಿರುವುದು.




ಬೃಹತ್ ಸಂಖ್ಯೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ವಸತಿ ನಿಲಯ ಕಾರ್ಮಿಕರು

ಆದ್ದರಿಂದ ಬೆಲೆ ಏರಿಕೆ, ಹಣದುಬ್ಬರಗಳನ್ನು ಪರಿಗಣಿಸಿ ವೈಜ್ಞಾನಿಕವಾಗಿ ಕನಿಷ್ಠ ವೇತನವನ್ನು ರೂ.35,950ಕ್ಕೆ ಹೆಚ್ಚಿಸಬೇಕು ಎಂಬುದು ಕಾರ್ಮಿಕರ ಒತ್ತಾಸೆಯಾಗಿದೆ. ಅವರ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ ಈ ಬೃಹತ್ ಪ್ರತಿಭಟನಾ ಧರಣಿ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ಕೆ. ಸೋಮಶೇಖರ್ ಯಾದಗಿರಿ, ಉಪಾಧ್ಯಕ್ಷರಾದ ಕೆ. ವಿ. ಭಟ್, ರಾಘವೇಂದ್ರ ಎಂ. ಜಿ, ಮಹೇಶ್ ನಾಡಗೌಡ, ಗಂಗಾಧರ್ ಬಡಿಗೇರ, ಶರಣಪ್ಪ ಜಿ ತೆಳಿಗೇರಿಕರ್, ರಾಜ್ಯ ಕಾರ್ಯದರ್ಶಿ ಮಹೇಶ್ ಚೀಕಲಪರ್ವಿ, ಖಜಾಂಚಿ ಮಲ್ಲಿಕಾರ್ಜುನ್ ಹೆಚ್.ಟಿ, ಸಹ ಕಾರ್ಯದರ್ಶಿ ಮುದ್ದುಕೃಷ್ಣ, ತಿಪ್ಪೇಸ್ವಾಮಿ, ರಾಮಲಿಂಗಪ್ಪ ಬಿ.ಎನ್, ಶ್ರೀಕಾಂತ್, ಸುರೇಶ್ ಜಿ, ಮಹಾದೇವಿ ಧರ್ಮಶೆಟ್ಟಿ ಹಾಗು ಮಂಜುಳಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಯುತ ಡಾ. ಹೆಚ್.ಸಿ ಮಹದೇವಪ್ಪ ಅವರನ್ನು ನಿಯೋಗದಲ್ಲಿ ಭೇಟಿ ಮಾಡಿ ಕಾರ್ಮಿಕರ ಕಡಿತ ಆದೇಶ ಹಿಂಪಡೆಯಲು ಮತ್ತು ಬಾಕಿ ವೇತನ ಪಾವತಿಸಲು ಕೋರಲಾಯಿತು. ಇದಕ್ಕೆ ಸ್ಪಂದಿಸಿದ ಮಾನ್ಯ ಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಮಿಕ ಸಚಿವರ ಪರವಾಗಿ ಆಗಮಿಸಿದ ಕಾರ್ಮಿಕ ಸಚಿವಾಲಯದ ಹೆಚ್ಚುವರಿ ಕಾರ್ಮಿಕ ಆಯುಕ್ತರಾದ ಶ್ರೀ ರವಿಕುಮಾರ್‌ರವರು ಮನವಿ ಪತ್ರ ಸ್ವೀಕರಿಸಿ, ವೇತನ ಚೀಟಿ, ನೇಮಕಾತಿ ಆದೇಶ ನೀಡುವುದು, ವಾರದ ರಜೆ, ಹೆಚ್ಚುವರಿ ದುಡಿತ(ಓಟಿ) ಕ್ಕೆ ಹೆಚ್ಚುವರಿ ವೇತನ ನೀಡುವುದು ಸೇರಿದಂತೆ ಶಾಸನಬದ್ಧ ಸೌಲಭ್ಯಗಳು ಮತ್ತು ಇಪಿಎಫ್ ಮತ್ತು ಇಎಸ್.ಐ ಕುರಿತು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಜಗದೀಶ್ ಅವರು, ಆದೇಶ ಪ್ರತಿ ಮತ್ತು ವೇತನ ಚೀಟಿ ನೀಡಲು ಕಟ್ಟುನಿಟ್ಟಾಗಿ ತುರ್ತು ಆದೇಶ ಹೊರಡಿಸಲಾಗುವುದು ಎಂದರು

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾದ ಶ್ರೀ ಮೈಲಾರಪ್ಪರವರು ಬೇಡಿಕೆ ಮನವಿ ಪತ್ರ ಸ್ವೀಕರಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ■

# ರಾಜ್ಯದಾದ್ಯಂತ ನಡೆದ ವಿವಿಧ ಪ್ರತಿಭಟನೆಗಳು




ಎಐಡಿಎಸ್‌ಓ-ವಿಜಯಪುರ : ಯು.ಯು.ಸಿ.ಎಂ.ಎಸ್ ಪೋರ್ಟಲ್‌ನ ಸಮಸ್ಯೆಯಿಂದಾಗಿ ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ರೂ. 1500 ಶುಲ್ಕ ವಸೂಲಿ ಮಾಡುತ್ತಿರುವುದನ್ನು ಖಂಡಿಸಿ ಪ್ರತಿಭಟನೆ



ಎಐಡಿಎಸ್‌ಓ - ತುಮಕೂರು: ತುಮಕೂರು ವಿಶ್ವ ವಿದ್ಯಾಲಯದ ವಿಜ್ಞಾನ ಕಾಲೇಜಿನ ಭೌತಶಾಸ್ತ್ರ ಸ್ನಾತಕೋತ್ತರ ಪದವಿ ವಿಭಾಗವನ್ನು ಪುನರಾರಂಭಿಸಲು ಆಗ್ರಹಿಸಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಲಾಯಿತು.




ಎಐಕೆಕೆಎಂಎಸ್ - ರಾಯಚೂರು: ಭೂ ಮಂಜೂರಾತಿ ಸಮಿತಿಯನ್ನು ರಚಿಸಬೇಕು ಹಾಗೂ ಹಕ್ಕುಪತ್ರ ವಿತರಿಸಬೇಕೆಂದು ಪ್ರತಿಭಟಿಸಿ ತಹಶೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು.




ಧಾರವಾಡ: ಸಂಗೊಳ್ಳಿ ರಾಯಣ್ಣ ನಗರದ ಶಿಂಧೆ ಬಡಾವಣೆಯ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಆಗ್ರಹಿಸಿ ಮಹಾನಗರ ಪಾಲಿಕೆಯ ಎದುರು ಪ್ರತಿಭಟನೆ - ಎಸ್‌ಯುಸಿಐ (ಸಿ)

# ದೆಹಲಿ: ಸ್ಕೀಮ್ ಕಾರ್ಯಕರ್ತರ ಬೃಹತ್ ಪ್ರತಿಭಟನೆ


# 'ನಮಗೆ ನ್ಯಾಯ ಬೇಕು, ನ್ಯಾಯ ಕೊಡಿ'

ಎಐಯುಟಿಯುಸಿಗೆ ಸಂಯೋಜನೆ ಗೊಂಡಿರುವ ಸ್ಕೀಂ ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾ (SWFI) ವತಿಯಿಂದ ದೆಹಲಿಯ ಜಂತರ್ ಮಂತರ್‌ನಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ದೇಶದ ಹಲವಾರು ರಾಜ್ಯಗಳಿಂದ ಸಾವಿರಾರು ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ಕಾರ್ಯಕರ್ತೆಯರು ತಮ್ಮ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಕಾರ್ಮಿಕ ವಿರೋಧಿ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಒತ್ತಡ ಹೇರಲು, ದೆಹಲಿಯ ಕೊರೆಯುವ ಚಳಿಯಲ್ಲೂ ಬೃಹತ್ ಸಂಖ್ಯೆಯಲ್ಲಿ, ದೇಶದ ಮೂಲೆ ಮೂಲೆಯಿಂದ ಬೃಹತ್ ಪ್ರತಿಭಟನೆಯಲ್ಲಿ ಸ್ಕೀಂ ಕಾರ್ಮಿಕರು ಭಾಗವಹಿಸಿದ್ದರು. ಈ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಹಾಗೂ ಉಪಾಧ್ಯಕ್ಷರಾದ ಕಾಮ್ರೇಡ್ ಸತ್ಯವಾನ್ ಮಾತನಾಡಿದರು. ಸ್ಕೀಂ ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾದ ಅಖಿಲ ಭಾರತ ಅಧ್ಯಕ್ಷರಾದ ಕಾ॥ ರಮಾ. ಟಿ.ಸಿ ಹಾಗೂ ಕಾರ್ಯದರ್ಶಿ ಕಾ॥ ಇಸ್ಮತ್ ಅರಾ ಖಾತುನ್ ಕೂಡ ಈ ಸಂದರ್ಭದಲ್ಲಿ ಮಾತನಾಡಿದರು.

ಅವರೆಲ್ಲರ ಭಾಷಣಗಳ ಸಾರಾಂಶ ಹೀಗಿದೆ: ವಿವಿಧ ಯೋಜನೆಗಳಲ್ಲಿ ಹಲವಾರು ದಶಕಗಳಿಂದ ತೊಡಗಿರುವ ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರ ಸಂಖ್ಯೆ ದೇಶಾದ್ಯಂತ ಒಂದು ಕೋಟಿಯಿದೆ. ಬಹುತೇಕ ಸ್ಕೀಂ ನೌಕರರು ಬಡತನ ಹಾಗೂ ಹಿಂದುಳಿದ ಕುಟುಂಬಗಳಿಂದ ಬಂದವರು. ಇದರಲ್ಲಿ ಬಹಳಷ್ಟು ಒಂಟಿ ಮಹಿಳೆಯರು, ವಿಧವೆಯರು, ವಿಚ್ಛೇದಿತರು ಅಥವಾ ಗಂಡಂದಿರಿಂದ ತ್ಯಜಿಸಲ್ಪಟ್ಟವರು ಸೇರಿದ್ದಾರೆ. ಅವರ ಸೇವೆಯಿಂದ ದೇಶದ ಕೋಟ್ಯಂತರ ಪೋಷಕರು ಹಾಗೂ ಮಕ್ಕಳಿಗೆ ಸಾಕಷ್ಟು ಉಪಯುಕ್ತವಾಗಿದೆ. ಕೊರೋನಾ ಸಂದರ್ಭದಲ್ಲಿ 'ಫ್ರಂಟ್‌ಲೈನ್ ವಾರಿಯರ್ಸ್' ಆಗಿ ಅವರು ತಮ್ಮ ಜೀವವನ್ನೇ ಪಣಕಿಟ್ಟಿದ್ದು, ಯಾರು ತಾನೆ ಮರೆಯಲು ಸಾಧ್ಯ? ಆದರೆ ಪ್ರೋತ್ಸಾಹ ಧನ, ಗೌರವ ಧನದ ಹೆಸರಲ್ಲಿ ಅತ್ಯಂತ ಕನಿಷ್ಠ ವೇತನಕ್ಕೆ ಹಗಲಿರುಳು ದುಡಿಯುತ್ತಿದ್ದಾರೆ. ಸರ್ಕಾರಿ ನೌಕರರಿಗೆ ಸಮನಾಗಿ ಎಲ್ಲಾ ಜವಾಬ್ದಾರಿಗಳನ್ನು ಈ ಸ್ಕೀಂ ನೌಕರರು ನಿಭಾಯಿಸುತ್ತಿದ್ದರೂ, ಇವರಿಗೆ ಅತ್ಯಂತ ಜುಜುಬಿ ವೇತನ ನೀಡಲಾಗುತ್ತಿದೆ. ಇಂದಿನ ದುಬಾರಿ ಬೆಲೆ ಏರಿಕೆಯ ದಿನಗಳಲ್ಲಿ ಇದನ್ನು ಒಂದು ವೇತನವೆಂದು ಕರೆಯಲು ಕೂಡ ಸಾಧ್ಯವಿಲ್ಲ. ಅವರ ಸಂಕಷ್ಟಗಳ ಬಗ್ಗೆ, ಅವರ ಬೇಡಿಕೆಗಳ ಬಗ್ಗೆ ಈ ಹಿಂದೆ ಕೂಡ ಕೇಂದ್ರ ಸರ್ಕಾರಗಳ ಗಮನಕ್ಕೆ ಸಾಕಷ್ಟು ಬಾರಿ ತಂದಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಸ್ಕೀಂ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಬೇಕೆಂದು ಸ್ಕೀಂ ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾ ಕೇಂದ್ರ ಸರ್ಕಾರವನ್ನು ಆಗ್ರಹಿಸುತ್ತದೆ.

ಭಾರತೀಯ ಕಾರ್ಮಿಕ ಸಮ್ಮೇಳನದ (ಇಂಡಿಯನ್ ಲೇಬರ್ ಕಾನ್ಫರನ್ಸ್) 45ನೇ ಹಾಗೂ 46ನೇ ಅಧಿವೇಶನದ ತ್ರಿಪಕ್ಷೀಯ ಸಮಿತಿಯು, ಸ್ಕೀಂ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಬೇಕು, ಸಮಾನ ಕೆಲಸಕ್ಕೆ ಸಮಾನ ವೇತನ ತತ್ವದ ಆಧಾರದ ಮೇಲೆ ಕನಿಷ್ಠ ವೇತನ ಖಾತ್ರಿಪಡಿಸಬೇಕು, ಇಎಸ್‌ಐ, ಪಿಎಫ್, ಪಿಂಚಣಿ, ಗ್ರಾಚ್ಯುಟಿ ಅಂತಹ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಬೇಕು ಎಂದು ನಿರ್ಣಯ ಕೂಡ ತೆಗೆದುಕೊಂಡಿದೆ. ದುರಂತವೆಂದರೆ ಈ ಎಲ್ಲಾ ನಿರ್ಣಯಗಳನ್ನು ಕಾರ್ಪೋರೇಟ್ ಮಾಲೀಕರ ಹಿತ ಕಾಪಾಡುವ ಕೇಂದ್ರ ಬಿಜೆಪಿ ಸರ್ಕಾರ ತಿಪ್ಪೆಗೆಸೆದಿದೆ. ಅಷ್ಟೇ ಅಲ್ಲ 2015ರಿಂದ ಕಾರ್ಮಿಕ ಸಮ್ಮೇಳನಗಳನ್ನೇ ಮಾಡದೆ, ಸ್ಕೀಂ ನೌಕರರನ್ನು ಒಳಗೊಂಡು ಎಲ್ಲಾ ರೀತಿಯ ಕಾರ್ಮಿಕರ ಹಿತವನ್ನು ಬಲಿಕೊಟ್ಟಿದೆ.

ಇಂತಹ ಪರಿಸ್ಥಿತಿಯಲ್ಲಿ ಆಶಾ, ಅಂಗನವಾಡಿ ಹಾಗೂ ಬಿಸಿಯೂಟ ನೌಕರರು ದೇಶಾದ್ಯಂತ ಪ್ರಬಲ ಆಂದೋಲನ ಹರಿಬಿಡುವ ಅವಶ್ಯಕತೆಯಿದೆ. ಸದಾ ಮಾಲೀಕರ ಹಿತವನ್ನು ಜಪಿಸುತ್ತಿರುವ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಸರಿಯಾದ ಪಾಠವನ್ನು ಕಲಿಸಬೇಕಿದೆ. ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಈ ಬೃಹತ್ ಪ್ರತಿಭಟನೆ ಮುಂದಿನ ಎಲ್ಲಾ ಹೋರಾಟಗಳಿಗೆ ಸ್ಫೂರ್ತಿ ತುಂಬುವುದರಲ್ಲಿ ಯಾವುದೇ ಸಂದೇಹವಿಲ್ಲ.




**ಜಂತರ್ ಮಂತರ್ - ದೆಹಲಿ : ಎಐಯುಟಿಯುಸಿ ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಕೆ. ರಾಧಾಕೃಷ್ಣ ಅವರು ಮಾತನಾಡುತ್ತಿರುವುದು.**

### ಬೇಡಿಕೆಗಳು

1. ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರು ಸೇರಿದಂತೆ ಎಲ್ಲಾ ಸ್ಕೀಂ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು, ಶಾಸನಬದ್ಧ ಸೌಲಭ್ಯಗಳಾದ ವೇತನ, ರಜೆ, ಇಎಸ್‌ಐ, ಪಿ.ಎಫ್, ವೈದ್ಯಕೀಯ ವೆಚ್ಚದ ಮರುಪಾವತಿ, ನಿವೃತ್ತಿ ನಂತರದ ಸೌಲಭ್ಯಗಳನ್ನು ನೀಡಬೇಕು.

2. ಸರ್ಕಾರಿ ನೌಕರರೆಂದು ಪರಿಗಣಿಸುವ ವರೆಗೂ, ಸ್ಕೀಂ ನೌಕರರಿಗೆ ಕನಿಷ್ಠ ವೇತನಕ್ಕೆ ಸಮನಾದ ರೂ.35,000 ನೀಡಬೇಕು ಹಾಗೂ ರಜೆ (ಗಳಿಕೆ ರಜೆ, ಸಾಂದರ್ಭಿಕ ರಜೆ, ವೈದ್ಯಕೀಯ ಹಾಗೂ ಹೆರಿಗೆ ರಜೆ, ರಾಷ್ಟ್ರೀಯ ಹಾಗೂ ಹಬ್ಬಗಳ ರಜೆ), ವೈದ್ಯಕೀಯ ಸೌಲಭ್ಯ ನೀಡಬೇಕು.

3. ನಿವೃತ್ತಿ ಹೊಂದಿದ ಸ್ಕೀಂ ನೌಕರರಿಗೆ ರೂ.5 ಲಕ್ಷ ಇಡಿಗಂಟನ್ನು ನೀಡಬೇಕು.

4. ಸ್ಕೀಂ ನೌಕರರು ಸರ್ಕಾರಿ ನೌಕರರಂತೆ ವರ್ಷಪೂರ್ತಿ ಯಾವುದೇ ಅಡೆತಡೆಯಿಲ್ಲದೆ ದುಡಿಯುವುದರಿಂದ, ಗೌರವಧನ ಹಾಗೂ ಪ್ರೋತ್ಸಾಹ ಧನದ ಹೆಸರಿನಲ್ಲಿ ಅವರ ಮೇಲಿನ ತಾರತಮ್ಯ ಹಾಗೂ ವಂಚನೆ ಕೊನೆಯಾಗಬೇಕು.

5. ದುಡಿಯುವ ಸ್ಥಳದಲ್ಲಿ ವಿಶ್ರಾಂತಿ ಕೊಠಡಿ, ಶೌಚಾಲಯ, ಶುದ್ಧ ಕುಡಿಯುವ ನೀರು, ಭದ್ರತೆಯನ್ನು ಕಡ್ಡಾಯವಾಗಿ ನೀಡಬೇಕು.

6. ಅವರವರ ಕೆಲಸಕ್ಕೆ ತಕ್ಕಂತೆ ನಿಯಮಿತವಾಗಿ ಮಳೆ ಹಾಗೂ ಚಳಿಯಿಂದ ರಕ್ಷಣೆ ಪಡೆಯುವ ವಸ್ತ್ರಗಳು, ಛತ್ರಿ, ಟಾರ್ಚ್ ಮುಂತಾದ ಸೌಲಭ್ಯ ನೀಡಬೇಕು.

7. ಬಿಸಿಯೂಟ ನೌಕರರಿಗೆ 10 ತಿಂಗಳ ವೇತನವನ್ನು ವರ್ಷಕ್ಕೊಮ್ಮೆ ನೀಡುವ ಕಾನೂನುಬಾಹಿರ ಪದ್ಧತಿಯನ್ನು ನಿಲ್ಲಿಸಿ, ತಿಂಗಳಿಗೊಮ್ಮೆ ವೇತನ ನೀಡಬೇಕು.

8. ಸೇವೆಯಲ್ಲಿರುವ ಸ್ಕೀಂ ನೌಕರರು ಮರಣ ಹೊಂದಿದ್ದಲ್ಲಿ, ಅವರ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಆ ಕೆಲಸ ನೀಡಬೇಕು.

9. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಯಾದರೆ ಎಲ್ಲಾ ಅಂಗನವಾಡಿಗಳನ್ನು ಮುಚ್ಚಲಾಗುವುದೆಂಬ ಆತಂಕವಿದೆ. ಇದಕ್ಕೆ ಅವಕಾಶ ನೀಡದೆ ಅಂಗನವಾಡಿಗಳಿಗೆ ಉತ್ತಮ ಗಾಳಿ, ಬೆಳಕಿರುವ ಕಟ್ಟಡ, ಎಲ್ಲಾ ಅಗತ್ಯ ಸೌಲಭ್ಯಗಳನ್ನು ನೀಡಬೇಕು. ಅಂಗನವಾಡಿ ನೌಕರರಿಗೆ ಉತ್ತಮ ತರಬೇತಿ ನೀಡಿ, ಅವರನ್ನು ಉನ್ನತೀಕರಿಸಬೇಕು. ಎನ್‌ಇಪಿ ಹಿಂಪಡೆಯಬೇಕು.

## ರಾಮನ ನಾಡಿನಲ್ಲಿ....

ವಾರಣಾಸಿಯ ಬಿಜೆಪಿ ಐಟಿ ಸೆಲ್‌ನ ಮೂವರು, ಬನಾರಸ್ ಹಿಂದೂ ವಿಶ್ವವಿದ್ಯಾಲಯದ (ಬಿಎಚ್‌ಯು)ಓರ್ವ 20 ವರ್ಷದ ಬಿ.ಟೆಕ್. ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಿರುವ ಆರೋಪಕ್ಕೆ ಒಳಗಾಗಿ ಬಂಧಿಸಲ್ಪಟ್ಟಿದ್ದಾರೆ. ಕಳೆದ ನವೆಂಬರ್ 1ರಂದು, ಆಕೆ ಸ್ನೇಹಿತರೊಂದಿಗೆ ಹಾಸ್ಟೆಲ್ ಹೊರಗೆ ಅಡ್ಡಾಡುತ್ತಿರುವಾಗ, ಮದ್ಯದ ನಶೆಯಲ್ಲಿದ್ದ ಈ ಮೂವರೂ ತನ್ನನ್ನು ಎಳೆದೊಯ್ದು ಲೈಂಗಿಕ ದೌರ್ಜನ್ಯ ನಡೆಸಿರುವುದಾಗಿ ಸಂತ್ರಸ್ತೆ ಹೇಳಿಕೆ ನೀಡಿದ್ದಾರೆ. ಈ ಘಟನೆಯಿಂದ ರೊಚ್ಚಿಗೆದ್ದ ಸಾವಿರಾರು ಬಿಎಚ್‌ಯು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದು, ಸಂತ್ರಸ್ತೆಗೆ ಈ ಕೂಡಲೇ ನ್ಯಾಯ ಒದಗಿಸುವಂತೆ ಮತ್ತು ಕ್ಯಾಂಪಸ್‌ನಲ್ಲಿ ಭದ್ರತೆಯನ್ನು ಹೆಚ್ಚಿಸುವಂತೆ ಆಗ್ರಹಿಸಿದ್ದಾರೆ. ಆರೋಪಿಗಳು ಪ್ರಧಾನಿ ಮೋದಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಕೇಂದ್ರ ಸಚಿವೆ ಸ್ಮೃತಿ ಇರಾನಿ ಜೊತೆಗೆ ಇರುವ ಫೋಟೋಗಳು ಬಯಲುಗೊಂಡಿವೆ. ಮಧ್ಯ ಪ್ರದೇಶದ ಚುನಾವಣಾ ಸಂದರ್ಭದಲ್ಲಿ ಈ ಆರೋಪಿಗಳು ಬಿಜೆಪಿ ಪರ ಪ್ರಚಾರ ಮಾಡುತ್ತಿರುವುದೂ ಹೊರಬಂದಿದೆ. ಜನಾಗ್ರಹದ ಹಿನ್ನೆಲೆಯಲ್ಲಿ ಇವರನ್ನು 2 ತಿಂಗಳುಗಳ ನಂತರ ಬಂಧಿಸಿದ್ದು, 14 ದಿನ ಜೈಲ್ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಮೂವರೂ ಬಿಜೆಪಿ ಕಾರ್ಯಕರ್ತರಾಗಿರುವ ಕಾರಣದಿಂದಲೇ, ಅವರನ್ನು ಪೊಲೀಸರು ಬಂಧಿಸಲಿಲ್ಲವೇನೋ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. (ಆನಂದ್ ಬಾಜ಼ಾರ್ ಪತ್ರಿಕಾ–02.01.24)

ದುಡಿಯುವ ಜನರ ಹೋರಾಟದ ದನಿ
ಕಾರ್ಮಿಕ ದೃಷ್ಟಿಕೋನ
ಪತ್ರಿಕೆಗೆ ಚಂದಾದಾರರಾಗಿ - ವಾರ್ಷಿಕ ಚಂದಾ ರೂ.90/-

## 5 ಟ್ರಿಲಿಯನ್ ಆರ್ಥಿಕತೆ – ಬೆಲೆ ತೆರುವವರು ಯಾರು?

1. ಕಳೆದ 9 ವರ್ಷಗಳಲ್ಲಿ, ಗೋಧಿಯ ಬೆಲೆ ಶೇ.53 ಏರಿಕೆಯಾಗಿದ್ದರೆ, ಧಾನ್ಯಗಳ ಬೆಲೆಗಳು ಶೇ.56ರಷ್ಟು, ಹಣ್ಣು ಹಾಗೂ ತರಕಾರಿಗಳ ಬೆಲೆ ಶೇ.43ರಷ್ಟು, ಹಾಲಿನ ಬೆಲೆ ಶೇ.42ರಷ್ಟು, ಮೊಟ್ಟೆಯ ಬೆಲೆ ಶೇ.45ರಷ್ಟು, ಗೋಧಿ ಹಿಟ್ಟಿನ ಬೆಲೆ ಶೇ.50ರಷ್ಟು, ಅಕ್ಕಿಯ ಬೆಲೆ ಶೇ.43ರಷ್ಟು, ಬೇಳೆಗಳ ಬೆಲೆ ಶೇ 65ರಷ್ಟು, ಸಾಸಿವೆ ಎಣ್ಣೆಯ ಬೆಲೆ ಶೇ.46ರಷ್ಟು, ಶೇಂಗಾ ಎಣ್ಣೆಯ ಬೆಲೆ ಶೇ.57ರಷ್ಟು, ಸೋಯಾ ಎಣ್ಣೆಯ ಬೆಲೆ ಶೇ.49ರಷ್ಟು, ಸೂರ್ಯಕಾಂತಿ ಎಣ್ಣೆಯ ಬೆಲೆ ಶೇ.41ರಷ್ಟು, ತಾಳೆ ಎಣ್ಣೆ ಬೆಲೆ ಶೇ 49ರಷ್ಟು, ವನಸ್ಪತಿ ಬೆಲೆ ಶೇ.70ರಷ್ಟು, ತರಕಾರಿ ಶೇ.45ರಷ್ಟು ಏರಿಕೆಯನ್ನು ಕಂಡಿವೆ.

2. 74 ಕೋಟಿ ಜನರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

3. 2016–2021 ಈ ಅವಧಿಯಲ್ಲಿ, ಕೆಳ ಹಂತದಲ್ಲಿರುವ 20 ಕ್ವಿಂಟೇಲ್‌ಗಳ (ಕ್ವಿಂಟೇಲ್ ಅಂದರೆ ಒಂದೇ ಶ್ರೇಣಿಯ ದತ್ತಾಂಶ ಹೊಂದಿರುವ ಜನತೆಯ ಸಮಾನ ಗುಂಪಿನ 5ನೇ ಒಂದು ಭಾಗ) ಆದಾಯ ಶೇ.20ರಷ್ಟು ಕಡಿಮೆ ಆಗಿದೆ. ಆದರೆ ಮೇಲಿನ ಹಂತದ 20 ಕ್ವಿಂಟೇಲ್‌ಗಳ ಆದಾಯ ಶೇ.20ರಷ್ಟು ಹೆಚ್ಚಿದೆ.

4. ಸಾರ್ವಜನಿಕ ಉಳಿತಾಯ ಸಾಕಷ್ಟು ಕಡಿಮೆಯಾಗಿದೆ. ದುಬಾರಿ ಬೆಲೆ ಏರಿಕೆಯಿಂದ ಉಳಿತಾಯ ಮಾಡಲು ಜನರ ಆದಾಯದಲ್ಲಿ ಏನೂ ಮಿಕ್ಕುತ್ತಿಲ್ಲ.

5. ಹಣದುಬ್ಬರಕ್ಕೆ ಹೊಂದಿಸಿದ್ದಲ್ಲಿ ಬಡ್ಡಿದರ ಶೇ.6.7 ರಿಂದ ಶೇ.0.23 ಕ್ಕೆ ಇಳಿದಿದೆ.

6. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ವರದಿಯ ಪ್ರಕಾರ 2027–28ರಷ್ಟೊತ್ತಿಗೆ ದೇಶದ ಸಾಲ ಜಿಡಿಪಿಯ ಶೇ.100ಕ್ಕಿಂತ ಹೆಚ್ಚಾಗಬಹುದು.

7. ಕಳೆದ 9 ವರ್ಷಗಳಲ್ಲಿ ದೇಶದ ಸಾಲ 55 ಲಕ್ಷಕೋಟಿಯಿಂದ 205 ಲಕ್ಷಕೋಟಿಗೆ ಏರಿದೆ.

8. ಕಪ್ಪು ಹಣ ಕಡಿಮೆಯಾಗಿದ್ದಿದ್ದರೆ, ತೆರಿಗೆ ಹಾಗೂ ಜಿಡಿಪಿ ಅನುಪಾತ ಹೆಚ್ಚಬೇಕಿತ್ತು. ಆದರೆ ಅದು ಕಳೆದ 10 ವರ್ಷಗಳಲ್ಲಿ ಶೇ.16–17 ರಷ್ಟರಲ್ಲೇ ಇದೆ. ಜಿಡಿಪಿಯಲ್ಲಿ ನೇರ ತೆರಿಗೆ ಭಾಗ ಶೇ5–6 ರಲ್ಲೇ ಹೊಯ್ದಾಡುತ್ತಿದೆ. ಕಪ್ಪು ಹಣಕ್ಕೆ ಕಡಿವಾಣ ಹಾಕಿದ್ದಿದ್ದರೆ, ನೇರ ತೆರಿಗೆಯ ಭಾಗವು ಸಾಂಪ್ರದಾಯಿಕವೆಂದರೂ ಜಿಡಿಪಿಯ ಶೇ.12ರಷ್ಟು ಆಗುತ್ತಿತ್ತು.

9. ದಿನವೂ ಹಲವು ಭ್ರಷ್ಟಾಚಾರ ಪ್ರಕರಣಗಳು ಬಯಲಿಗೆ ಬರುತ್ತಿವೆ. ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ ಲಕ್ಷಾಂತರ ಜನರದ್ದು ಒಂದೇ ಮೊಬೈಲ್ ಸಂಖ್ಯೆಗೆ ಲಿಂಕ್‌ಆಗಿದೆ ಎಂದು ಸಿಎಜಿ ಅವರು ಇತ್ತೀಚೆಗೆ ಬಹಿರಂಗಪಡಿಸಿದ್ದಾರೆ. ರಸ್ತೆಗಳ ನಿರ್ಮಾಣದ ವೆಚ್ಚವು ಕೂಡ ಸಾಕಷ್ಟು ಹೆಚ್ಚಾಗಿದೆ ಎಂದು ಸಿಎಜಿ ಅವರು ತಿಳಿಸಿದ್ದಾರೆ. ನಕಲಿ ಆಧಾರ್‌ಕಾರ್ಡ್ ಹಾಗೂ ಇತರೆಗುರುತಿನ ಚೀಟಿಗಳ ಪ್ರಕರಣಗಳು ಪತ್ರಿಕೆಗಳಲ್ಲಿ ವರದಿಯಾಗಿವೆ.

10. ನಗರ ಪ್ರದೇಶದಲ್ಲಿ ನಿರುದ್ಯೋಗವು ಶೇ.17.3 ರಷ್ಟಿದೆ.

(ಮೂಲ– ವಿವಿಧ ವಾರ್ತಾ ಮಾಧ್ಯಮಗಳು.)

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ದೇಶವ್ಯಾಪಿ ಸಹಿ ಸಂಗ್ರಹ ಚಳುವಳಿ - ಎಸ್‌ಯುಸಿಐ(ಸಿ)




ದಾವಣಗೆರೆ




ಕುರುಗೋಡು – ಬಳ್ಳಾರಿ




ಸರಗೂರು – ಮೈಸೂರು

## ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ

# ಬೆಂಗಳೂರು ಚಲೋ

**6 ಮಾರ್ಚ್, 2024** ಬೆಳಗ್ಗೆ 11 ಕ್ಕೆ, ಫ್ರೀಡಂ ಪಾರ್ಕ್

**ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ!**






ಫ್ರೀಡಂ ಪಾರ್ಕ್- ಬೆಂಗಳೂರು : ಗೌರವ ಧನ ಹೆಚ್ಚಳ ಹಾಗೂ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಂಗನವಾಡಿ ನೌಕರರ ರಾಜ್ಯ ಮಟ್ಟದ ಪ್ರತಿಭಟನೆ. ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಎಂ. ಉಮಾದೇವಿ ಮಾತನಾಡುತ್ತಿರುವುದು.




ಬೆಂಗಳೂರು : ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘ (ಕೆಇಸಿಎ) 6ನೇ ಫೆಬ್ರವರಿ 2024 - ಅಖಿಲ ಭಾರತ ಪ್ರತಿಭಟನಾ ದಿನದ ಅಂಗವಾಗಿ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನಾ ಪ್ರದರ್ಶನ




ಎಐಕೆಕೆಎಂಎಸ್ - ಬಳ್ಳಾರಿ : ಮೆಣಸಿಣಕಾಯಿ ಬೆಳೆಗೆ ಸೂಕ್ತ ಬೆಂಬಲ ಬೆಲೆಗಾಗಿ ಮತ್ತು ಕೋಲ್ಡ್ ಸ್ಟೋರೇಜ್‌ನ ಶುಲ್ಕ ಹೆಚ್ಚಳ ಹಿಂತೆಗೆದುಕೊಳ್ಳಲು ಆಗ್ರಹಿಸಿ ಪ್ರತಿಭಟನೆ

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA